ಈಶಾನ್ಯ ಭಾರತ ಕವಿತೆಗಳು

ಡಾ. ಎಂ. ವೆಂಕಟಸ್ವಾಮಿ





ಈಶಾನ್ಯ ಭಾರತದ ಕವಿತೆಗಳು

ಡಾ: ಎಂ. ವೆಂಕಟಸ್ವಾಮಿ

ಪ್ರೇಜಸ ಪ್ರಕಾಶನ
ಬೆಂಗಳೂರು

"ESHANYA BHARATADA KAVITEGALU" - A Poems written by I
M. Venkataswamy, # 519, 39th Block, Type-V, CPWD Qtrs, HSR Layo
Bangalore - 560102, Ph: 080-22584525, E-mail: alemarimvs@gmail.co
Published by **Prejasa Prakasana,** # S-123, Deepti Apartments, F-2, 1st Cro
Kirloskar Colony, Basaveswaranagar, Bangalore-560079, Mob: 94489 49737

Page : 113 Rs : 70

ಪ್ರಥಮ ಮುದ್ರಣ : ೨೦೧೧
ಬಳಸಿದ ಕಾಗದ : 80 GSM Maplitho
1/8 Demmy
ಪುಟಗಳು : ೧೧೩
ಪ್ರತಿಗಳು : ೧೦೦೦
ಬೆಲೆ : ರೂ. ೭೦/-

ಸಲಹಾ ಮಂಡಳಿ : ಕಾ ತ ಚಿಕ್ಕಣ್ಣ
ಎಸ್ ಜಿ ಸಿದ್ಧರಾಮಯ್ಯ
ರವಿ ರ ಅಂಚಲ್
ಎಲ್ ಪಿ ಪುಟ್ಟಣ್ಣಯ್ಯ
ಗೋಪಾಲಕೃಷ್ಣ

ಮುಖಪುಟ ವಿನ್ಯಾಸ : ವಿ.ರಾಜು ಚಾಮಲಾಪುರ

ಅಕ್ಷರ ಜೋಡಣೆ : ಕ್ರಿಯೇಟಿವ್ ಗ್ರಾಫಿಕ್ಸ್

ಮುದ್ರಣ :-
ಸತ್ಯಶ್ರೀ ಪ್ರಿಂಟರ್ಸ್
ಕಸ್ತೂರಿ ಬಾ ನಗರ
ಬೆಂಗಳೂರು- 26

ಮುನ್ನುಡಿ

ನಮ್ಮ ದೇಶಕ್ಕೆ ಸ್ವತಂತ್ರ ಬಂದು ೬೪ ವರ್ಷಗಳಾದರೂ ಈಶಾನ್ಯ ಭಾರತ ಇಂದಿಗೂ ದೇಶದಿಂದ ಪ್ರತ್ಯೇಕಗೊಂಡ ಒಂದು ತುಂಡು ನೆಲದಂತೆ ಭೌಗೋಳಿಕ ಮತ್ತು ಭಾವನಾತ್ಮಕವಾಗಿ ಪರಕೀಯವಾಗಿಯೇ ನರಳುತ್ತಿದೆ. ಈ ಭಾಗವನ್ನು ದಕ್ಷಿಣ–ಪೂರ್ವ ಏಷ್ಯಾದ ಸಾಂಸ್ಕೃತಿಕ ಪಡಸಾಲೆ ಎನ್ನಲಾಗಿದೆ. ಒಟ್ಟು ೨,೬೦,೦೦೦ ಚದರ ಕಿ.ಮಿ. ವಿಸ್ತೀರ್ಣ ಇರುವ ಈ ವಲಯದಲ್ಲಿ ೮ ರಾಜ್ಯ ಗಳಿದ್ದು ಅವುಗಳನ್ನು ಸಪ್ತ ಸಹೋದರಿಯರು ಮತ್ತು ಒಬ್ಬ ಪುಟ್ಟ ತಮ್ಮ (ಸಿಕ್ಕಿಂ) ಎನ್ನುತ್ತಾರೆ. ಈ ವಲಯದಲ್ಲಿ ಸುಮಾರು ೨೨೦ ಪ್ರಮುಖ ಬುಡಕಟ್ಟು ಮತ್ತು ಉಪ ಬುಡಕಟ್ಟು ಜನಾಂಗಗಳಿದ್ದು ಎಲ್ಲವೂ ತಮ್ಮದೇ ಬುಡಕಟ್ಟು ಭಾಷೆಗಳನ್ನು ಹೊಂದಿವೆ. ಈಶಾನ್ಯ ಭಾರತ ಭೌಗೋಳಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕವಾಗಿ ಬಹಳ ವೈವಿಧ್ಯತೆಯನ್ನು ಹೊಂದಿದ್ದು, ಹಿಂಡೋ–ಮಂಗೋಲಾಯ್ಡ್ ಜನಾಂಗ ಗಳು ನೂರಾರು ವರ್ಷಗಳಿಂದ ಸಂಕರಗೊಂಡಿವೆ. ನೈಸರ್ಗಿಕ ಮತ್ತು ರಮಣೀಯವಾದ ಈ ಪ್ರದೇಶ ಹಿಮಾಲಯ ಪರ್ವತ ಶ್ರೇಣಿಗಳು ಮತ್ತು ದಟ್ಟ ಕಾಡುಗಳಿಂದ ಕಂಗೊಳಿಸುತ್ತಿದ್ದು, ಮಧ್ಯ ಭಾಗದಲ್ಲಿ ಗಂಡು ನದಿ ಬ್ರಹ್ಮಪುತ್ರಾ ಈಶಾನ್ಯ ಭಾರತವನ್ನು ಇಬ್ಭಾಗವಾಗಿ ಸೀಳಿಕೊಂಡು ಹರಿಯುತ್ತಿದೆ.

ಈ ವಲಯದಲ್ಲಿ ಮೂಲವಾಗಿ ಕಾಕಸರು ಮತ್ತು ಮಂಗೋಲಾಯ್ಡ್ ಎಂಬ ಎರಡು ಜನಾಂಗಗಳು ಇದ್ದವು. ಕಾಕಸರ ಜನಾಂಗಕಕ್ಕೆ ಸೇರಿದ ಇಂಡಿಡ್‌ನಲ್ಲಿ ಎರಡು ವಿಧ, ಹಿಂದೂ ಮತ್ತು ಮುಸ್ಲಿಮ್ ಜನಾಂಗಗಳು. ಅದಕ್ಕೂ ಮುಂಚೆ ಆಸ್ಟ್ರೋಲಾಯ್ಡ್ ಜನರು ಇಲ್ಲಿ ನೆಲೆಸಿದ್ದರು. ಬಹುಶಃ ಮಂಗೋಲಾಯ್ಡ್ ಜನಾಂಗಗಳ ವಲಸೆ ಹೆಚ್ಚಾದ ಕಾರಣ ಆಸ್ಟ್ರೋಲಾಯ್ಡ್ ಚಿಹ್ನೆಗಳಿರುವ ಜನಾಂಗಗಳನ್ನು ಮಂಗೋಲಾಯ್ಡ್ ಜನಾಂಗಗಳು ಪೂರ್ಣವಾಗಿ ಲೀನವಾಗಿಸಿಕೊಂಡವು. ಆರ್ಯರ ವೇದಗಳ ಕಾಲದಲ್ಲಿ ಇವರನ್ನು ನಿಶಾದರು ಮತ್ತು ಸಬಾರರು ಎಂದು ಗುರುತಿಸಲಾಗಿದೆ.

ಆಗ್ನೇಯ ಚೀನಾದ ಹೋಹಾಂಗ್ ಮತ್ತು ಯಾಂಗ್–ಟೆಝ್ ಕಿಯಾಂಗ್ ನದಿಗಳ ಉಗಮಸ್ಥಾನ ಪ್ರದೇಶಗಳು ಮಂಗೋಲಾಯ್ಡ್‌ರ ಮೂಲ ಸ್ಥಳ ಎಂದು ಗುರುತಿಸಲಾಗಿದೆ. ಪ್ರಾಗೈತಿಹಾಸಿಕ ಕಾಲದಿಂದಲೇ ಗುಂಪು ಗುಂಪುಗಳಾಗಿ ಅವರು ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ವಲಸೆ ಬಂದಿದ್ದಾರೆ. ಮೊದಲಿಗೆ ಬರ್ಮಾ ಕಡೆಗೆ ಬಂದು ಅಲ್ಲಿಂದ ಇನ್ನಷ್ಟು ಗುಂಪುಗಳಾಗಿ ಹೊಡೆದು ಕೊಂಡು ಪ್ರತ್ಯೇಕಗೊಂಡಿದ್ದಾರೆ. ಒಂದು ಗುಂಪು ಬರ್ಮಾ–ಥಾಯ್‌ಲ್ಯಾಂಡ್ ತಳಭಾಗಕ್ಕೆ, ಇನ್ನೊಂದು ದಕ್ಷಿಣ–ಪೂರ್ವ ಏಷ್ಯಾದ ಕಡೆಗೆ, ಮತ್ತೊಂದು ಗುಂಪು ಬ್ರಹ್ಮಪುತ್ರಾ ಕಣಿವೆಯ ಕಡೆಗೆ ಬಂದಿವೆ. ಅಲ್ಲಿಂದ ಇನ್ನೊಂದು ಗುಂಪು

ನೇಪಾಳದ ಕಡೆಗೆ ಸಾಗಿದೆ. ಈ ವಲಸೆ ನೂರಾರು ವರುಷಗಳ ಕಾ
ನಿರಂತರವಾಗಿ ನಡೆದಿದೆ.

ಕ್ರಿ.ಶ.೧೨೨೮ರ ಸುಮಾರಿಗೆ ಬರ್ಮಾ ಕಡೆಯಿಂದ ಆಹೋಮ್ಸ್ ಜನರ ಇರ್‌ವಾಡಿ-ಚಿಂದ್‌ವಿನ್ ಕಣಿವೆಗಳ ಮೂಲಕ ಈಶಾನ್ಯ ವಲಯಕ್ಕೆ ಬಂದ ಇಲ್ಲಿನ ಜನಾಂಗಗಳ ಮೇಲೆ ದಾಳಿ ಮಾಡುವುದರ ಮೂಲಕ ಇಲ್ಲಿನ ಚರಿ ನಿಖರವಾಗಿ ತೆರೆದುಕೊಳ್ಳುತ್ತದೆ. ಅದಕ್ಕೂ ಮುಂಚೆ ಚೀನಿ ಚರಿತ್ರೆಕಾರರು ಇಲ್ಲಿ ಜನರ ಬಗ್ಗೆ ದಾಖಲಿಸಿರುವುದು ಚರಿತ್ರೆಯಲ್ಲಿ ಕಾಣಿಸುತ್ತದೆ. ಹಿಂದು ಪುರಾಣಗಳು ಮತ್ತು ಮಹಾಭಾರತದಲ್ಲಿ ಇದೇ ಜನಾಂಗಗಳ ಬಗ್ಗೆ ಉಲ್ಲೇಖಗಳ ದೊರಕುತ್ತವೆ. ನಾಗಾಲ್ಯಾಂಡಿನಲ್ಲಿರುವ ದಿಮಾಪುರ ಮಹಾಭಾರತದ ಭೀಮನ ವರಿಸಿದ ಇಡಿಂಭಳ ಊರು ಇಡಿಂಭಾಪುರವಾಗಿ, ಅರ್ಜುನನು ವರಿಸಿದ ಸುಭದ್ರಳ ತವರು ಮಣಿಪುರ ಎಂಬ ಉಲ್ಲೇಖಗಳು ಇವೆ.

* * *

ಇಂಡೋ-ಮಂಗೋಲಾಯ್ಡ್ ಗುಂಪಿಗೆ ಸೇರಿದ ಬೋಡೋ ಗುಂಪಿನ ಭಾಷೆಗಳನ್ನು ಮಾತನಾಡುವವರು ಬ್ರಹ್ಮಪುತ್ರ ಕಣಿವೆಯಿಂದ ಪೂರ್ವ ಮತ್ತು ಪಶ್ಚಿಮ ಬಂಗಾಳದವರೆಗೂ ಹರಡಿದ್ದರು ಎನ್ನಲಾಗಿದೆ. ಪ್ರಸ್ತುತ ಅವರನ್ನು ಬೋಡೊ, ಕಛಾರಿ, ಘಾರೋ, ಹಾಜೋಂಗ್, ತ್ರಿಪುರಿಗಳೆಂದು ಕರೆಯಲಾಗುತ್ತದೆ ಈ ಮಂಗೋಲಾಯ್ಡ್ ಗುಂಪುಗಳು ವಿವಿಧ ಪರಿಸರಗಳಲ್ಲಿ ನೆಲೆಯೂರಿ ಹಲವಾರು ಸಣ್ಣ ಸಣ್ಣ ಹೆಸರಿನ ಗುಂಪುಗಳಾಗಿ ಈಶಾನ್ಯ ವಲಯದಲ್ಲಿ ಇಂದು ಅಸ್ತಿತ್ವದಲ್ಲಿವೆ.

ಈಶಾನ್ಯ ಭಾರತದ ಇಂಡೋ-ಮಂಗೋಲಾಯ್ಡ್‌ರು ಸೈನೊ-ಟಿಬೆಟಿಯನ್ ಗುಂಪಿನ ಭಾಷೆಗಳನ್ನು ಮಾತನಾಡುತ್ತಾರೆ. ಇದನ್ನು ಮುಖ್ಯವಾಗಿ ಎರಡು ಗುಂಪುಗಳಾಗಿ ವಿಭಾಗಿಸಲಾಗಿದೆ. ಟಿಬೆಟೋ-ಬರ್ಮನ್ ಮತ್ತು ಸಿಯಾಮೀಸ್-ಚೈನೀಸ್. ಸಿಯಾಮೀಸ್-ಚೈನೀಸ್ ಗುಂಪಿನಲ್ಲಿ ಸಿಯಾಮೀಸ್ ಮತ್ತು ಪ್ರಾದೇಶಿಕ ಭಾಷೆಗಳು ದೇವಿ ಅಥವಾ ಥಾಯ್ ಗುಂಪಿಗೆ ಸೇರಿವೆ. ಈಶಾನ್ಯದಲ್ಲಿ ಮಾತನಾಡುವ ಆಹೋಮ್, ಕಾಮ್ತಿ, ಕಾಮ್ಯಾಂಗ್, ಆಯಿಟನ್, ಫೇಕಿಯಲ್, ತುರಂಗ್ ಇತ್ಯಾದಿ ಭಾಷೆಗಳು ಥಾಯ್ ಭಾಷೆಯ ಉಪ ಭಾಷೆಗಳಾಗಿವೆ.

ಇನ್ನೊಂದು, ಇಂಡೋ-ಮಂಗೋಲಾಯ್ಡ್ ಗುಂಪಿನ ಭಾಷೆಗಳು (ಕಾಶಿ ಮತ್ತು ಪ್ನರ್ ಭಾಷೆಗಳನ್ನು ಬಿಟ್ಟು) ಟಿಬೆಟೊ-ಬರ್ಮನ್ ಗುಂಪಿಗೆ ಸೇರಿವೆ. ಇವು ಉತ್ತರ ಅಸ್ಸಾಂನಲ್ಲಿ ಮಾತನಾಡುವ ಭಾಷೆಗಳು. ಉದಾ:ಅರುಣಾಚಲ ಪ್ರದೇಶದ ಉಪಬುಡಕಟ್ಟುಗಳು ಮತ್ತು ಅಸ್ಸಾಂನ ಕೆಲವು ಭಾಗಗಳಲ್ಲಿ ಅಕಾ, ಆದಿ, ಮಿಸ್ಸಿಂಗ್, ನಿಶೆ, ಮಿಸ್ಮೀ ಇತ್ಯಾದಿ ಜನರು ಮಾತನಾಡುವ ಭಾಷೆಗಳು. ಇನ್ನೊಂದು ಟಿಬೆಟೊ-ಬರ್ಮನ್ ಗುಂಪಿನಲ್ಲಿ ಅಸ್ಸಾಂ-ಬರ್ಮಾ ಭಾಷೆಗಳು ಸೃಷ್ಟಿಯಾಗಿವೆ. ಇವು ಉತ್ತರ

ಮತ್ತು ಪೂರ್ವ ಬಂಗಾಳ, ಅಸ್ಸಾಂ ಮತ್ತು ಬರ್ಮಾ ಪ್ರದೇಶಗಳಲ್ಲಿ ಮಾತನಾಡುವ ಭಾಷೆಗಳು: ೧)ಬೋಡೋ, ಮೆಕ್, ರಾಭಾ, ಘಾರೋ, ಕಛಾರಿ, ತಿಪ್ರಿ ಇನ್ನಿತರ ಉಪಭಾಷೆಗಳು. ೨)ನಾಗಾ ಬುಡಕಟ್ಟು ಜನರು ಮಾತನಾಡುವ ಆಓ, ಅಂಗಾಮಿ, ಸೆಮಾ, ತಂಕೂಲ್, ಸಂಗ್ಟಮ್, ಕೊನ್ಯಾಕ್, ಲೋಥಾ, ಮಾಹೊ ಮತ್ತು ಕುಬ್ಯೈ ಇತ್ಯಾದಿ. ೩)ಕುಕಿ, ಚಿನ್ ಬುಡಕಟ್ಟು ಜನರು ಮಾತನಾಡುವ ಮಣಿಪುರಿ, ತ್ರಿಪುರ ಮತ್ತು ಮಿಜೋರಾಂ ಭಾಷೆಗಳು.

ಮೇಘಾಲಯದಲ್ಲಿ ಮಾತನಾಡುವ ಕಾಶಿ ಮತ್ತು ಅದರ ಉಪಭಾಷೆಗಳು ಮಾತ್ರ ಈಶಾನ್ಯ ಭಾರತದಲ್ಲಿ ಮಾತನಾಡುವ ಭಾಷೆಗಳಲ್ಲಿ ಭಿನ್ನವಾದವು. ಅವರು ಮೊನ್-ಕೇಮಿರ್ ಗುಂಪಿನ ಭಾಷೆಯನ್ನು ಮಾತನಾಡುತ್ತಾರೆ. ಇವು ಆಸ್ಟ್ರೋ-ಏಷಿಯಾಟಿಕ್ ಗುಂಪಿಗೆ ಸೇರಿದ ಭಾಷೆಗಳಾಗಿವೆ. ವಿಶೇಷವೆಂದರೆ ಈ ಭಾಷೆ ಮಾತನಾಡುವ ಜನರ ಸುತ್ತಲೂ ಟಿಬೆಟೋ-ಬರ್ಮನ್ ಭಾಷೆಗಳು ಸುತ್ತುವರಿದಿವೆ. ಇಲ್ಲಿನ ಯಾವ ಭಾಷೆಗೂ ಸ್ಕ್ರಿಪ್ಟ್ ಇಲ್ಲ. ೧೭ನೇ ಶತಮಾನದಲ್ಲಿ ಇಲ್ಲಿಗೆ ಆಗಮಿಸಿದ ಕೆಲವು ಮಿಷಿನರಿಗಳ ಭಾಷಾ ತಜ್ಞರು ಕೆಲವು ಮುಖ್ಯವಾದ ಬುಡಕಟ್ಟು ಭಾಷೆಗಳಿಗೆ ಇಂಗ್ಲಿಷ್ /ರೋಮನ್ ಲಿಪಿಯನ್ನು ಅಳವಡಿಸಿದರು.

* * *

೧೯೮೮ ಆಗಸ್ಟ್ ರಿಂದ ೧೯೯೨ರ ಜನವರಿ ಮತ್ತು ೨೦೦೭ರ ಜುಲೈನಿಂದ ೨೦೦೯ ನವೆಂಬರ್‌ತನಕ ನಾಗಾಲ್ಯಾಂಡ್ ಮತ್ತು ಮೇಘಾಲಯ ರಾಜ್ಯಗಳಲ್ಲಿ ಕೆಲಸ ನಿರ್ವಹಿಸಿದ ನಾನು ಈಶಾನ್ಯ ಭಾರತದ ಹಲವಾರು ಸ್ಥಳ ಗಳನ್ನು ಸುತ್ತಿನೋಡಿ, ಸಾಕಷ್ಟು ಅನುಭವಗಳನ್ನು ಪಡೆದುಕೊಂಡು ಬೆಂಗಳೂರಿಗೆ ವಾಪಸ್ ಬಂದೆ. ಬರುವಾಗ ಈಶಾನ್ಯ ಭಾರತದ ಹಲವು ಲೇಖಕರನ್ನು ಸಂಧಿಸಿ, ಪುಸ್ತಕ ಭಂಡಾರಗಳು ಮತ್ತು ಕಾಲೇಜುಗಳಿಗೆ ಭೇಟಿ ನೀಡಿ ದೊರಕಿದಷ್ಟು ಸಾಹಿತ್ಯವನ್ನು ತೆಗೆದುಕೊಂಡುಬಂದೆ. ಪರಿಣಾಮ ಈಶಾನ್ಯ ಭಾರತದ ಆಧುನಿಕ ಕವಿತೆಗಳ ಗುಚ್ಛ ನಿಮ್ಮ ನಿಮ್ಮ ಕೈ ಸೇರಿದೆ.

ಪ್ರಸ್ತುತ ಪ್ರಪಂಚದ ಬಹಳಷ್ಟು ಪುರಾತನ ಭಾಷೆಗಳು ಅಳಿವಿನ ಅಂಚಿನ ಲ್ಲಿದ್ದು, ಈಶಾನ್ಯ ವಲಯದ ಎಲ್ಲಾ ಬುಡಕಟ್ಟು ಭಾಷೆಗಳು ಬಲು ಬೇಗನೇ ಈ ಭೂಮಿಯಿಂದ ಮಾಯವಾಗಲಿವೆ. ಇಲ್ಲಿನ ಹಲವಾರು ಭಾಷೆಗಳು ಇನ್ನೂ ಕೋಶಾವಸ್ಥೆಯಲ್ಲೇ ಇದ್ದು ಇತರ ಬಲಿತ ಭಾಷೆಗಳು ಈ ಪುರಾತನ ಭಾಷೆ ಗಳನ್ನು ನುಂಗಿಕೊಳ್ಳುತ್ತಿವೆ. ಆದರೆ ಈ ಕೋಶಾವಸ್ಥೆಯ ಪ್ರತಿ ಭಾಷೆಗೂ ತನ್ನದೇ ಚರಿತ್ರೆ, ಸಾಂಸ್ಕೃತಿಕ ಹಿನ್ನೆಲೆ, ಆಚಾರ-ವಿಚಾರ, ಕಲೆ ಸಾಹಿತ್ಯ, ಹಾಡು-ಪಾಡು, ಸುಖ-ದುಃಖ ಅಷ್ಟೇ ಅಲ್ಲದೇ ವಿಜ್ಞಾನ-ತಂತ್ರಜ್ಞಾನ ಎಲ್ಲವೂ ಇದರಲ್ಲಿ ಅಡಗಿದೆ. ಇಲ್ಲಿನ ಅಸ್ಸಾಮಿ ಭಾಷೆ ಸಾಕಷ್ಟು ಬೆಳೆದ ಭಾಷೆ ಎನ್ನಬಹುದು. ಹಾಗೆಯೇ ಮಣಿಪುರಿ ಭಾಷೆ ಕೂಡ. ಅಸ್ಸಾಮಿ ಭಾಷೆಗೆ ಬೆಂಗಾಲಿ ಮತ್ತು ದೇವನಾಗಿರಿ ಲಿಪಿ

ಮೂಲವಾದರೆ ಮಣಿಪುರಿ ಭಾಷೆಗೆ ಬೆಂಗಾಲಿ ಲಿಪಿಯನ್ನು ಅಳವಡಿಸಲಾಗಿದೆ. ಉಳಿದ ಕೆಲವು ಮುಖ್ಯ ಬುಡಕಟ್ಟು ಭಾಷೆಗಳಾದ ನಾಗಾಮೀಸ್ (ಬ್ರೋಕನ್ ಅಸ್ಸಾಮಿ), ಕಾಶಿ, ನಿಶ್ಶಿ ಇತ್ಯಾದಿ ಭಾಷೆಗಳಿಗೆ ರೋಮನ್/ಇಂಗ್ಲಿಷ್ ಲಿಪಿಯನ್ನು ಅಳವಡಿಸಲಾಗಿದೆ.

ಒಂದು ಭಾಷೆ ಈ ಭೂಮಿಯಿಂದ ಅಳಿಸಿಹೋದರೆ ಮೇಲಿನ ಎಲ್ಲವೂ ಅದರ ಜೊತೆಗೆ ಹೋಗಿಬಿಡುತ್ತದೆ. ಭಾಷಾತಜ್ಞರ ಪ್ರಕಾರ, ಪ್ರಸ್ತುತ ಭೂಮಿಯ ಮೇಲೆ ಸುಮಾರು ೬,೭೦೦ ಭಾಷೆಗಳಿದ್ದು ಎರಡು ವಾರಕ್ಕೊಮ್ಮೆ ಒಂದು ಪುರಾತನ ಭಾಷೆ ಈ ಭೂಮಿಯಿಂದ ಮಾಯವಾಗುತ್ತಿದೆ. ಇಂತಹ ಅಪರೂಪವಾದ ಪುರಾತನ ಬುಡಕಟ್ಟು ಭಾಷೆಗಳು (ದೇಶದಲ್ಲಿಯೇ ಹೆಚ್ಚು) ಈ ವಲಯದಲ್ಲಿ ಈಗ ತೊಂದರೆಗೆ ಸಿಲುಕಿಕೊಂಡು ಉಸಿರಾಡುತ್ತಿವೆ. ಇವುಗಳ ನಸೀಬು ಮುಂದಿನ ದಿನಗಳಲ್ಲಿ ಹೇಗೋ ಏನೋ? 'ಈಶಾನ್ಯ ಭಾರತದ ಆಧುನಿಕ ಕವಿತೆಗಳ ಗುಚ್ಛ'ದಲ್ಲಿರುವ ಅರ್ಧದಷ್ಟು ಕವಿತೆಗಳು ನೇರವಾಗಿ ಇಂತಹ ಬುಡಕಟ್ಟು ಭಾಷೆಗಳಲ್ಲಿ ರಚನೆಯಾಗಿದ್ದರೆ ಇನ್ನರ್ಧ ಕವಿತೆಗಳು ಬುಡಕಟ್ಟು ಜನರ ಇಂದಿನ ತಲೆಮಾರು ಇಂಗ್ಲೀಷ್‌ನಲ್ಲಿ ರಚಿಸಿದ್ದು. ನಾನು ಮಾತ್ರ ಎಲ್ಲಾ ಕವಿತೆಗಳನ್ನು ಇಂಗ್ಲಿಷ್‌ನಿಂದಲೇ ಅನುವಾದಿಬೇಕಾಯಿತು. ಒಟ್ಟಿನಲ್ಲಿ ಈ ಕವಿತೆಗಳು ಭಾರತದ ಇತರ ಪ್ರದೇಶಗಳಿಗೆ ಹೋಲಿಸಿ ನೋಡಿದಾಗ ಈಶಾನ್ಯ ಭಾಗದಂತೆಯೇ ಪ್ರತ್ಯೇಕವಾಗಿ ನಿಲ್ಲುತ್ತವೆ. ಐದು ಸಾದಾ ಪದ್ಯಗಳಂತೂ (೫೦-೫೪) ಹೊಸ ಲೋಕದಂತೆ ತೋರುತ್ತವೆ.

ಈಶಾನ್ಯ ಭಾಗದ ಈ ಆಯ್ದ ೫೪ ಕವಿತೆಗಳ ಕನ್ನಡ ಅನುವಾದ ಕನ್ನಡಿಗರಿಗೆ ಇಷ್ಟವಾಗುತ್ತದೆ ಎನ್ನುವುದು ನನ್ನ ದೃಢ ನಂಬಿಕೆ. ಇಲ್ಲಿನ ಕವಿತೆಗಳನ್ನು ಅನುವಾದಿಸಲು ಸಹಾಯ ಮಾಡಿದ ನೇಹು ವಿಶ್ವವಿದ್ಯಾಲಯದ (ಶಿಲ್ಲಾಂಗ್) ಡಾ. ಕಿನ್‌ಫೇಮ್ ಸಿಂಗ್, ಸಹೋದ್ಯೋಗಿ ಡಾ. ಎಚ್. ಎಸ್. ಎಮ್. ಪ್ರಕಾಶ್ ಮತ್ತು ಇಲ್ಲಿನ ಕೆಲವು ಕವಿತೆಗಳನ್ನು ವಿಶೇಷವಾಗಿ ಪ್ರಕಟಿಸಿದ ವಿಜಯ ಕರ್ನಾಟಕ ದಿನ ಪತ್ರಿಕೆ ಮತ್ತು ಹೊಸತು ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ಇನ್ನು ಈಶಾನ್ಯ ಭಾರತದ ಆಧುನಿಕ ಕವಿತೆಗಳ ಈ ಗುಚ್ಛವನ್ನು ನಾಡಿನ ಖ್ಯಾತ ಕವಿಗಳು ಮತ್ತು ಸಾಮಾಜಿಕ ಚಿಂತಕರಾದ ಪ್ರೊ.ಎಸ್.ಜಿ. ಸಿದ್ಧರಾಮಯ್ಯನವರು ತಮ್ಮ ಪ್ರೇಜಸ ಪ್ರಕಾಶನದಿಂದ ಹೊರತಂದಿರುವುದು ಹೆಮ್ಮೆಯ ಸಂಗತಿ. ಇದಕ್ಕೆ ನೆರವಾದ ಶ್ರೀ ಎಲ್.ಪಿ. ಪುಟ್ಟಣ್ಣಯ್ಯ, ಶ್ರೀ ಜರಗನಹಳ್ಳಿ ಶಿವಶಂಕರ್ ಅವರಿಗೆ ನನ್ನ ಹೃದಯ ಪೂರ್ವಕ ವಂದನೆಗಳು.

ಡಾ. ಎಂ. ವೆಂಕಟಸ್ವಾಮಿ

e-mail: alemarimvs@gmail.com

ಪ್ರೇ.ಜ.ಸ ಮಾತು

ಕಾಲದ ಅಂಗಳದಲ್ಲಿ ಅನುಭವಗಳ ಅನುಸಂಧಾನವೆಂದರೆ ಅದು ಪರಂಪರೆಯನ್ನು ನಿರಂತರವಾಗಿಸುವ ಪ್ರಜ್ಞಾ ವಿಶೇಷತೆಯ ಕಾಯಕ. ಬರವಣಿಗೆ ಎಂಬುದು ಕಾಯಕವೆಂದಾಗಬೇಕಾದರೆ ಅಲ್ಲಿ ಮಾತು ಸೂತಕಕ್ಕೆ ಒಳಗಾಗಬಾರದು. ಮಾತಿನ ಸೂತಕವೆಂದರೆ ಅಭಿವ್ಯಕ್ತಿಯ ಅಪ್ರಮಾಣಿಕತೆ. ಅನುಭವ ಕಾಲದ ಕಣ್ಣಿಯ ಹಂಗು ಕಳಚುತ್ತಾ ನಿತ್ಯವಾಗಬೇಕು, ನಿರಂತರ ವಾಗಬೇಕು. ಇದು ಕಾಲದಂತುವನರಿತ ಮಹಾಂತರ ಮಾತಿನ ಮರ್ಮ. ಎಲ್ಲ ಬಗೆಯ ಬರವಣಿಗೆಗಳ ಮೂಲ ಹವಣಿಕೆ ಇದೇ ಆಗಿರುತ್ತದೆ. ಜ್ಞಾನಕ್ಕೆ ಭಾಷಿಕ ಆಕೃತಿಗಳ ರೂಪ ವೈವಿಧ್ಯಗಳಿದ್ದಾಗ್ಯೂ ಅದು ನೀಡುವ ಅರಿವಿಗೆ ಬಾಳನ್ನು ಬೆಳಗುವ ದೀಪಗುಣವಿರುತ್ತದೆ.

ಪ್ರೇಜಸ ಪ್ರಕಾಶನ ಅರಿವಿನ ದೀಪ ಬೆಳಗಿಸುವ ಕಾಯಕ ಪ್ರಜ್ಞೆಯಲ್ಲಿ ಹುಟ್ಟಿಕೊಂಡ ಬಳಗ. ಕನ್ನಡ ಬದುಕನ್ನು ಹಸನಾಗಿಸುವ ದಾರಿಯಲ್ಲಿ ನಮ್ಮ ಪ್ರಕಟಣೆಗಳು ಹೆಜ್ಜೆ ಹಾಕಬಯಸಿವೆ.

ಡಾ. ಎಂ. ವೆಂಕಟಸ್ವಾಮಿಯವರು ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭೂಗರ್ಭಶಾಸ್ತ್ರದ ವಿಷಯ ಜ್ಞಾನಕ್ಕೆ ಸಂಬಂಧಿಸಿದಂತೆ ಇಡೀ ಜಗತ್ತಿನ ಭೂಮಿಯ ಒಳಪದರ ರಚನೆಯ ಬಗ್ಗೆ ಅವರು ನೀಡುವ ಮಾಹಿತಿಗಳು ವಿಸ್ಮಯ ಹುಟ್ಟಿಸುತ್ತವೆ. ಭೂಗರ್ಭದ ವಿಚಾರ ಕುರಿತು ಅವರು ಮಾತನಾಡ ತೊಡಗಿದರೆ ಅದೊಂದು ಅದ್ಭುತ ಲೋಕ ಕಣ್ಣೆದುರು ಬಿಚ್ಚಿಕೊಳ್ಳುತ್ತದೆ. ಇದು ಕೇವಲ ಪುಸ್ತಕದಲ್ಲಿ ಪಡೆದ ಮಾಹಿತಿ ಜ್ಞಾನವಲ್ಲ. ಅವರು ಜಗತ್ತನ್ನು ಸುತ್ತಿ ಅಲ್ಲಿನ ಭೂ ವೈಲಕ್ಷಣ್ಯಗಳನ್ನು ಕಣ್ಣಾರೆ ಕಂಡು ಅಧ್ಯಯನ ಮಾಡಿ ಪಡೆದ ಜ್ಞಾನ ಅದಾಗಿರುವುದರಿಂದ ಅವರ ಮಾತಿಗೆ ಒಂದು ಮಾಂತ್ರಿಕ ಗುಣವಿದೆ. ಇಷ್ಟು ಹೇಳಿದರೆ ಅದು ವೆಂಕಟಸ್ವಾಮಿಯರ ಬಗ್ಗೆ ಹೇಳಿದ ಒಂದು ಕ್ಷೇತ್ರದ ಪರಿಚಯ ಮಾತ್ರವಾಗುತ್ತದೆ.

ವೆಂಕಟಸ್ವಾಮಿಯವರು ವಿಜ್ಞಾನ ಕ್ಷೇತ್ರದಲ್ಲಿ ತೊಡಗಿಕೊಂಡಷ್ಟೇ ತೀವ್ರವಾಗಿ ಸಾಹಿತ್ಯ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಶಾನ್ಯ ಭಾರತದಲ್ಲಿ ಅವರು ಸೇವೆಸಲ್ಲಿಸುತ್ತಿದ್ದಾಗ ಅಲ್ಲಿಯ ಬುಡಕಟ್ಟು ಜನರ ಜೀವನ

ವಿಧಾನದ ಬಗ್ಗೆ ಅತೀವ ಪ್ರೀತಿ ಕಾಳಜಿ ವಹಿಸಿ ಅಧ್ಯಯನ ಮಾಡಿದ್ದಾರೆ. ಆ ಬಗ್ಗೆ ಗದ್ಯ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಅವರು ಮೂಲತಃ ಕವಿ ಪ್ರಜ್ಞೆಯ ಅಧಿಕಾರಿ. ಈಶಾನ್ಯ ಭಾರತದಲ್ಲಿರುವ ಎಲ್ಲ ಬುಡಕಟ್ಟು ಭಾಷೆಗಳ ಪ್ರಮುಖ ಕವಿಗಳ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕವನಗಳನ್ನು ಓದುತ್ತಿದ್ದರೆ ಆ ನೆಲದ ಬದುಕಿನಲ್ಲಿ ಈಗ ಎದ್ದಿರುವ ಎಲ್ಲ ಬಗೆಯ ತವಕ ತಲ್ಲಣಗಳನ್ನು ಕೇಳುತ್ತೇವೆ. ಆ ಸವಾಲು ಸಮಸ್ಯೆಗಳ ಒಳಸುಳಿಗಳಿಂದ ಬಿಡಿಸಿಕೊಂಡು ಹೊಸ ಬಗೆಯ ಬದುಕಿಗೆ ನಿರೀಕ್ಷೆಯ ನೋಟ ಬೀರಿರುವ ಹೊಸ ದನಿಗಳನ್ನು ಕೇಳುತ್ತೇವೆ. ಆ ನೆಲದಲ್ಲಿ ಬದುಕುವಾಗ ಡಾ. ಎಂ. ವೆಂಕಟಸ್ವಾಮಿಯವರ ಎಚ್ಚರ ಪ್ರಜ್ಞೆಯ ಚಿಂತನಶೀಲ ಗುಣ ನೆಲದ ದನಿಗೆ ಮಿಡಿದಿದೆ. ಆ ಜಗತ್ತಿನ ಪರಿಚಯ ವನ್ನು ಕನ್ನಡ ಜಗತ್ತಿಗೆ ಮಾಡಿಸುವ ಹಂಬಲದಲ್ಲಿ ಅಲ್ಲಿನ ಸಂವೇದನೆಯನ್ನು ಅನುವಾದಿಸುವ ಪ್ರೀತಿ ತೋರಿದೆ. ಹೀಗೆ ಅವರು ಕೇವಲ ಸಂಬಳದ ಸೇವೆ ನಿರ್ವಹಿಸುವ ಅಧಿಕಾರಿಯಾಗದೆ ನೆಲದ ದನಿಗೆ ಕಿವಿ ಕಣ್ಣು ಹೃದಯ ತೆರೆದ ಕವಿಯಾಗಿ ಸಾಂಸ್ಕೃತಿಕ ರಾಯಭಾರಿಯಂತೆ ಹೊಣೆಯರಿತು ನಡೆದವರಾಗಿದ್ದಾರೆ.

ಒಕ್ಕೂಟ ವ್ಯವಸ್ಥೆಯೊಳಗೆ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸೇವೆ ಸಲ್ಲಿಸಲು ಹೋದ ಸರ್ಕಾರಿ ನೌಕರ ಬಂಧುಗಳು ವೆಂಕಟಸ್ವಾಮಿಯವರ ರೀತಿಯಲ್ಲಿ ಸಾಂಸ್ಕೃತಿಕ ರಾಯಭಾರಿಗಳಾಗಿ ಕಾರ್ಯನಿರ್ವಹಿಸಿದರೆ ಅಂಬೇಡ್ಕರರ ಪ್ರಜಾಪ್ರಭುತ್ವದ ಆಶಯ ಸಫಲವಾದಂತೆಯೇ ಸರಿ. ಇಂಥ ಮಹತ್ವದ ಕೃತಿಯನ್ನು ಪ್ರೇಜಸದಲ್ಲಿ ಪ್ರಕಟಿಸಲು ಪ್ರೀತಿಯಿಂದ ನೀಡಿದ ಡಾ.ಎಂ.ವೆಂಕಟಸ್ವಾಮಿಯವರಿಗೆ ಆತ್ಮೀಯ ಕೃತಜ್ಞತೆಗಳು.

ಎಸ್.ಜಿ.ಸಿದ್ಧರಾಮಯ್ಯ

ಪರಿವಿಡಿ

ಈಶಾನ್ಯ ಭಾರತದ ಆಧುನಿಕ ಕವಿತೆಗಳ ಗುಚ್ಛ

೧. ಕುರ್ತಾ ಮತ್ತು ಪೈಜಾಮ

ನಾನು ಧರಿಸುತ್ತೇನೆ ಕುರ್ತಾ ಪೈಜಾಮ
ಅದು ನಮ್ಮ ಪದ್ಧತಿಯ ಧಿರಿಸಲ್ಲ;
ಪೋಮೊ ಮತ್ತು ಜುಪಂಗ್ ಧಿರಿಸನ್ನು
ನನ್ನ ತಾಯಿ ತೊಟ್ಟಿಲಲ್ಲಿಯೇ ತೊಡಿಸಿ
ತೂಗಿ ಪರಿಚಯಿಸಿದ್ದಳು.

ಬರೆಯುತ್ತೇನೆ ನಾನು ಆಂಗ್ಲ ಭಾಷೆಯಲ್ಲಿ
ಅದು ನನ್ನ ಭಾಷೆಯಲ್ಲ, ನಾನು 'ನಿಶ್ಚಿ'
ಬುಡಕಟ್ಟು ಜನಾಂಗಕ್ಕೆ ಸೇರಿದ ಮನುಷ್ಯ.

ಎಲ್ಲ ಮಾನವೀಯತೆಯೊಂದಿಗೆ
ನನಗೆ ಯಾವುದೇ ಭೌಗೋಳಿಕ ಗಡಿಗಳಿಲ್ಲ,
ಸಾಮಾಜಿಕ ಕಟ್ಟುಪಾಡುಗಳೂ ಇಲ್ಲ;
ಬಯಾಲಜಿಕಲ್ ಮಿತಿಯಂತೂ ಇಲ್ಲವೇ ಇಲ್ಲ
...ನನ್ನ ಜೊತೆಗಿನ ಮನುಷ್ಯರೊಂದಿಗೆ ನನ್ನನ್ನು
ಪ್ರತ್ಯೇಕಿಸುವ ಯಾವುದೇ ಕಾರಣಗಳೂ ಇಲ್ಲ.

ಬೈಬಲ್, ಖುರಾನ್ ಮತ್ತು ಗೀತೆಯಲ್ಲಿರುವ
ಯಾವುದೇ ಮನುಷ್ಯ ಸಂಬಂಧಿತ ಪ್ರಯತ್ನಗಳನ್ನು
ಒಪ್ಪುತ್ತೇನೆ; ವಿಜ್ಞಾನ ಕಲೆ ಮತ್ತು ವಾಣಿಜ್ಯ
ಕೃತಿಗಳನ್ನು ಓದುತ್ತೇನೆ-

ಹೃದಯ ಎಲ್ಲವನ್ನು ಅರ್ಥಮಾಡಿಕೊಳ್ಳುತ್ತದೆ
ಯಾವುದೇ ಬುಡಕಟ್ಟು ಭಾಷೆ
(ನಿಶ್ಚಿ ಮಾತನಾಡುತ್ತೇನೆ)ಯನ್ನು,
ಈಗ ನಿಮಗೆ ಗೊತ್ತಾಗಿರಬೇಕು-
ನಾನೇಕೆ ಆಂಗ್ಲ ಭಾಷೆಯಲ್ಲಿ ಬರೆಯುತ್ತೇನೆ
ಮತ್ತು ಕುರ್ತಾ ಪೈಜಾಮ ಧರಿಸುತ್ತೇನೆ.

ನಿಶ್ಚಿ: ಅರುಣಾಚಲ ಪ್ರದೇಶದ ಒಂದು ಬುಡಕಟ್ಟು ಭಾಷೆ

English-Yumlam Tana

೨ ಮನುಷ್ಯ ಮತ್ತು ಹುಲಿ

ನನ್ನ ಸಹೋದರ ಮತ್ತು ನಾನು
ನಮ್ಮ ತಾಯಿಯ ಎದೆಗೂಡಿನಲ್ಲಿ
ಒಟ್ಟಾಗಿ ಬೆಳೆದಿದ್ದೆವು.

ರಾತ್ರಿಹೊತ್ತು ನಮಗಾಗಿ ಲಾಲಿ ಹಾಡುತ್ತಿದ್ದಳು
ತಾಯಿ, ಆಕೆ ಜೂಮ್ ಕೃಷಿ ಮಾಡಲು
ಪರ್ವತಗಳ ಕಡೆಗೆ ಹೋದಾಗ ಮನೆ ಸುತ್ತಲು
ಹಲವು ರೀತಿಯ ಆಟಗಳಲ್ಲಿ ತೊಡಗಿಕೊಳ್ಳುತ್ತಿದ್ದೆವು.
ಅವನೇ ನನ್ನ ಸಹ ಆಟಗಾರ, ನನ್ನ ದಾಯಿ.
ಪ್ರಪಂಚದಲ್ಲಿ ನಾನೇ ಅವನ ಆತ್ಮೀಯ.
ನನ್ನ ಎಳೆ ಮನಸ್ಸಿನ ಭಾವನಾಶಕ್ತಿಯ ಉದ್ದ
ಅಗಲಕ್ಕೂ; ನಾವು ಪ್ರಾಯದ ಬಾಗಿಲಿಗೆ
ಬಂದು ನಿಂತೆವು.

ಹಕಟಾ! ಅವನಿಗೆ ಉಗುರುಗಳು ಬಂದವು,
ಕೋರೆಹಲ್ಲು ಮೂಡಿದವು, ಬಾಲ ಬೆಳೆಯಿತು;
ನನ್ನನ್ನು ಪರಚುವಂತೆ ಹೇಳಿದ
ನನ್ನ ಉಗುರುಗಳು ಅವನ ದೇಹದ ಮೇಲೆ
ಗುರುತು ಮೂಡಿಸಿದವು
ಹುಲಿಯ ಮೇಲೆ ಕಪ್ಪು ಪಟ್ಟೆಗಳು!
ಆ ಟ್ಸಂಗ್ಪೊ ನದಿ ದಿಬಂಗ್ ಕಣಿವೆಯ ಮೂಲಕ
ಇಂಡಿಯಾ ಬಯಲುಗಳ ಮುಟ್ಟಿ
ಬಾಂಗ್ಲಾ ದೇಶ ದಾಟಿ ಕೊನೆಗೆ ಸಮುದ್ರದಲ್ಲಿ
ಭ್ರಾತೃತ್ವ ಸಮಾಧಾನಗೊಂಡಿತು.

ನದಿ ನಡೆದುಹೋದ ಪ್ರದೇಶ ಇಬ್ಭಾಗವಾಗಿ
ಇಬ್ಬರ ಮಧ್ಯೆ ಶತೃತ್ವ ಬೆಳೆದು ನಿಂತಿತ್ತು,
ನರಗಳಲ್ಲಿ ಹರಿಯುವ ರಕ್ತ ಸಂಬಂಧ

ಸಾಕಾಗಲಿಲ್ಲವೆ? ಭ್ರಾತೃತ್ವ ಉಳಿಸಿಕೊಳ್ಳಲಿಲ್ಲ
ನನ್ನ ಸಹೋದರ. ಮಾಂಸ ಖಂಡಗಳು
ರಕ್ತ ಸಂಬಂಧಕ್ಕಿಂತ ಹೆಚ್ಚಾದವೇ ನನ್ನ
ಪ್ರಿಯ ಸಹೋದರ?
ಕಾಡಿನಲ್ಲಿ ಪ್ರಾಣಿಗಳ
ಕೊಂದು ರಕ್ತ ಚೆಲ್ಲಾಡುವುದು ಹುಲಿ ವೃತ್ತಾಂತ
ತನ್ನ ಕುರುಡು ಹಸಿವಿಗಾಗಿ;
ಮನುಷ್ಯ, ಸಾಮಾಜಿಕ ಪ್ರಾಣಿ,
ಸಿದ್ಧಾಂತ ಹುಡುಕುತ್ತ ತನಗೆ ಬೇಕಾದ
ಬೌದ್ಧಿಕ ಪೋಷಾಕಿನಲ್ಲಿ ವಿಜ್ರಂಭಿಸುತ್ತಾನೆ.

English: Yumlam Tana

೩. ಶಿಲ್ಪಿ

ಕಲ್ಲು ಧರಿಸು ಧರಿಸಿ
ವಜ್ರ ವೈಢೂರ್ಯ ಆಭರಣಗಳ
ಅಲಂಕಾರ ಮಾಡಿಕೊಂಡು
ಮಾತು ಹೊರಡುತ್ತಿಲ್ಲ ಕಲ್ಲು ತುಟಿಗಳಿಂದ.

ಆತ ಹತ್ತಿರಕ್ಕೆ ಬಂದು ಇಣಿಕಿ ನೋಡಿದ
ಚೆಕ್ಕಿ ಬಿಟ್ಟಿರುವ ನನ್ನ ಹಳೆ ಕೈಕಾಲುಗಳನ್ನು;
ನಂತರ ಮೃದುವಾಗಿ ಸ್ಪರ್ಶಿಸಿದ ಸ್ತನಗಳನ್ನು
ತುಟಿ ಮತ್ತು ಕಣ್ಣೀರ ಹನಿಗಳನ್ನು.

ಕಲ್ಲು ದೇಹದಿಂದ ನನ್ನನ್ನು ಹೊರಕ್ಕೆ ಎಳೆದು
ಇನ್ನೊಂದು ದಿಮ್ಮಿಯಲ್ಲಿ ಶಿಲ್ಪ ಕಡಿದ.
ಆತನ ಮಾಂತ್ರಿಕ ಶಕ್ತಿಯೆ ಅಥವಾ ಎರಡು
ಹೃದಯಗಳ ಸಮಾಗಮವೇ?
ಒಂದು ದಿನ ನನ್ನ ಕಲ್ಲು ಹೃದಯ
ಹೊಡೆದುಕೊಳ್ಳಲು ಪ್ರಾರಂಭಿಸಿತು...
ನನ್ನ ಎರಡು ಕೈಗಳು ಹೊರಗೆ ಬಂದು
ಆತನನ್ನು ತಬ್ಬಿಕೊಂಡವು.
ಅಲ್ಲಿಂದ ನಾನು ಹೆಣ್ಣಾಗಿ ಮಾರ್ಪಟ್ಟೆ.

Assame: Anupama Basumatary
English: Shoneet Bijoy Das

೪ ಇಹಲೋಕ

ಮಳೆ ಜಿನುಗುತ್ತಿದ್ದಾಗ
ಗಲಭೆ ಗದ್ದಲದ ಮಾರುಕಟ್ಟೆಯ ಒಳಹೊಕ್ಕೆ
ನಾಗಾ ಬಾಲೆಯರ ಕುಲುಕುಲು ನಗುವಿನಲ್ಲಿ
ಬದುಕಿನ ಪ್ರೀತಿ ಚಿಮ್ಮುತ್ತಿತ್ತು.
ಬಿದಿರು ಪುಟ್ಟಿ ತುಂಬಿ ತುಳುಕುತ್ತಿದ್ದ ಸಿಂಪಿ
ಹುಳುಗಳು ಕೊಳೆತು ಜೀವ ಹೊಡೆದುಕೊಳ್ಳುತ್ತಿದ್ದವು;
ಕಪ್ಪೆಗಳನ್ನು ಕಾಲು ಕಟ್ಟಿ ಕುಪ್ಪೆಗಳಾಕಿ ಮಾರುತ್ತಿದ್ದ
ನೆನಪು ಕಣ್ಣುಗಳ ಮುಂದೆ ಹಾದುಹೊಯಿತು.
ಬಾಲ್ಯದ ನೆನಪುಗಳು ಕಾಡಿದವು
ಅಣಬೆ ಗುಂಪಿನಲ್ಲಿ
ಬೇಸಿಗೆ ಕಾಲದ ಹಾಡುಗಳಾಗಿ.
ಮುಂಜಾನೆಯ ಬೆಳಕಿನಲ್ಲಿ ಅಣಬೆಗಳನ್ನು ಕಿತ್ತು
ಮಡಿಕೆಯಲ್ಲಿ ತುಂಬಿಕೊಳ್ಳುತ್ತ
ಭೂಲೋಕದ ಸ್ವಾಧವನ್ನು ಅನುಭವಿಸುತ್ತಿದ್ದೆ;
ಅವುಗಳ ಸುತ್ತಲೂ ಚಕ್ಕರ್ ಹಾಕುತ್ತ
ಕಹಿವಾಸನೆ ಮೂಸಿ ನೋಡುತ್ತ ನೆನ್ನೆ ತಿಂದ
ಸ್ವಾಧವನ್ನು ಅಘ್ರಾಣಿಸುತ್ತಿದ್ದೆ.

ಮತ್ತು...
ಬದುಕಿದ್ದ ಏಡಿಗಳು ತಮ್ಮ ಹತ್ತು ಕಾಲುಗಳನ್ನು
ನೆಲಕ್ಕಿಟ್ಟು ಪ್ರಸವ ವೇಧನೆಯ ದುಃಸ್ವಪ್ನ ಕಂಡಂತೆ;
ಅವುಗಳ ಕವಡೆಗಳನ್ನು ಬೆಂಕಿ ಸುಟ್ಟಂತೆ
ತೇವದ ಪೂರ್ಣಿಮೆ ಚಂದ್ರನ ಮಾರುತದೊಂದಿಗೆ
ಖರಟು ವಾಸನೆ ನಿಶ್ಯಬ್ದ ನಗರವನ್ನು
ತಲ್ಲಣಿಸಿತ್ತು.

Assame: Anupama Basumatary,
English: Pradip Acharya

೫ ಕಳೆದುಹೋದ ಕೊಂಡಿ

ಜ್ಞಾಪಿಸಿಕೊಳ್ಳುವೆ ನಾನು
ಆ ಪವಿತ್ರ ನದಿ ಹೊರಳಿದ್ದು,
ಪ್ರಾಚೀನ ನೆಲದಿಂದ ಬೆಂಕಿಯೊಂದಿಗೆ
ಪ್ರಥಮ ಸೂರ್ಯನು ಬಾಗಿದ್ದು; ಕೆಂಪು
ನಿಲುವಂಗಿ ತೊಟ್ಟ ಸಪ್ತ ಸಹೋದರರು
ವಿಷಮ ಪದ್ಧತಿಗಳ ತೊರೆದು ದಕ್ಷಿಣದ
ಕಡೆಗೆ ಪಾಲಾಯನಗೊಂಡಾಗ ಬೇಸಿಗೆ
ಗೂಡುಗಳಿಂದ ಹಾರ್ನ್ ಬಿಲ್ ಪಕ್ಷಿಗಳು
ತಲ್ಲಣಗೊಂಡಿದ್ದವು.

ಜ್ಞಾಪಕ ಇದೆ
ಬಿರುಗಾಳಿ ದೂಳು ನದಿ ಜೀರುಂಡೆಗಳ
ಹಾರಾಟವನ್ನು ತಿರುಗುಮರುಗು ಮಾಡಿದ್ದು,
ವಿಷ ತುಂಬಿದ ಗುಹೆಗಳಲ್ಲಿ ಹೆಣ್ಣು-ಗಂಡು
ಕತ್ತಲರಾತ್ರಿ ಮುಸುಕೊದ್ದು ಕೂತಿದ್ದು.
ಆದರೆ ದಾಖಲೆಗಳಿಲ್ಲ. ನದಿ ಹಸಿರಾಗಿದ್ದು,
ನಮ್ಮ ಬದುಕಿನ ಬಿಳಿನಾಳಗಳು
ಹೊಸ ಭೂಭಾಗಕ್ಕೆ ಸಂಪರ್ಕ ಪಡೆಯುವ
ದುರಾಶೆ ಹೊಂದಿದ್ದು, ಸಹೋದರರು ಬೆಳಗು
ಸಾಯಂಕಾಲಗಳನ್ನು ಭಾಗ ಮಾಡಿಕೊಂಡ
ಒಪ್ಪಂದದ ಕೆತ್ತನೆ ನಾಶಗೊಂಡ ನಾಡಿನಲ್ಲಿ.

ಜ್ಞಾಪಕ ಇದೆ
ಬುಡಕಟ್ಟು ಮಕ್ಕಳಿಗೆ
ಮಹಿಳೆಯರು ಹೇಳಿದ ಮಾಸಿದ ಧ್ವನಿಗಳ
ಮೊದಲ ಕಥೆಗಳಲ್ಲಿ ಕಿರಣಗಳ ಬೇರುಗಳಿದ್ದಿದ್ದು.
ನದಿಗಳ ಕಲರವ ಜ್ಞಾಪಿಸಿಕೊಳ್ಳಿ, ನಾವು ಎಲ್ಲಿ
ಹುಟ್ಟಬೇಕಾಗಿತ್ತು ಎಲ್ಲಿಗೆ ಸೇರಿದವರು ನಾವು;
ನಿಶ್ಯಬ್ದ, ನೀರು ಮತ್ತು ತುಷಾರದಿಂದ ರೂಪಗೊಂಡಿದೆ

ದಿವ್ಯ ಬದುಕು ಮತ್ತು ಆಕೃತಿ; ನೀರು ಮತ್ತು ತುಷಾರ
ಜೋಡಿ ದೇವತೆಗಳು ಮತ್ತು ಮೋಡದ ಮಹಿಳೆ
ಯಾವಾಗಲೂ ಕರೆಯುತ್ತಿರುತ್ತಾರೆ
ಪವಿತ್ರ ಕಣಿವೆಗಳಿಂದ.

ಜ್ಞಾಪಿಸಿಕೊಳ್ಳಿ
ಯಾವುದಕ್ಕೂ ಮುಕ್ತಾಯವಿಲ್ಲ, ಎಲ್ಲವೂ
ಬದಲಾಗುತ್ತದೆ, ಜ್ಞಾಪಕ ಬದಲಾವಣೆಯ ಆಕೃತಿ
ಸಮುದ್ರದ ಆ ಕಡೆಯ ನೆಲದಲ್ಲಿ ಬದಲಾವಣೆ
ಕಾಣಿಸುತ್ತಿದೆ; ಆದರೂ ಮುಕ್ತಾಯವಿಲ್ಲ.
ಹಳ್ಳಿಗಳಲ್ಲಿ ಮೌನಗೊಂಡ ಗುಡ್ಡಗಾಡು ಜನರು
ಈಗಲೂ ಕಾಯುತ್ತಿದ್ದಾರೆ ಉದ್ದವಾದ ವಾಗ್ದಾನ
ಪತ್ರಗಳಿಗಾಗಿ ಮತ್ತು ಅದರಲ್ಲಿನ
ಅಕ್ಷರಗಳ ಅರ್ಥಕ್ಕಾಗಿ.

English: Mamang Dai

೬ ಶಿಂಪಿ ಹುಳು

ಕೊಯ್ದ ಕಾಂಡಗಳ ಮೇಲೆ ಸಾಗುವ
ಸಿಂಪಿಗಳನ್ನು ತಲೆ ಕೆಳಗಾಗಿ ಹಿಡಿದುಕೊಂಡು
ಬುಟ್ಟಿಯ ಕುತ್ತಿಗೆಯವರೆಗೂ ತುಂಬಿಕೊಳ್ಳುತ್ತಿದ್ದೆ.
ಕುದಿಸುವ ಮುನ್ನ ಚಿಪ್ಪುಗಳನ್ನು ಸುಲಿದಾಗ
ಉದ್ದನೆ ದೇಹ ಸುತ್ತಿಕೊಳ್ಳುವುದು
ವಿನೋದವಾಗಿ ಕಾಣಿಸುತ್ತಿತ್ತು.
ಕುದಿಸಿದ ಚಿಪ್ಪುಗಳನ್ನು ಬಿಚ್ಚಿ ಜೀವರಸ
ಹೀರಿಕೊಂಡು ನೆಲದ ಮೇಲೆ ಎಸೆದಾಗ
ಚಿಪ್ಪುಗಳು ವಿಚಿತ್ರ ಧ್ವನಿಯಲ್ಲಿ ಕಿರುಗುಟ್ಟುವ
ಆಕ್ರಂಧನ ಕೇಳಿಸುತ್ತಿತ್ತು.

ಈಗ ನಾನು ಸಮುದ್ರ ತಟಗಳಲ್ಲಿ
ತೆವಳುತ್ತಿದ್ದೇನೆ ನೆಲ ನೀರಿನ ದಡಗಳ
ನಡುವೆ ಏರಿ ಇಳಿಯುತ್ತಿದ್ದೇನೆ,
ದಡಗಳ ಮೇಲೆ ಧಾಳಿ ಮಾಡುವ ಅಲೆಗಳು
ಒಳಕ್ಕೆ ಎಳೆದುಕೊಳ್ಳುತ್ತ ಹೊರಕ್ಕೆ ಒಗೆಯುವ
ಆ ಅಪರಿಚಿತ ಲಯಬದ್ಧ ಚಲನೆ ಎಲ್ಲಿದೆಯೊ?
ಕಾಣದ ಕೈಯೊಂದು ಹಿಡಿದುಕೊಂಡು
ನನ್ನ ಜೀವರಸ ಹೀರಿಕೊಂಡು ಖಾಲಿಯಾಗಿಸುತ್ತಿದೆ.
ನನ್ನ ದೇಹದ ಕರಟ ವಿಚಿತ್ರವಾಗಿ ಕಿರುಗುಟ್ಟುತ್ತಿದೆ,
ಹೃದಯ ಹೊಡೆದುಕೊಂಡು ಪ್ರಾಣ ಸಂಕಟವಾಗಿ
ದುಃಖದ ಎಲ್ಲೆಯ ಗಾನ ಮೊಳಗುತ್ತಿದೆ.

Assame: Anupama Basumatary
English: Pradip Acharya

೭ ನನ್ನ ಬಾಲ್ಯ

೧

ಹುತ್ತದ ಮೇಲೆ ಮತ್ತು ಅದರ
ಸುತ್ತಲು ಬಿದಿರು ಸಂಕುಲ ಬೆಳೆದು
ನಿಂತಿತ್ತು. ಗಂಡಸರು, ಮೋಹಕ
ಮಹಿಳೆಯರು ಚಟಪಟ ಓಡಾಡುವ
ಮಕ್ಕಳ ಹಿಂದೆಯೇ ಇದ್ದರು. ಬಿದಿರು
ರೆಂಬೆ ಕೊಂಬೆ ಎಲೆಗಳ ಜೊತೆಗೆ
ನೆರಳಿನಲ್ಲಿ ನಾವು ಆಟವಾಡುತ್ತಿದ್ದು,
ನಮ್ಮನ್ನು ನೋಡಿದ ಹಿರಿಯರು
ಸಿಡುಕಿನಿಂದ ಗದುರುತ್ತಿದ್ದರು. ಹುತ್ತದ
ಮೇಲೆ ಕುಳಿತಿರುವ ಎಳೆ ತಂಗಿಯ ಎದೆಯ
ಮೇಲೆ ಪುಟ್ಟ ತೊಟ್ಟುಗಳಿದ್ದವು.

೨

ನಮ್ಮ ಕೈಗಳಲ್ಲಿ ಪುಟ್ಟಪುಟ್ಟ
ಬಿದಿರು ರೆಂಬೆ ಕೊಂಬೆಗಳು, ಅನಾನಸ್
ಪೊದೆಗಳಲ್ಲಿ ಉದ್ದನೆ ಹಾವುಗಳು,
ಆಡುವಾಗ ಮನೆಯ ಹಿತ್ತಲಲ್ಲಿ ತಲೆಯ
ಮೇಲೆ ಮೊಟಕಿ ಪುಳಕಗೊಳ್ಳುತ್ತ,
ಹಸಿರು ಎಲೆಗಳನ್ನು ಅಗಿದು ಸುವಾಸನೆ
ಅನುಭವಿಸುತ್ತ; ಹಳೆ ದಿಂಬುಗಳ ಕೆಳಗೆ,
ಅಲ್‌ಮಾರಿ, ಹಲಗೆ ಪೆನ್ಸಿಲ್ ಗೋಲಿಗಳಲ್ಲಿ
ಕಾಡು ಕನಸುಗಳನ್ನು ಕಾಣುತ್ತಿದ್ದೆವು.
ನನ್ನ ಹುಡುಗಾಟದ ತಪ್ಪುಗಳಿಗೆ ತಂದೆ
ಆಗಾಗ ಬೆನ್ನಿನ ಮೇಲೆ ಬೆತ್ತ ಆಡಿಸುತ್ತಿದ್ದರು.
ಉಳಿದ ಮಧ್ಯಾಹ್ನದ ವೇಳೆ ಗದ್ದೆಗಳಲ್ಲಿ
ಸಂತೋಷವೆ ಸಂತೋಷ. ಧಾನ್ಯದ ರಾಶಿಯಲ್ಲಿ
ಬಿಲ ಮಾಡಿ ನಮ್ಮ ದೇಹಗಳನ್ನು ತೂರಿ ತಂದೆ

ತಾಯಿಂತೆ ಅಪ್ಪಿಕೊಳ್ಳುತ್ತಿದ್ದು ನಮ್ಮ ನಡುವೆ
ಪೇರಳೆ ಹಣ್ಣಿನ ವಾಸನೆ ಅಡರುತ್ತಿತ್ತು.

೩

ಒಂದು ದಿನ ಅಜ್ಜ ಶೋಕದ ಪುಟ್ಟ ಉಡುಗೆ
ತೊಡಿಸಿ, ಕೈಯಿಗೆ ಬಿದಿರಿನ ಪೊಂಜು ನೀಡಿದಾಗ
ತಾಯಿಯ ಜೊತೆಗೆ ನಾನು ಬಿಕ್ಕಿ ಬಿಕ್ಕಿ ಅಳುತ್ತಿದ್ದೆ.
ಸತ್ತ ನದಿಯ ಆ ಕಡೆಗೆ ಸ್ಮಶಾನ ಇದ್ದು-
ಅದು ನನ್ನ ಬದುಕಿನ ದೀರ್ಘ ಯಾತನೆಯ
ದಿನವಾಗಿತ್ತು. ತಾಯಿ ನನ್ನ ಹತ್ತಿರ ಬರುವಳೆಂದು
ನೋಡಿದೆ. ತಂದೆಯನ್ನು ನೋಡಿದ ಆಕೆ ಬರಲಿಲ್ಲ,
ಅಜ್ಜನ ಕೊಂಬು ತೋಳುಗಳನ್ನು ನನ್ನ ಕೈಯಿಗಳು
ಸುತ್ತಿಕೊಂಡವು.

೪

ವಯಸ್ಸಾದ ಗಂಡಸರ ಮೂಗು
ಮತ್ತು ತುಟಿಗಳನ್ನು ಮುದ್ದಿಸುತ್ತಿದ್ದೆ; ಅದು
ಅಜ್ಜನ ಕಣ್ಣುಬ್ಬು, ನೆತ್ತಿ ಮತ್ತು ಕೆನ್ನೆಯವರೆಗೂ
ಸಾಗಿತ್ತು; ಒಬ್ಬ ಗಡುಸಾದ ದಡಿಯ
ಬಟ್ಟೆ ಬಿಚ್ಚಿ ಬೆತ್ತಲಾಗಿ ಕತ್ತಲ ಅರಣ್ಯ ದಾರಿಯಲ್ಲಿ
ತನ್ನ ನಾಭಿಯ ಕೆಳಕ್ಕೆ ಒತ್ತಿ ಹಿಡಿದುಕೊಳ್ಳುತ್ತಿದ್ದ,
ವಿಧುವೆಯಾದ ಯುವತಿಯೊಬ್ಬಳು ಮುಗಿಯದ
ರಾತ್ರಿಗಳಲ್ಲಿ ನನ್ನನ್ನು ಹೀರುತ್ತಿದ್ದಳು
ಆಕೆಯ ಕೊಂಬಿನಂತಹ ಮೊಲೆಗಳು ಮತ್ತು
ಕಪ್ಪು ತೊಟ್ಟುಗಳ ಒದರಾಟ ನನಗೂ
ಇಷ್ಟವಾಗತೊಡಗಿದ್ದವು.

೫

ಶಾಲೆಯ ಚದುರಂಗದಾಟದ ಮಧ್ಯೆ
ಹಳೆ ಪುಸ್ತಕಗಳು ಮತ್ತು ಜಿರಳೆಗಳು,

ಮಾಸಿದ ಕನಸುಗಳ ನಡುವೆ ಮತ್ತು
ಆಯಾಸಗೊಳ್ಳುವ ಪಂದ್ಯಗಳ ಜೊತೆಗೆ
ನಾನು ಮರದಂತೆ ಎತ್ತರವಾಗಿ ಬೆಳೆದುಬಿಟ್ಟಿದ್ದೆ;
ರಸ್ತೆಯಲ್ಲಿ ಹಸಿರಿನಿಂದ ಹಳದೀ ಕಡೆಗೆ
ತರಾತುರಿ ಸಾಗಿದ್ದೆ. ಈಗ ಗೊತ್ತುಗುರಿ ಇಲ್ಲದೆ
ಬೆಟ್ಟ ಕಣಿವೆಗಳಲ್ಲಿ ಅಲೆಯುತ್ತ ಮಧ್ಯಾಹ್ನಗಳೆಲ್ಲ
ಗ್ರೀನ್‌ಸ್ನಾಕ್ ಮಾಡುತ್ತ ಸಾಯಂಕಾಲ ರಸವತ್ತಾಗಿ
ಕಾಲ ಕಳೆಯುತ್ತಿದ್ದೆ. ನನ್ನ ಬಾಲ್ಯದ
ಸೋಮಾರಿತನದಿಂದ ನನ್ನ ಹಣೆಬರಹ
ನಾನೇ ಬರೆದುಕೊಂಡು ನನ್ನ ಹಾಡನ್ನು
ನಾನೇ ಹಾಡುಕೊಳ್ಳುತ್ತೇನೆ ಭವಿಷ್ಯವಿಲ್ಲದ
ದೇಹ ಎಂದು.

Assame: Nilim kumar,
English: Pradip Acharya

೮ ಜತೆ

ಸಹೋದರ
ಎಲ್ಲಿಂದ ಬರುತ್ತಿರುವೆ?
ನಿನ್ನ ಹೆಗಲ ಮೇಲಿರುವ ಆ ಎಲ್ಲ ಸತ್ತ
ಹಕ್ಕಿಗಳನ್ನು ಯಾವ ಸೀಮೆಗೆ ಹೊಯ್ಯುತ್ತಿರುವೆ
ಸಹೋದರ?

ಆ ಹಕ್ಕಿಗಳಿಗೆ ಪ್ರಾಣ ನೀಡಲು
ನನ್ನ ತಾಯಿಯ ಹತ್ತಿರಕ್ಕೆ ಕೊಂಡೊಯ್ಯುತ್ತಿರುವೆ
ತಂಗಿ, ಮಳೆ ಈ ಹಕ್ಕಿಗಳಿಗೆ ಸಾವು ತಂದಿದೆ;

ನಿನ್ನ ತಾಯಿ ಎಲ್ಲಿಹಳು ಸಹೋದರ?

ಆ ಶಿಖರಗಳ ಹಿಂದೆ ರಣಹದ್ದುಗಳಂತೆ
ಬಾಗಿರುವ ಪರ್ವತಗಳಲ್ಲಿ, ಬೀಸುವ ಗಾಳಿ
ಹಿಂದಿರುವ ಮನೆಗಳಲ್ಲಿ, ಅದರ ಹಿಂದೆ ಎಡಿವಿ
ಬಿದ್ದು ಹಾರುತ್ತಿರುವ ಮೋಡಗಳಲ್ಲಿ, ನಕ್ಷತ್ರಗಳ
ಆ ಕಡೆಗೆ ಇರುವ ಆಕಾಶದಲ್ಲಿ –
...ಮತ್ತು ಹಾಡಿನ ಗೋಳಾಟದೊಂದಿಗೆ ಬದುಕುವ
ನೆಲದಲ್ಲಿ, ನೇರಳೆ ಬಣ್ಣದ ಕೊಳ ಕಾಣಿಸುತ್ತದೆ;
ಅಲ್ಲಿ ನೈದಿಲೆ ಹೂವಾಗಿ ನನ್ನ ತಾಯಿ
ವಾಸ ಮಾಡುತ್ತಾಳೆ.

ಆ ಪರ್ವತಗಳನ್ನು ಹೇಗೆ ದಾಟುವೆ ಸಹೋದರ?
ಬಿರುಗಾಳಿ ನಿನ್ನನ್ನು ಹಿಸುಕಿ ನಿರ್ಜೀವ ಮಾಡುತ್ತದೆ,
ಮೋಡಗಳು ನಿನ್ನ ಹುಗಿದು ಮಣ್ಣು ಮಾಡುತ್ತವೆ,
ನಕ್ಷತ್ರಗಳು ಸುಟ್ಟು ಕರುಕಲು ಮಾಡುತ್ತವೆ.

ತಂಗಿ ನಾನು ಹಾಡಾಗಿ ಸಾಗುತ್ತೇನೆ,
ಶಿಲೆಗಳ ಮೂಲಕ ಹಾಯುತ್ತೇನೆ,
ಎಲೆಗಳ ಜೀವ ಪಡೆದುಕೊಂಡು ಪುಳಕ
ಮೂಡಿಸುತ್ತೇನೆ.

ಸಹೋದರ ನಿನ್ನ ಜೊತೆಗೆ ನನ್ನನ್ನು
ಕರೆದೊಯ್ಯುವೆಯ? ನಿನ್ನ ತಾಯಿಯನ್ನು
ನಾನು ಅಮ್ಮ ಎಂದು ಕರೆಯುತ್ತೇನೆ.
ನಿನ್ನ ಹಾಡು ಕೇಳಲು ನನ್ನ ಕೇಶರಾಶಿ
ಬಿಚ್ಚಿ ಬಾಹುಗಳನ್ನು ಚಾಚಿ
ಅಂತರ್ಯವನ್ನು ತೆರೆದಿಡುತ್ತೇನೆ.

ತಂಗಿ ನೀನು ನನ್ನ ಜೊತೆಗೆ ಬಂದರೆ
ನನ್ನ ತಾಯಿ ಕೋಪಿಸಿಕೊಳ್ಳುವಳು,
ಹೇಗಾದರೂ ಆಗಲಿ ನಾನು ಒಂಟಿ.

ಸಹೋದರ ಹಾಗಾದರೆ ಮಳೆ ನನ್ನನ್ನು
ಸಾಯಿಸಲಿ ಒಂದು ಪಕ್ಷಿಯಾಗಿ
ನಿನ್ನ ಹೆಗಲ ಮೇಲೆ ನೇತಾಡುತ್ತ ಬರುವೆ.
ನಿನ್ನ ತಾಯಿಯನ್ನು ನೋಡಿ
ಅಮ್ಮ ಎಂದು ಕರೆಯುತ್ತೇನೆ,

Assame: Nilim kumar,
English: Pradip Acharya

೯ ಮಹಿಳೆ

ನೀನು ನೀರಿನಂತೆ ತಂಪು,
ಒಂಟೆಯಂತೆ ಉದ್ದನೆ ಕತ್ತು ಹೊರಕ್ಕೆ
ಚಾಚುತ್ತಿ ಸಮುದ್ರದ ಬೆಳದಿಂಗಳಿಗೆ.

ನಿನ್ನ ಎದೆ ತಂಪು
ಹಸಿರು ಮಾತನಾಡುತ್ತಿ ಆದರೆ
ನಿನ್ನ ಹೃದಯ ನೀಲಿ ಬಣ್ಣ,
ನಾಯಿಗಳೆಂದರೆ ನಿನಗಿಷ್ಟ ಆದರೆ
ಬೆಕ್ಕುಗಳಿಗೆ ಹೆದುರುತ್ತಿ,
ಹೂಗಳನ್ನು ನೋಡಿದರೆ ಅಸೂಯೆ
ಮರದ ಕೆಳಗೆ ನಿದ್ದೆ ಮಾಡಲಾರೆ
ಕುದುರೆ ಪಂದ್ಯ ನೋಡಲಾರೆ.

ಸಾಯಂಕಾಲ ದೀಪ ಹಚ್ಚುವೆ,
ರಾತ್ರಿ ಬೆಳೆದಂತೆ ಕೊಳಲಿಗೆ
ನಿನ್ನ ಮನಸ್ಸು ಹಾತೊರೆಯುವುದು;
ನೀನು ನಿದ್ದೆ ಮಾಡುತ್ತಿರುವ ತುಟಿಗಳ
ಬಾಗಿಲಲ್ಲಿ ಜಮೂನ್ ಮರ ನಿಂತಿದೆ.
ಭೂಮಿಯಲ್ಲಿ ರಕ್ತ, ಆಕಾಶದಲ್ಲಿ ಎಲುಬುಗಳ
ಕನಸು ಕಾಣುತ್ತೀಯ ಕಣ್ಣು ರೆಪ್ಪೆಗಳ ಕೆಳಗೆ
ಅದು ನಿನ್ನ ಹೃದಯದಲ್ಲಿ ನಿಲ್ಲುವುದಿಲ್ಲ.

ನೀನು ಮಸಣದಲ್ಲಿ ಹಾಡಬಲ್ಲೆ
ಗಾಳಿಯ ಸುಳಿಯಲ್ಲಿ ಸಂಚರಿಸುವೆ
ಮಧ್ಯಾಹ್ನ ರಾತ್ರಿಗಳಿಗೆ ವಿಧಾಯ ಹೇಳುವೆ.
ತಂಪಾದಾಗ ಕಾವಾಗುವೆ
ಕಾವಾದಾಗ ತಂಪಾಗುವೆ, ತಂಪು ಅಥವಾ ಕಾವು.
ಬೇಧಿಸಿ ಬರುವೆ ರಹಸ್ಯಗಳನ್ನು
ಬಳ್ಳಿಯಂತೆ ಹಸಿರು ಚಿತ್ರದ ಮೇಲೆ ಏರಿ ನಿಲ್ಲುವೆ
ದಾಹದ ಶಿಲೆಗಳು ಹಿಗ್ಗಿ ರಕ್ತ ಸೋರಿ
ಚುಕ್ಕೆಗಳ ಶಿಲ್ಪಿ ಮೂಡಿಸುವೆ.

Assame: Nilim Kumar, English: Niren Thakuria

೧೦ ಮಿಜೊರಾಂನಲ್ಲಿ

ಮಿಜೊ ಛಾವಣಿ ಆಕಾಶದ ಕೆಳಗೆ ರಾತ್ರಿ ಕಳೆದು
ಮತ್ತೊಂದು ದಿನ ಬಿದ್ದುಹೋಯಿತು.

ಸಾಯಂಕಾಲ ಐದಕ್ಕೆ ಸೂರ್ಯಕಿರಣಗಳು ಸಾಯುವಾಗ
ದಿನದ ಬಸಿರು ಮಿಲನಗೊಳ್ಳುತ್ತದೆ ರಾತ್ರಿಯೊಂದಿಗೆ.
ಹೊಂಬಣ್ಣ ಮುಸುಕಿದ ಇಳಿಜಾರು ಕಣಿವೆಗಳ
ಬಾಹ್ಯರೇಖೆಗಳು ಮಂಜಿನಿಂದ ಆವೃತಗೊಳ್ಳುತ್ತವೆ.

ನಡೆಯುವ ದಾರಿಗಳು
ಗಲ್ಲಿ ಓಣಿ ಸಾಗಿ ಆಕಾಶದ ಬಾಗಿಲಲ್ಲಿ ಇಣಿಕಿ,
ಹೆದರಿಕೆಯಿಲ್ಲದ ನಿಶ್ಶಬ್ದ, ವಿದ್ಯುತ್ ದೀಪ-ಕಂಬಗಳ ಕೆಳಗೆ
ನೇಯ್ದುಕೊಳ್ಳುತ್ತದೆ; ಶೋಕದ ಗರ್ಭದಿಂದ
ಮೇಳದ ಹಾಡುಗಳು ಹುಟ್ಟಿ ಬರುತ್ತವೆ.

ಬದುಕಿದ್ದ ಮತ್ತೊಬ್ಬ ಸತ್ತ.

ಶೋಕಿಸುವ ಮನೆಯೊಳಗೆ
ನಗಾರಿ ಮೊಳಗಿ ದಿನ ಜಾರಿಕೊಳ್ಳುತ್ತದೆ ಕತ್ತಲಿಗೆ.
ಹೇಳಿದರು ಅವರು ಮುದುಕನಿಗೆ ಕ್ಯಾನ್ಸರ್ ಎಂದು;
ಪತ್ನಿ ಕಿರುಚಿದಳು, ಇಬ್ಬರು ಹೆಣ್ಣು ಮಕ್ಕಳು
ಅಳತೊಡಗಿದರು,
ಬಂದಿದ್ದವರು ಪ್ರಾರ್ಥನೆ ಮಾಡುತ್ತ ಧೈರ್ಯ ಹೇಳಿದರು,
ಅವನು ನಿದ್ದೆ ಮಾಡುತ್ತಾನೆ ಎಂದುಕೊಂಡರು ಮಕ್ಕಳು.

ನಿಜವಾದ ಸ್ಮರಣೆಯೆಂದರೆ
ಎರಡು ಹೂಗೊಂಚಲು ಆತನ ನಿಂತ
ಹೃದಯದ ಮೇಲೆ ಕುಳಿತು ಅವನ ಸಾವನ್ನು
ಸಾರುತ್ತಿದ್ದವು.

ಒಬ್ಬ ಮಗಳು ಅಳುತ್ತಲೆ ಇದ್ದಳು.

ಎಲ್ಲೋ ಕಾಂಕ್ರೀಟ್ ನಗರದ ಆಚೆ ಇರುವ
ಇಳಿಜಾರು ಕಣಿವೆಯಲ್ಲಿರುವ ಗುಡಿಸಿಲುಗಳ
ನಡುವಿನ ಜೂಮ್ ಕೃಷಿಯ ಹೊಲಗಳಿಂದ
ಹೊಗೆ ಏಳುತ್ತಿತ್ತು ಸುರಳಿಯಾಕಾರದಲ್ಲಿ
ಮೋಡಗಳನ್ನು ಮದುವೆಯಾಗಲು.

ಬಿದಿರು ಮೆಳೆಗಳು ಉಜ್ಜಿಕೊಳ್ಳುತ್ತಿವೆ,
ಒಂದರ ಮೇಲೆ ಒಂದು ಬಿದ್ದು; ಒಯ್ಯಾರವಾಗಿ
ನಡೆಯುವ ವೇಗದ ಹೆಜ್ಜೆಗಳ ಹುಡುಗಿಯರ
ದೇಹಗಳಲ್ಲಿ ಏರು ತಗ್ಗುಗಳು ಎದ್ದು ಕಾಣುತ್ತಿವೆ
ಕುಸುರಿ ಮಾಡಿದ ಬಣ್ಣ ಬಣ್ಣದ ಗೆರೆಗಳಲ್ಲಿ.

ಜಾಗಟೆಗಳು ಪ್ರತಿಧ್ವನಿಸಿ ಎಳೆ ಹುಡುಗರು ಪ್ರೇಮ
ಗೀತೆಗಳನ್ನು ಹಾಡುತ್ತಾರೆ ಪದೇ ಪದೇ
ಸೂರ್ಯಸ್ತ ನೋಡುತ್ತ, ಹುಡುಗಿಯರು
ಕ್ರೈಸ್ತನ ಕುರಿತ ಹಾಡುಗಳನ್ನು ಹಾಡುತ್ತಾರೆ.

ನಗರದ ಮತ್ತೊಂದು ಮೂಲೆಯಲ್ಲಿ
ದಣಿದ ಮಹಿಳೆಯರು ಗಂಡಸರು ಮನೆಗಳಿಗೆ
ಹಿಂದಿರುಗುತ್ತಾರೆ, ಪ್ರಿಯ ಪ್ರಿಯತಮರು ಒಂದು
ಕಡೆ ಸೇರುತ್ತಿದ್ದಂತೆ ಚರ್ಚಿನ ಗಂಟೆ ಮೊಳಗುತ್ತದೆ.

ಬದುಕಿರುವ ಜೀವನ ಮುಂದುವರಿಯುತ್ತದೆ;
ಶೋಕದ ಮನೆಯಲ್ಲಿ ಕೆಂಪು ಚಹ ಸರಬರಾಜಾಗುತ್ತದೆ,
ಪ್ರಾರ್ಥನೆ ಹಾಡುಗಳು ಮುಂದುವರಿಯುತ್ತವೆ
ಸತ್ತ ಆತ್ಮಕ್ಕಾಗಿ. ನಾನು ಪ್ರಾರ್ಥಿಸುತ್ತೇನೆ
ಬದುಕಿರುವ ಆತ್ಮಗಳಿಗೆ.

ಹೋಟಲ್ ಕೋಣೆಯೊಳಗೆ ರಾತ್ರಿ ಬೆಳೆಯುತ್ತದೆ
ನನ್ನ ಕೈಗಳಲ್ಲಿ; ನನ್ನ ಕವಿತೆಯ ಕನಸಿನಲ್ಲಿ.
ಮಿಲಿಯನ್‌ಗಟ್ಟಲೆ ಜನರು ಪರ್ವತ ಕಣಿವೆಗಳಲ್ಲಿ
ಸಾಗುತ್ತಿದ್ದಾರೆ ರಥಗಳಲ್ಲಿ ಕುಳಿತು ಅಂಕುಡೊಂಕು
ಸಾಗಿರುವ ಕ್ಷಿತಿಜದ ಕಡೆಗೆ.

ನೆನ್ನೆಯ ನಾಯಕರು ಕುದುರೆಗಳ ಮೇಲೆ
ಸಾಗುತ್ತ ಜಯಶಾಲಿಗಳ ಮೇಲೆ ಗುಂಡು
ಹಾರಿಸುವುದನ್ನು ನೋಡಿದೆ.

ಸೌಮ್ಯ ನಿಶ್ಯಬ್ಧ, ಗಂಡು ಹೆಣ್ಣಿನ ಕೈಗಳಲ್ಲಿ
ಕಷ್ಟದ ಬೆವರು ಸುರಿಯುತ್ತಿದೆ. ನಿದ್ದೆಯಿಂದ ಎದ್ದಾಗ
ಹೀರೋಗಳು ಆಗಲೇ ಮನೆಯಲ್ಲಿದ್ದರು.

English: Almond D Syiem

೧೧ ಲೂಸಿಯಾ

ಲೂಸಿಯಾ,
ಸಾಯಂಕಾಲ ಪ್ರಕಟಿಸಿದೆ
ರಾತ್ರಿಯ ಆಗಮನವನ್ನು, ಎಳೆ ತಾಯಂದಿರು
ಬರಿಕಾಲುಗಳಲ್ಲಿ ಆಡುತ್ತಿರುವ ತಮ್ಮ ಮಕ್ಕಳನ್ನು
ಮನೆ ಒಳಕ್ಕೆ ಕರೆಯುತ್ತಿದ್ದಾರೆ: ಅಕ್ಕ ಪಕ್ಕದ
ಮನೆಗಳ ನಾಯಿಗಳು ನನ್ನನ್ನು ನೋಡಿ
ಬೊಗಳುತ್ತಿವೆ ಹೊಸಬನನ್ನು ನೋಡಿದಂತೆ.
ಒಂದು ಎಳೆ ಮಿಂಚಿನಿಂದ ಆಕಾಶ ಗುರ್ರೆಂದಿದೆ,
ಬೇಸಿಗೆಯ ದೇವತೆಗಳು ಪ್ರಮಾಣ ಮಾಡಿದ್ದಾರೆ
ರೋಷದ ಕಣ್ಣೀರು ಭೂಮಿಯ ಮೇಲೆ ಸುರಿಸುವುದಾಗಿ.
ಏನಾಶ್ಚರ್ಯ ಲೂಸಿಯಾ? ಈ ಸಮಯದಲ್ಲಿ
ನಿನ್ನನ್ನು ಜ್ಞಾಪಿಸಿಕೊಳ್ಳುತ್ತಿದ್ದೇನೆ.

ನನ್ನ ಕೋಣೆ ಗೊತ್ತಿಲ್ಲದ ಒಂದು ಮಹಿಳೆ;
ಪ್ರತಿ ದಿನ ಒಳಗೆ ಪ್ರವೇಶಿಸುತ್ತೇನೆ, ನನ್ನ ಕತೆ
ಸಂಭಾಷಣೆ ಕಿವಿಗೊಟ್ಟು ಕೇಳುತ್ತವೆ ಹರಿದಾಕಿದ
ಕಾಗದ ಚೂರು ಪುಸ್ತಕಗಳು ನಿರಂತರವಾಗಿ,
ನಿನ್ನ ಹೆಸರು ಅವುಗಳಿಗೆ ಆಪ್ತ ಪರಿಚಯ.

ರಾತ್ರಿಯ ಕತ್ತಲು ಮಂಜಿನಂತೆ ಬೀಳುತ್ತದೆ.
ನಿಶ್ಯಬ್ದ ಭೂಮಿಯ ಮೇಲೆ ಬಿದ್ದುಹೋಗಿದೆ,
ನಿನ್ನ ನಗುವು ಉಳಿದುಹೋಗಿದೆ ನಿಗೂಢವಾಗಿ.
ನಿನ್ನ ತುಟಿಗಳಲ್ಲಿ ಏನು ಅಡಗಿದೆಯೊ,
ಹೇಳು ಮಹಿಳೆ ಯಾರು ಏಕೈಕ ಅಂದಗಿತ್ತಿ?

ನೀನು ಸರಳವೂ ಅಲ್ಲ ಜಟಿಲವೂ ಅಲ್ಲ–
ನಿಜವಾಗಿಯೂ ನನಗೆ ಗೊತ್ತಿಲ್ಲ.
ಹುಡುಗಿಯರೆ, ಆಕಳಿಸುವ ಕಣಿವೆಗಳಿಂದ–

ಮೋಡಗಳು ತಮ್ಮ ಪದ್ಧತಿಗಳನ್ನು ನೆರವೇರಿಸುವ
ಪರ್ವತಗಳಿಂದ ಬಂದವರೆ ತೋರಿಸಿ ನಿಮ್ಮ
ಅಂಗೈಗಳಲ್ಲಿರುವ ಹೆದ್ದಾರಿಗಳನ್ನು,
ನಿಮ್ಮನ್ನು ಸದ್ದಿಲ್ಲದೆ ಕರೆದೊಯ್ಯುವೆ
ಅಣಬೆ ಗಿಡಮೂಲಿಕೆ ತೇವದ ಎಲೆ
ಕಾಡುಬೆರ್ರಿ ನೆನೆದ ಭೂಮಿಗೆ.

ನನಗೆ ಅವಕಾಶ ನೀಡು, ಪರಿಚಯಿಸುವೆ ಸೌದೆ ಆಯುವ
ಸಾವಿರ ನೆರಿಗೆಗಳುಳ್ಳ ಅಜ್ಜಿಯನ್ನು, ಕುಡುಕ
ಸೋಮಾರಿ ಗಂಡಸು ನದಿಯ ಪಕ್ಕದಲ್ಲಿ ಕುಳಿತು
ಕಾಲಹರಣ ಮಾಡುತ್ತಾನೆ, ನಗರವಾಸಿಗಳ ಪ್ರೀತಿ
ಮತ್ತು ವಂಚನೆಯ ನಡುವಿನ ವ್ಯತ್ಯಾಸ ಅರಿಯದ
ಹಳ್ಳಿ ಬಾಲೆಯರೆ ಏನು ಹೇಳಲಿ?

ನನ್ನ ನೆಲದ ಬಗ್ಗೆ ಮುಕ್ತಾಯವಿಲ್ಲದೆ ಮಾತನಾಡಬಲ್ಲೆ,
ನನ್ನ ತಲೆಮಾರು, ದಂತ ಕತೆಗಳು, ಭೌಗೋಳ.
ನಾನು ಹೇಳಬಲ್ಲೆ ಪ್ರೀತಿ ಮತ್ತು ಬಲಿದಾನ
ಮಾಡಿದ ಚಕ್ರಾದಿಪತಿಗಳ ಬಗ್ಗೆ, ಅವರು ಗೆದ್ದು ತಂದ
ವಿದೇಶಿ ಮಹಿಳೆಯರ ಬಗ್ಗೆ; ಬಿಳಿಯರು ನಮಗೆ
ಕಲಿಸಿಕೊಟ್ಟರು ಕೀಳರಮೆಯಾಗಿ ಬದುಕುವುದನ್ನು;
ಕಪ್ಪು ಜನರು ಬಂದರು ಮುಖದ ಮೇಲೆ ನಗು
ತೋರಿಸುತ್ತ ಹೃದಯದಲ್ಲಿ ವಿಷ ಅಡಗಿಸಿಕೊಂಡು.
ಇಂದಿಗೂ, ದುರಂತ ಚರಿತ್ರೆಯುಳ್ಳ ಪರ್ವತಗಳನ್ನು
ಗಾಯಗೊಳಿಸುತ್ತಿದ್ದಾರೆ, ಉಚ್ಚರು ತಮ್ಮ ಹೆಸರುಗಳನ್ನು
ಕಾರು ಮನೆಗಳ ಜೊತೆಗೆ ವಿನಿಮಯ
ಮಾಡಿಕೊಳ್ಳುತ್ತಿದ್ದಾರೆ.
ಲೂಸಿಯಾ, ನನ್ನನ್ನು ಮರೆತುಬಿಡು.

English: Almond D Syiem

೧೨ ಕ್ರಿಸ್‌ಮಸ್ ಹಬ್ಬ

ಕ್ರಿಸ್‌ಮಸ್ ದಿನ
ಕ್ರೈಸ್ತ ಧರ್ಮಾಧಿಪತಿಗಳು
ಸುಂದರ ಗರಿ ಗರಿ ನಿಲುವಂಗಿ,
ಚಿನ್ನದ ಕಿರೀಟಗಳನ್ನು ಧರಿಸಿದ್ದಾರೆ.

ಪಾದ್ರಿಗಳು ಸಾಲು ಸಾಲು ಮೇಣದ ಬತ್ತಿಗಳನ್ನು
ಬೆಳಗಿಸುತ್ತಿದ್ದಾರೆ, ಅವರ ಕೈಗಳಲ್ಲಿ ಸತ್ಯವೇದ ಬೈಬಲ್
ಗ್ರಂಥವೂ ಇದೆ. ನೂರಾರು ವರ್ಷಗಳಿಂದಲೂ ಬಗ್ಗದೆ
ನಿಂತಿರುವ ಎತ್ತರವಾದ ಹೊಂಬಣ್ಣದ ಚರ್ಚ್ ಒಳಗೆ
ಹಾಡುತ್ತಿದ್ದಾರೆ ಕ್ರಿಸ್‌ಮಸ್ ಹಬ್ಬದ ಗೀತೆಗಳನ್ನು.
ಈ ಜನ ಜೇಸಸ್ ತಲೆಗೆ ಮುಳ್ಳು ಕಿರೀಟ ಹಾಕಿ
ಶಿಲುಬೆಗೆ ಏರಿಸಿ, ಗಾಢ ಚಳಿಯ ಕತ್ತಲ ರಾತ್ರಿ
ತುಂಡು ಬಟ್ಟೆಯಲ್ಲಿ ನಿಲ್ಲಿಸಿದ್ದಾರೆ ಒಂದು ಮೂಲೆಯಲ್ಲಿ.
ಏಸು ಅತಿ ದುಃಖದೊಂದಿಗೆ ಮೌನ ವಹಿಸಿದ್ದಾನೆ; ಆತನ
ಎರಡು ಕೈ ಕಾಲುಗಳ ಮೇಲೆ ಉದ್ದವಾದ
ಮೊಳೆಗಳನ್ನು ಹೊಡೆದಿದ್ದು ಹೃದಯ ಸ್ತಬ್ದಗೊಂಡು
ಸದ್ದಿಲ್ಲದೆ ರಕ್ತ ಒಸರುತ್ತಿದೆ.

ಕ್ರಿಸ್‌ಮಸ್ ದಿನ
ಬಿಷಪ್ ಕ್ರೈಸ್ತ ಧರ್ಮಾಧಿಪತಿಗಳು
ಸುಂದರ ಗರಿ ಗರಿ ನಿಲುವಂಗಿ ಧರಿಸಿ,
ಚಿನ್ನದ ಕಿರೀಟಗಳನ್ನು ಧರಿಸಿದ್ದಾರೆ.

Manipuri: Memchobi
English: Robin S Ngangom

೧೩. ನನ್ನ ತಾಯಿ

ಪರ್ವತಗಳ ಮುಖ್ಯಸ್ಥನ ಮಗಳು
ದಟ್ಟ ಕಾನನದ ಪ್ರಶಾಂತತೆ ಆಕಾಶ ಪರ್ವತಗಳು
ಒಂದಾಗಿರುವ ವೈಭವ ಭೂಮಿಯಷ್ಟೆ ದೃಢ ಸಂಕಲ್ಪ.
ನನ್ನ ಬೆಟ್ಟದ ತಾಯಿ ತಲೆಗೆ ಬಟ್ಟೆ ಸುತ್ತಿ ನಡುಪಟ್ಟಿ
ಬಿಗಿದು ಚಪ್ಪಲಿ ಇಲ್ಲದ ಪಾದಗಳಲ್ಲಿ ಮುಳ್ಳುಗಳನ್ನು
ತುಳಿಯುತ್ತ ಬೆನ್ನಿನ ಮೇಲೆ ಭಾರಿ ತೂಕದ ಬ್ಯಾಸ್ಕಟ್
ಹೊತ್ತು ಸಾಗುತ್ತಾಳೆ ಬೆಟ್ಟದಿಂದ ಬೆಟ್ಟಕ್ಕೆ,
ಪರ್ವತ ಮಾಲೆಗಳ ದಾಟಿ ಹೋಗುತ್ತಾಳೆ.
ಪರ್ವತ ಮಾಲೆಗಳ ಆಳ ಪಾತಾಳ ಇಳಿಜಾರುಗಳಲ್ಲಿ
ಹರಿಯುವ ಝರಿಗಳಿಂದ ನೀರು ಹೊಯ್ಯುತ್ತ ದೂರದ
ಆಕಾಶ ಜಗಲಿಗಳಲ್ಲಿ ಕೃಷಿ ಮಾಡುತ್ತ –
ದಣಿದಾಗ ಕುಸಿದು ಕುಳಿತು ಕುಡಿಯುತ್ತಿದ್ದಳು ಗಂಜಿ;
ಹೊಲದ ಎಲ್ಲಾ ದಿಕ್ಕುಗಳಲ್ಲೂ ಓಡಾಡುತ್ತ
ಕಾಡುಹಂದಿ ಕೋತಿಗಳನ್ನು ಓಯ್... ಓಯ್...ಎಂದು
ಓಡಿಸುತ್ತ ಪಸಲು ಕಾಯುವಳು ಬೆಟ್ಟದ ತಾಯಿ.
ಬೆಟ್ಟಗಳನ್ನು ಹತ್ತಿ ಇಳಿಯುತ್ತ –
ಬೆವರು ಒರೆಸುತ್ತ ಕೆಲಸ ಮಾಡುವ ನನ್ನ
ಬೆಟ್ಟದ ತಾಯಿಯನ್ನು ಒಮ್ಮೆ ಕೇಳಿದೆ
'ನನ್ನ ಪ್ರೀತಿಯ ತಾಯೆ ಏನು ಹೊತ್ತು
ಸಾಗುತ್ತಿರುವೆ ಆ ನಿನ್ನ ಭಾರವಾದ ಬ್ಯಾಸ್ಕಟ್‌ನಲ್ಲಿ?
ನಾನು ನೋಡಬಹುದೆ ದಯವಿಟ್ಟು ತೋರಿಸು'
'ಇಗೋ ನೋಡು' ಎನ್ನುತ್ತ ಬೆನ್ನಿನ ಮೇಲಿರುವ
ಬ್ಯಾಸ್ಕಟ್‌ನ್ನು ಬಾಗಿ ತೋರಿಸಿದಳು ಸ್ವಲ್ಪವೂ ಅಲ್ಲಾಡದೆ.
ಕುತೂಹಲದಿಂದ ನೋಡಿದೆ? ಆ ಬ್ಯಾಸ್ಕಟ್ ಒಳಗೆ
ಬೆಟ್ಟದ ತಾಯಿಯ ಸ್ವಂತ ಬ್ಯಾಸ್ಕಟ್ ಇದ್ದು
ಆಕೆಯ ಮುದಿಯ ಗಂಡ ಮತ್ತು ಯೌವ್ವನ ತುಂಬಿದ
ಮಗ ಆರಾಮಾಗಿ ಕುಳಿತಿದ್ದರು.

ಆಶ್ಚರ್ಯದಿಂದ ಕೇಳಿದೆ. 'ಇದೇನು ತಾಯಿ?'
ಆಕೆ ಒಮ್ಮೆ ನನ್ನ ಕಡೆಗೆ ನೋಡಿ ಶಾಂತವಾಗಿ
ಹೇಳಿದಳು–
'ಅವರು ಹೇಗೆ ಬದುಕುವರು
ನಾನು ಹೊತ್ತುಕೊಂಡು ಹೋಗದಿದ್ದರೆ?'
ಮರು ಮಾತನಾಡದೆ ಎಂದಿನಂತೆ ಅಲ್ಲಿಂದ
ಸಾಗಿ ಹೋದಳು ಶಾಂತ ಮತ್ತು ಸ್ಪಷ್ಟವಾಗಿ
ಆ ಬೆಟ್ಟದ ತಾಯಿ.

Manipuri: Memchobi
English: Robin S Ngangom

೧೪ ವಯಸ್ಸಾದ ಮಹಿಳೆಯ ಗಡಿಗೆ

ಆಕೆಯ ಮರಣದ ನಂತರ
ಆ ಹಳ್ಳಿಜನರಿಗೆ ತಿಳಿಯಿತು ಕೊಡದ ತುಂಬಾ
ನೀರು ತುಂಬಿ ಬಿಟ್ಟೋದ ಆ ವಯಸ್ಸಾದ ಮಹಿಳೆಯ
ಬಗ್ಗೆ; ಆದರೆ ಉರಿಯುವ ಕಾಡುಬೆಂಕಿ ನಂದಿಸಲು,
ಈಗ ಗಡಿಗೆಯೊಳಗಿನ ನೀರು ಬತ್ತಿಹೋಗಿದೆ.

ಈಗ ಅವರಿಗೆ ಜ್ಞಾನವಾಗಿದೆ–
ಆ ವಯಸ್ಸಾದ ಮಹಿಳೆ ತನ್ನ ತಲೆಯ ಮೇಲೆ
ತುಂಬಾ ಕಷ್ಟದಿಂದ ನೀರು ಹೊರುತ್ತಿದ್ದಳು ಎನ್ನುವುದು;
ಕೊಡದ ತುಂಬಾ ನೀರು ತುಂಬಿ ತುಳುಕಾಡುತ್ತಿದ್ದರೂ
ಆಕೆ ಎಂದೂ ನೀರು ಕುಡಿಯಲಿಲ್ಲ.

ಆಕೆಗೆ ಗೊತ್ತು ಒಂದು ಬೊಗಸೆ ನೀರು ಕುಡಿದಿದ್ದರೂ
ಹಳ್ಳಿಯ ಜನ ಅಲ್ಲೋಲ ಕಲ್ಲೋಲ ಎಬ್ಬಿಸುತ್ತಿದ್ದರು,
ಆಕೆ ಅವರ ಗೋಳಾಟವನ್ನು ಕೇಳಲು
ಇಷ್ಟಪಡುತ್ತಿರಲಿಲ್ಲ.

ಸ್ವಾರ್ಥ ಜನರು ತಮ್ಮ ಬಗ್ಗೆ ಯೋಚಿಸುತ್ತಿದ್ದರೆ ಹೊರತು
ಹಳ್ಳಿಗೆ ನೀರು ಹೊರುತ್ತಿದ್ದ ಆಕೆ ಬಾಯಾರಿಕೆಯಾಗಿ
ಬಳಲಿದ್ದು ಯಾರೂ ನೋಡಿರಲಿಲ್ಲ ಎಂದೂ.
ಕೈಗಳನ್ನು ಅಪ್ಪಿಕೊಂಡು ಕಾಯುತ್ತಿದ್ದರೂ
ಆಕೆಯ ತುಟಿಗಳ ಮೇಲೆ ಒಂದು ಹನಿ ನೀರನ್ನೂ
ಯಾರೂ ಬಿಡಲಿಲ್ಲ; ದಿನಾಗಲೂ ಕಡಿದಾದ ಪರ್ವತ
ಝರಿಗಳಿಂದ ಹಳ್ಳಿ ಜನರಿಗೆ
ಹೇಗೆ ಹೊತ್ತು ತರುತ್ತಿದ್ದಳು ತಣ್ಣನೆ ನೀರು
ಎನ್ನುವುದನ್ನು ಯಾರೂ ನೋಡಿರಲಿಲ್ಲ.

ಈಗ ಬೆಂಕಿ ಹೊತ್ತಿ ಉರಿಯುತ್ತಿದೆ ಕಾಡು,
ಉರಿಯುತ್ತಿರುವ ಕಾಡು ನಂದಿಸಲು
ಮತ್ತು ದಾಹಗೊಂಡ ಆ ಹಳ್ಳಿಗೆ
ತಣ್ಣನೆ ನೀರು ಹೊರುವವರು ಯಾರು?

Manipuri: Raghu Leishangthem
English: Robin S Ngangom

೧೫ ಅರ್ಧ ಮನುಷ್ಯರ ನಾಡು

ಆರು ತಿಂಗಳ ಕಾಲ ತಲೆಯಿಲ್ಲದ ದೇಹ,
ಆರು ತಿಂಗಳ ಕಾಲ ದೇಹವಿಲ್ಲದ ತಲೆ,
ಅಂತಹ ಜನರಿರುವ ನಾಡನ್ನು ಯಾರಾದರು
ನೋಡಿದ್ದೀರಾ?
ಇಲ್ಲ! ನಾನು ನೋಡಿದ್ದೇನೆ; ಇದು ಜಾನಪದ ಕತೆಯಲ್ಲ;
ನಾನು ಅದೇ ನಾಡಿನಲ್ಲಿ ಬದುಕುತ್ತಿದ್ದೇನೆ.

ಕಲ್ಲು ಪುಡಿ ಮಾಡುವ ಯಂತ್ರಗಳಂತೆ ಆರು ತಿಂಗಳು
ಬರಿ ತಿನ್ನುವುದು, ಮಾತನಾಡುವುದೇ ಅವರ ಕೆಲಸ.
ಉಳಿದ ಆರು ತಿಂಗಳು ಭೀಮನು ತಿನ್ನುವುದು
ಶಕುನಿ ನೋವು ಅನುಭವಿಸುವುದು;
ತಲೆ ಇಲ್ಲದ ದೇಹ ತನ್ನ ಪಾಲನ್ನು ಹೊರಹಾಕುವುದು.
ಮಾತನಾಡುವುದು ತಿನ್ನುವುದು, ಕುಡಿಯುವುದು.
ಬೆವರು ಸುರಿಯುವಾಗ ಎಲುಬುಗಳು ಬಳಲುತ್ತವೆ
ಅರ್ಧ ಮನುಷ್ಯರ ನಾಡಿನಲ್ಲಿ.

ಆ ನಾಡಿನಲ್ಲಿ ಮಹಿಳೆಯರು ಇದ್ದಾರೆಯೇ?
ಅವರ ಸಂಕುಲ ಹೇಗೆ ಕಾಣಿಸುತ್ತದೆ?

ಮಹಿಳೆಯರು, ಮಕ್ಕಳೂ ಇದ್ದಾರೆ.
ಅವರದೂ ಅದೇ ಗತಿ ಅರ್ಧ ದೇಹ, ತಲೆ. ಎತ್ತರ
ದೃಢಕಾಯರು, ಚಲುವೆಯರು. ಉಡುಗೆ ನಡುಭಾಗದಿಂದ
ಕೆಳಕ್ಕೆ ತೂಗಾಡುತ್ತದೆ. ನಮ್ಮ ನಾಡಿನ ನಾರಿಯರಿಗೆ
ನೀಳ ಕೇಶರಾಶಿ, ಈ ನಾಡಿನ ಕಾನೂನಿನಲ್ಲಿ ದೇಹ
ಮುಚ್ಚಿಕೊಳ್ಳಲು ಅವಕಾಶವಿಲ್ಲ.
ಆರು ತಿಂಗಳ ಕಾಲ ದೇಹ ಅಡಗಿಕೊಳ್ಳುವಾಗ
ಅದು ಅವರಿಗೆ ವಸಂತ ಕಾಲ.

(ತಲೆ ಇಲ್ಲದ ಮಹಿಳೆ ಮತ್ತು ಪುರುಷರು
ಭೇಟಿಯಾದಾಗ ಅವರಿಗೆ ಮುಚ್ಚುಮರೆ ಇರುವುದಿಲ್ಲ)
ತಲೆ ಆರು ತಿಂಗಳ ಒಳಗೆ ಜನ್ಮ ನೀಡುತ್ತದೆ.
ಮಹಿಳೆಯರು ಮಾತನಾಡುವುದು, ತಿನ್ನುವುದರ ಜೊತೆಗೆ
ಮಕ್ಕಳನ್ನು ಉತ್ಪತ್ತಿಸುತ್ತಾರೆ. ಮಹಿಳೆ ಪುರುಷನಿಗಿಂತ ಹೆಚ್ಚು
ಆರೋಪಣೆ ಮಾಡುವುದರಿಂದ ಅವರ ಬಾಯಲ್ಲಿ
ಹಲ್ಲುಗಳಿಲ್ಲ. ದೇವರು ಚತುರತೆಯಿಂದ ಸೃಷ್ಟಿಸಿದ್ದಾನೆ
ಅವರನ್ನು.

ತಲೆ ನಡೆಯುವಾಗ, ಅದರ ಕಿವಿಗಳು ವಿಶಾಲವಾಗಿ
ಹರಡಿಕೊಂಡು ರೆಕ್ಕೆ ಬಡಿದು ಹಾರುತ್ತವೆ ಹಕ್ಕಿಗಳಂತೆ.
ಮಾತನಾಡುವಾಗ ನಾವು ಅದರ ಭಾಷೆಯನ್ನು
ಗ್ರಹಿಸಬಹುದು; ಮನುಷ್ಯ ಭಾಷೆಯನ್ನೆ ಮಾತನಾಡುತ್ತವೆ.
ಆದರೆ ತಲೆಯಿಲ್ಲದ ದೇಹದ ತೂತಿನಿಂದ ಹೊರಡುವ
ಗುಳುಗುಳನೆ ಸದ್ದು ಯಾರೂ ಅರಿಯರು; ಆದರೆ ಅದು
ವಾಸನೆಯಿಂದ ಕೂಡಿರುತ್ತದೆ.

ಇದೇ ಕಾರಣಗಳಿಂದ ಈ ರಾಜ್ಯ ಎಲ್ಲೆಲ್ಲೂ ಸುದ್ದಿಯಲ್ಲಿದೆ.
ಚಂದ್ರನು ರಾತ್ರಿ ಹೊಳೆಯುತ್ತಾನೆ, ಮಧ್ಯಾಹ್ನ ಸೂರ್ಯ.
ಆಹಾರದ ಕೊರತೆ, ಗರೀಬಿಯ ಸಂಕಟವಿಲ್ಲ,
ಬಟ್ಟೆಯ ಬಗ್ಗೆ ಗೊತ್ತೇ ಇಲ್ಲ. ಕೆಲವರು ಕುಬೇರರನ್ನು
ಮೀರುತ್ತಾರೆ. ಆರು ತಿಂಗಳ ಬೆವರು ದುಡಿಮೆಯನ್ನು
ಅಷ್ಟೇ ವಯಸ್ಸಿನ ತಲೆ ತಿಂದುಬಿಡುತ್ತದೆ ಪ್ರತಿಕಾರದಿಂದ.

ರಾಜ್ಯದಲ್ಲಿ ಸರಕಾರ ರೂಪಗೊಂಡಿರುವುದರಿಂದ
ರಾಜಕೀಯ ಹಕ್ಕುಗಳಿವೆ. ಪ್ರಜಾಪ್ರಭುತ್ವ ಸಂಪೂರ್ಣವಾಗಿ
ಗೆದ್ದು ಕುಳಿತಿದೆ ಗದ್ದುಗೆ ಮೇಲೆ.
ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ.
ಆದರೆ ಮನುಷ್ಯರ ಹೆಸರುಗಳು ಮಾತ್ರ

ದಾಖಲೆಯಾಗಿಲ್ಲ. ಇದುವರೆಗೂ ಹೆಸರಿಲ್ಲದ ನಾಗರಿಕರು,
ಸದಸ್ಯರು ಅರ್ಧ ಮನುಷ್ಯರು ನಾಡನ್ನು ಆಳುತ್ತಿದ್ದಾರೆ;
ಕಾರಣ ತಲೆಗೆ ದೇಹಕ್ಕೆ ಯಾವುದಕ್ಕೆ ಮನುಷ್ಯರ
ಹೆಸರು ನೀಡಬೇಕು ಯಾರಿಂದಲೂ ತೀರ್ಮಾನಿಸಲು
ಸಾಧ್ಯವಾಗಿಲ್ಲ. ಈ ರಾಜ್ಯ ಬಹಳವಾಗಿಯೇ ಸುದ್ದಿಯಲ್ಲಿದೆ
ಎಲ್ಲರೂ ಮಾತನಾಡಿಕೊಳ್ಳುತ್ತಾರೆ.

Manipuri: Thangjam Ibopishak
English: Robin S Ngangom

೧೬ ನಾಯಿ ಕುನ್ನಿಗಳಾಗಿ

ಪ್ರತಿ ರಾತ್ರಿ ಮಕ್ಕಳು ಮಲಗಿದ ಮೇಲೆ
ಅವರ ತಾಯಿಯ ಜೊತೆಗೆ ವಿಷಯಗಳನ್ನು
ಚರ್ಚಿಸುವೆ. ನೆನ್ನೆ ರಾತ್ರಿ ಒಂದು ಸಲಹೆ ಸೂಚಿಸಿದ್ದೆ:
'ಈ ನಾಯಿ ನರಿ ಮತ್ತು ಕೋತಿಗಳ ಮಧ್ಯೆ
ಹೇಗೆ ಬಾಳುತ್ತಿದ್ದೀವಿ, ನಾಯಿ ಕುನ್ನಿಗಳಾಗಿ?
ನಾನೊಂದು ಬಲಶಾಲಿ ಹುಲಿಯಾಗಿ ಮಾರ್ಪಡುವೆ.'

ಆಕೆ ಪರಮಾನಂದಗೊಂಡು ಪ್ರೀತಿಯಿಂದ
ನನ್ನ ಕಡೆಗೆ ನೋಡಿ ನಕ್ಕಳು; ಮಕ್ಕಳ ಆಕರ್ಷಕ
ಸ್ಕೆಚ್ ಪೆನ್ನುಗಳ ತೆಗೆದುಕೊಂಡು, ನನ್ನ ಮೇಲಿದ್ದ
ಉಡುಗೆ ಕಳಚಿ ನಗ್ನ ಮಾಡಿದಳು.
ನನ್ನ ಎದೆ ಹೊಟ್ಟೆ ಮುಖ ಕಣ್ಣುಗಳ ಮೇಲೆಲ್ಲ
ಬಣ್ಣಬಣ್ಣದ ಚಿತ್ರಗಳನ್ನು ಬಿಡಿಸಿದಳು. ಆಕೆಯ
ಬೆನ್ನ ಮೇಲೆ ಸುತ್ತಿದ್ದ ಗಿಂಗಮ್ ಕಳಚಿ
ಬಾಲ ಮಾಡಿ ಸಿಕ್ಕಿಸಿದಳು ನನಗೆ. 'ನಾಳೆ ಬೆಳಗ್ಗೆ
ಏಳುವಾಗ ದೊಡ್ಡ ಹುಲಿಯಾಗಿ ಪುಟಿದು ನಿಲ್ಲಬೇಕು'
ಆಕೆ ಮೃದುವಾಗಿ ಹೇಳಿದಳು ನನ್ನ ಕಿವಿಯ
ಒಲೆಯನ್ನು ಮುದ್ದಿಸುತ್ತ, ಆಕೆಯ ಒಳ
ಉಡುಪಿನಿಂದ ನನ್ನ ಮೈ ಮುಚ್ಚಿದಳು
ಅದಕ್ಕೆ ಒಳ ಚಡ್ಡಿ ಇರಲಿಲ್ಲ.

ಬೆಚ್ಚನೆ ಉಡುಪಿನೊಳಗೆ ರಾತ್ರಿಯಲ್ಲ
ಕಠಿಣ ಭೈರಾಗಿಯಾಗಿ ಅಭ್ಯಾಸ ಮಾಡಿದೆ.

ಬೆಳಿಗ್ಗೆ ಎದ್ದು ಮುಖದ ಮೇಲಿದ್ದ ಉಡುಪು
ಸರಿಸಿದೆ, ಓ ಎಂತಹ ಆನಂದ, ನನ್ನ ಆಸೆ
ಪೂರೈಸಿತ್ತು: ನನ್ನ ಎದುರಿಗೆ ದೇವತೆ

ಪ್ರತ್ಯಕ್ಷಳಾಗಿದ್ದಳು. ಮಿಣುಕು ನಗು ಬೀರಿ
ಹೇಳಿದಳು: ಗುರ್ರೆಂದು ಘರ್ಜಿಸು ಪ್ರಿಯತಮ,
ಹೋಗು ರಾಜವಂಶದವರಂತೆ ಹುಲ್ಲೆ
ಕಡವೆಗಳನ್ನು ಬೇಟೆಯಾಡು. ಆಕೆಯ ಎದುರಿಗೆ
ಗರ್ವದಿಂದ ಗುರುಗುಟ್ಟಿದೆ-
ನರಗಳು ಸೆಟೆದು ನಿಂತುಕೊಳ್ಳುವವರೆಗೆ
ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಘರ್ಜಿಸಿ ಹಾಸಿಗೆಯಿಂದ
ಕತ್ತು ಚಾಚಿ ಕೆಳಕ್ಕೆ ಚಂಗನೆ ಹಾರಿ ನಿಂತುಕೊಂಡೆ.

ಇದೇನು? ಏನಾಗುತ್ತಿದೆ? ನನ್ನ ಗಂಟಲಿಂದ
ಮಿಯಾ... ಮಿಯಾ...ಸದ್ದು
ಹೊರಡುತ್ತಿದೆಯಲ್ಲ ಬೆಕ್ಕಿನಂತೆ?

ನನ್ನ ಪತ್ನಿ ತಿರಸ್ಕಾರದಿಂದ ದುರುಗುಟ್ಟಿ
ನೋಡಿ 'ಹೊರಟುಹೋಗು ಇಲ್ಲಿಂದ.
ಸ್ವಲ್ಪವೂ ಇಷ್ಟವಿಲ್ಲ ನನಗೆ' ಕೋಲನ್ನು ಹಿಡಿದು
ಓಡಿಸಿಕೊಂಡು ಬಂದಳು ನನ್ನ ಹಿಂದೆಯೆ.
ಗೆಳಯರೆ ಓಡಿ ಬಂದೆ ನಾನು
ನಿಮ್ಮ ಮಧ್ಯೆ ಅಡಗಿಕೊಳ್ಳಲು.

Manipuri: Yumlembam
English: Robin S Ngangom

೧೭ ಮುಂದಿನ ಜನ್ಮ

ಮುಂದಿನ ಜನ್ಮದಲ್ಲಿ
ಸೂಳೆ ಮಗನಾಗಿ ಹುಟ್ಟಿಬರುವೆ ನಾನು.
ನೀನು ಹಾಗೆ ಹುಟ್ಟಿಬಾ. ನಾನು ನೀನು
ಮಾರ್ಕೆಟ್ ಪ್ರದೇಶದಲ್ಲಿ ಭೇಟಿಯಾಗೋಣ
ಮಾಲೀಕನೆಂಬ ಸಂಕೋಲೆ ಇಲ್ಲದೆ ಸ್ವತಂತ್ರವಾಗಿ.

ಆ ಜನ್ಮದಲ್ಲಿ
ನನ್ನ ತಾಯಿಗರ್ಭದಿಂದ ಹೊರಬಿದ್ದ
ಕ್ಷಣದಿಂದಲೆ ಆಕೆಯ ಎದೆಯ ಮೇಲೆ
ಒದ್ದು ರೆಕ್ಕೆ ಬಿರಿದು ಹಾರಿಬಿಡುವೆ.
ಆಕೆಯ ಎದೆಯಿಂದ ಒಂದು ತೊಟ್ಟೂ ಹಾಲು
ಕುಡಿಯದೆ
ಮನೆಯ ಪುಟ್ಟ ಬಾಗಿಲಿಂದ ಹೊರಕ್ಕೆ ಹಾರಿಹೋಗುವೆ.

ಬೀದಿ ನಾಯಿಯಾಗಿ ಬೆಳೆಯುವೆ,
ಇಷ್ಟ ಬಂದ ರಸ್ತೆಗಳಲ್ಲಿ ಒಂಟಿಯಾಗಿ ಅಲೆಯುವೆ,
ಯಾರು ಕೊಟ್ಟರೂ ಗಂಜಿ ನೀರನ್ನೂ ಕುಡಿಯುವುದಿಲ್ಲ,
ಪ್ರೀತಿಯಿಂದ ಯಾರೂ ನನ್ನ ಕಡೆಗೆ ನೋಡಬಾರದು.
ನನಗೆ ಇಷ್ಟ ಬಂದ ರೀತಿಯಲ್ಲಿ ಬಾಳುವೆ.
ಆಗ ನಾನು ನೀನು ಭೇಟಿಯಾಗೋಣ.

ನನ್ನಂತೆ ನೀನೂ ಅನಾಥನಾಗಿ ಬೆಳೆಯಬೇಕು.
ಒಂದು ತೊಟ್ಟು ಹಾಲು ಕುಡಿಯುವ ಮುನ್ನ
ನಿನಗೆ ಜನ್ಮ ನೀಡಿದ ತಾಯಿ ಸತ್ತುಹೋಗಲಿ,
ನಿನ್ನನ್ನು ಯಾರೂ ಪ್ರೀತಿಸದೆ ಹೋಗಲಿ,
ನೀನೂ ಯಾರನ್ನೂ ಇಷ್ಟ ಪಡೆದಂತಾಗಲಿ.
ಯಾರಿಂದಲೂ ಒಂದು ಅಕ್ಕಿ ಕಾಳು ಕೂಡು

ಬಿಕ್ಷೆ ಕೇಳಿ ತಿನ್ನಬೇಡ. ಅವರು ಕೊಟ್ಟರೂ
ಕೈ ಚಾಚಬೇಡ.

ನೀನು ಬದುಕಬೇಕು-
ಬೇರೆಯವರ ಬಾಯಿ ಹೊಡೆಯುತ್ತ,
ಆಗ ನಾನು ನೀನು ಭೇಟಿಯಾಗೋಣ
ಅದೇ ರೀತಿ ನಾವಿಬ್ಬರು ಸ್ವತಂತ್ರವಾಗಿ
ಹುಟ್ಟಿ ಬರೋಣ. ಕೆಲವೇ ನಿಮಿಷಗಳಾದರೂ
ಸಾಕು ಒಬ್ಬರನ್ನೊಬ್ಬರು ತಬ್ಬಿ ಆನಂದಿಸೋಣ
ಕೆಲವೇ ಕ್ಷಣಗಳಾದರೂ ಸರಿ
ಭೀತಿ ಇಲ್ಲದೆ ಬದುಕೋಣ.

Manipuri-Yumlembam,
English-Robin S Ngangom

೧೮ ದಲ್ವಿ, ಹುಸೇನ್ ಅಥವಾ ಕನಸಿನ ವಾಸನೆ, ಗಾಳಿಯ ಬಣ್ಣ

ವಾಂಗು ಹಳ್ಳಿಯಲ್ಲಿರುವ
ನನ್ನ ಮಾವ ಕೇಳಿದರು: ಈ ಋತುವಿನಲ್ಲಿ
ಎಷ್ಟು ಮೂಟೆ ಬತ್ತ ಸಂಗ್ರಹಿಸಿರುವೆ?
ನಾನು ಕೇಳಿದೆ ನನ್ನ ಗೆಳೆಯ ಕೇಶುನನ್ನು:
ಈ ತಿಂಗಗಳಲ್ಲಿ ಎಷ್ಟು ಕಿಲೊ ಕವಿತೆಗಳನ್ನು
ರಚಿಸಿರುವೆ? ಬರೆದು ಬರೆದು ಹರಿದು ಹಾಕಿದೆ;
ಕ್ಯಾಶಿಯರ್ ಒಂದು ರೂಪಾಯಿಯ ಮುರುಕಲು ಹಳೆ
ನೋಟುಗಳ ಎಣಿಸಿ ಕಟ್ಟುತ್ತಿದ್ದು, ಒಂದು ಸಾವಿರ
ಏಳುನೂರ ಹನ್ನೊಂದು; ಅದಕ್ಕಾಗಿ ಒಂದು ಗಂಟೆ
ಎರಡು ನಿಮಿಷ ಹದಿನೈದು ಸೆಕೆಂಡುಗಳ
ಕಾಲ ತೆಗೆದುಕೊಂಡಿದ್ದ. ಎಲ್ಲಾ ಮುಗಿಸಿ
ಕೈಗಳನ್ನು ಡೆಟಾಲ್ ಹಾಕಿ ಸ್ವಚ್ಛವಾಗಿ ತೊಳೆದು
ಒಂದೊಂದೆ ನೋಟು ತಿನ್ನತೊಡಗಿದ.

ನಿಜ, ಕವಿ ಹೇಳುತ್ತಾನೆ:
ಎಲೆಗಳು ಅಲ್ಲಾಡುವುದಿಲ್ಲ ಗಾಳಿ ಬೀಸದೆ.
ನಿಜ, ನಾನು ಹೇಳುತ್ತೇನೆ: ಗಾಳಿ
ಬೀಸಲಿ ಬೀಸದೆ ಹೋಗಲಿ, ಮಳೆ ಬೀಳಲಿ ಬೀಳದೆ
ಹೋಗಲಿ ಎಲೆಗಳು ಅಲ್ಲಾಡುವುದಿಲ್ಲ
ಬೋಳು ಮರದಲ್ಲಿ.

ಮನುಷ್ಯನ ಮಾತುಗಳಿಂದ
ಆತನ ಆಲೋಚನೆಗಳ ಬಗ್ಗೆ ತಿಳಿಯುತ್ತದೆ.
ತುಟಿ ಬಿಚ್ಚದೆ ಮನಸ್ಸಿನಲ್ಲೆ ಮಾತನಾಡುವ
ಮನುಷ್ಯನನ್ನು ಕಣ್ಣುಗಳ ಮೂಲಕ

ಓದಬಹುದು; ನನ್ನ ಮನಸ್ಸನ್ನು ಗುಟ್ಟಾಗಿಡಲು
ಕಪ್ಪು ಕನ್ನಡಕ ಧರಿಸುತ್ತೇನೆ; ಅವು ಕೂಡ
ಓದುಬಾರದೆಂದು ಕಣ್ಣು ಮುಚ್ಚಿಕೊಳ್ಳುತ್ತೇನೆ.
(ಕಣ್ಣು ಮುಚ್ಚಿಕೊಳ್ಳುವ ಜನರು ಒಳಗೆ
ನೋಡಿಕೊಳ್ಳಬಹುದು ಜೈಲು ಅಥವಾ
ಪವಿತ್ರ ದೇವಾಲಯವನ್ನು).

ಮೀನುಗಳು ಆಕಾಶದಲ್ಲಿ ಹಾರುವುದನ್ನು
ನಾನು ನೋಡಿಲ್ಲ ಆದರೆ ನೀರಿನ ಮೇಲೆ
ಬಾತುಕೋಳಿಗಳನ್ನು ನೋಡಿದ್ದೇನೆ.
ನೀವು ಹೇಳಬಹುದು: ತಪ್ಪೆಂದು,
ನಾನು ಹೇಳುತ್ತೇನೆ: ತಪ್ಪೆಂದು, ವೇದಗಳು
ಹೇಳುತ್ತವೆ: ಬ್ರಹ್ಮನಲ್ಲಿ ಶೂನ್ಯ ಅಡಗಿದೆ ಎಂದು.
ನೀವು ಹೇಳಿ, ನಾನು ಹೇಳುತ್ತೇನೆ: ಅವರು
ನಿನ್ನನ್ನು ಏನು ಕರೆಯುತ್ತಾರೆ, ನನ್ನನ್ನಲ್ಲ.

ಯಾವುದು ಹೆಚ್ಚು ಪರಿಮಳ
ತುಪಾಕಿಯ ವರದಿಯೆ ಅಥವಾ ಹೂಗಳ
ವಾಸನೆಯೇ? ತುಪಾಕಿಗಳ ಸದ್ದು ಮೂಗಿನಲ್ಲಿ
ಅಡರಿದೆ, ಹೂಗಳ ವಾಸನೆ ತುದಿಯಲ್ಲಿದೆ.
ಕುರುಡು ಮನುಷ್ಯರು ಶಬ್ದಗಳ ಮೇಲೆ
ಬಣ್ಣಗಳನ್ನು ನೋಡುತ್ತಾರೆ.

ಒಂದು ಪ್ರೀತಿಯ ಪತ್ರ,
ಅಜ್ಜನ ಜಾತಕ, ನನ್ನ ತಾಯಿಯ ರೇಡಿಯೊ
ನನ್ನ ಮಗನ ಜೋಡಿ ಚಿಮಟಿಗಳು
ಮತ್ತು ರಮ್ ಬಾಟಲುಗಳು ಗಾಳಿಯಲ್ಲಿ ಹಾರುತ್ತಿವೆ,
ಅಜ್ಜಿಯ ಒಂದು ಕಂಚುಕ ಒಂದು ಜೋಡಿ ಲಿಂಗಗಳು.
ಹಕ್ಕಿಯೊಂದು ಕೀಲಿ ಗೊಂಚಲನ್ನು ಕೊಕ್ಕಿನಲ್ಲಿ
ಹೊತ್ತೂಯ್ಯುತ್ತಿದೆ.

ಒಂದು ಸೀಟಿ, ಎರಡು ಪತಂಗಗಳು ಸೋಪು,
ಒಂದು ಶೇಕ್ಸ್‌ಪಿಯರನ ಸುನೀತ, ಮಹಿಳೆಯ ಕೂದಲನ್ನು
ಸುತ್ತುವರಿದ ಎರಡು ಕಡಾವಿಗೆ.
ಮೊಟ್ಟೆಯೊಂದು ನಿಧಾನವಾಗಿ ಮುಳುಗುತ್ತಿದೆ,
ನಿದ್ದೆ ಮಾಡುತ್ತಿರುವ ನನ್ನ ಪ್ರಾಯದ ಮಗಳ
ಕೂದುಲಿಲ್ಲದ ತಲೆಯನ್ನು ಚುಚ್ಚುತ್ತಿದೆ.
ಅನಂತರ ಅವಳ ಕಿವಿಗಳು ಚಲಿಸುತ್ತಿವೆ
ಆಲಸಿಯಿಂದ.

ಒಂದು ದಿನ ಸ್ವಂತ ಅರಳಿಮರ ಬೇಕೆಂದು
ಐಶ್ವರ್ಯವಂತರ ಮಹಡಿ ಮೇಲೆ ಹತ್ತಿ
ಆತನ ಸ್ನಾನದ ಕೊಠಡಿಯಲ್ಲಿ ಇಣಿಕಿ ನೋಡಿದೆ
ಒಬ್ಬರಿಗ.ಗಿ.
(ನಾನು ಅರಳಿ ಮರಗಳನ್ನು ಇಷ್ಟ ಪಡುವೆ: ಮಣಿಪುರದ
ಪ್ರತಿಯೊಬ್ಬ ನಾಗರಿಕನ ತಲೆಯ ಮೇಲೆ ಅರಳಿಮರ
ಬೆಳೆಯುತ್ತ ಅವರು ಓಡಾಡುವುದನ್ನು
ನೋಡಬಯಸುತ್ತೇನೆ)
ಸ್ನಾನದ ಕೊಠಡಿಯೊಳಗೆ ನನ್ನ ಪತ್ನಿ ಬಾಗಿ ನಿಂತಿದ್ದಾಳೆ:
ಅವಳ ಅರ್ಧದೇಹ ನಡುವಿನ ಮೇಲ್ಭಾಗ ಅರಳಿ
ಮರವಾಗಿದೆ,
ಕೆಳಗಿನ ಅರ್ಧದೇಹ ನಗ್ನವಾಗಿದೆ. ನನಗೆ
ಆಶ್ಚರ್ಯವಾಗಲಿಲ್ಲ,
ದುಃಖವೂ ಆಗಲಿಲ್ಲ ನಾನು ಕಿರುಚಲೂ ಇಲ್ಲ.
ಗಿರೀಶ್ ಕಾರ್ನಾಡ್, ನನ್ನ ಪತ್ನಿ ನಿನ್ನ 'ಚೆಲುವಿ'ಯ
ರೂಪ ಪಡೆದಿದ್ದಾಳೆ! ಅರಳಿ ಮರವನ್ನು ಇಷ್ಟ
ಪಡುತ್ತೇನೆಂದು
ಈಗ ನಾನು ಹೇಗೆ ಹಕ್ಕು ಸಾಧಿಸಲಿ?

Manipuri: Thangjam Ibopishak
English: Robin S Ngangom

೧೯ ಬುದ್ಧ

ಓ ಬುದ್ಧ...
ರಾತ್ರಿ ನಿದ್ದೆಯಲ್ಲಿ ಬರುವ
ಕನಸುಗಳನ್ನು ಯಾವ ಭಾಷೆಯಲ್ಲಿ
ಓದುತ್ತೇವೆ?
ನಿನ್ನ 'ಶೂನ್ಯ' ಮತ್ತು
ಆರ್ಯಭಟನ '0' ನಡುವಿನ ವ್ಯತ್ಯಾಸ ಏನು?
ಭೂಮಿ ದುಂಡಾಗಿದೆ,
ಆದರೆ ನಿಖರವಾಗಿ ದುಂಡಲ್ಲ.
ನನ್ನ ತಾಯಿಯ ಮಾತಿನಲ್ಲಿ ಏನು
ಕೇಳಿದೆ ಎಂದರೆ;-
ಬಾನೆಯಲ್ಲಿ ಆಹಾರ ಹಾಕುವುದನ್ನು ಕಾಯುತ್ತಿರುವ
ಕೊಬ್ಬಿದ ಹಂದಿಗಳು ಆಹಾರ ನೋಡಿದ್ದೆ ನಲಿಯುತ್ತ
ಬಂದು ತಾಯಿಯ ಕೆನ್ನೆಗಳಿಗೆ ಮುದ್ದಿಡುತ್ತವಂತೆ
ತಾಯಿ ಮೆಲುಧ್ವನಿಯಲ್ಲಿ ಯುಯಿ...ಯುಯಿ...
ಎಂದು ಬಾನೆಗೆ ಆಹಾರ ಹಾಕುವಳು.

ಓ ಬುದ್ಧ...
ನೀನು ಎಚ್ಚೆತ್ತುಕೊಂಡರೆ
ತೀವ್ರ ಜ್ವರದಲ್ಲಿ ಯಾರೋ ಕರೆಯುತ್ತಿದ್ದಾರೆ.
ಅರಣ್ಯ ಬಿರಿದು ಹಸಿರು ಹೊದಿಕೆ ಮಾಯವಾಗುತ್ತಿದೆ
ಸೂರ್ಯನೆಲ್ಲಿ ಅರಣ್ಯದ ಒಳಕ್ಕೆ ಇಳಿದುಬಿಟ್ಟನೆ?
ಆಕಾಶ ಬಿರಿದು ಮಳೆ ಸುರಿಯುತ್ತ ಮಾಂತ್ರಿಕ
ಕನಸಿನ ಬಲೆ ಹಬ್ಬಿಕೊಂಡಿದೆ
ಮಳೆಯ ಬಯಕೆ ತೀರಲಿಲ್ಲ ಯುಯಿ... ಯುಯಿ...
ಇದು ಥಟ್ಟನೆ ಸಂಭವಿಸಿದ
ಮಿಶ್ರಣಗೊಂಡ ಮಳೆ ಮತ್ತು ಸಸ್ಯಗಳ ಸದ್ದೆ
ನಿಗೂಢ ಯೋಚನೆಗಳ ಅಡ್ಡ ದಾರಿಗಳಲ್ಲಿ

ಆಕಾಂಕ್ಷಿ ಕವಿಯೊಬ್ಬ ಯಾಕಾದರು
ಬಲಿಯಾಗುತ್ತಾನೆ?
ಪ್ರತಿಯೊಬ್ಬ ಮನುಷ್ಯನು ಒಂದು ದ್ವೀಪವೆ
ಅಥವಾ ಅದೃಶ್ಯ ಸಂತೋಷವೆ ಇಲ್ಲಿ ಹಾಡಿನ
ಸಾಲೊಂದು ನಿಧಾನವಾಗಿ ಕೊಚ್ಚಿಹೋಗುತ್ತದೆ
ನಿದ್ದೆ ಆತನನ್ನು ಮೃದುವಾಗಿ ಹಾಸಿಗೆಗೆ
ಎಳೆದುಕೊಳ್ಳುತ್ತಿದೆ.
ಮೀನು ಸೃಷ್ಟಿಸಿದ ಕಿರು ತೆರೆಗಳ ಮೇಲೆ
ಮಂದ ಬೆಳಕು ಆಟವಾಡಿಕೊಳ್ಳುತ್ತಿದೆ.
ಕೊಳದ ನೀರು ತುಳುಕಿ ಎದ್ದು ಬರುವ ಸುರಳಿ ಸುರಳಿ
ತೆರೆಗಳ ರಾಗ ಸ್ವರಗಳು ಸುತ್ತಲೂ ಸಾಗಿ
ಮಣ್ಣಿನ ದಡದ ಜೊತೆಗೆ ಮಾತಿಗೆ ಕುಳಿತಿವೆ.
ನಾವು ಯಾವ ಸದ್ದುಗಳನ್ನು ಪ್ರಾರಂಭಿಸಿದೆವು
ಮುಖದ ಬಣ್ಣಗಳೇಕೆ ಬದಲಾಗುತ್ತಿವೆ
ಇದು ಮಾಂತ್ರಿಕತೆಯೇ ಅಥವಾ ನಿದ್ದೆಯಲ್ಲಿ
ಕನಸೆ? ದೂರದಲ್ಲಿ ಯಾರೋ ಓಡುತ್ತ
ಕೂಗುತ್ತಿದ್ದಾರೆ–ಚನ್ನಾಗಿದ್ದೀಯ? ಚನ್ನಾಗಿದ್ದೇನೆ
ಏಕೆ ಚನ್ನಾಗಿರುವೆ?

ಓ ಬುದ್ಧ...
ನೀನು ಕೇಳಿ ಸಂತೋಷಪಡುವೆ
ನಾನು ದಿನಾ ಸಾಯಂಕಾಲ ಕಾಲು ನಡುಗೆ ಹೋಗುವ
ಸಣ್ಣ ಹಳ್ಳಿಯ ದಾರಿಯಲ್ಲಿ ಕೊಬ್ಬಿದ ಹಂದಿಗಳ ಗುಂಪು
ಪ್ರತಿ ದಿನವೂ ಖುಷಿಯಾಗಿ ಅಡ್ಡಾಡುತ್ತಿವೆ.

Assame: Jiban Narah
English: Niren Thakuria

೨೦ ಗುಳ್ಳನರಿ

ಲಜ್ಜೆಯ ಉದ್ದವಾದ ಮುಸುಡಿಯೊಂದು
ಮನೆ ಹಿತ್ತಿಲು ಹರಕು ಮುರುಕು ಸಾಮಾನುಗಳ
ಮಧ್ಯೆ ಆಗಾಗ ಮಿಂಚಿ ಮಾಯವಾಗಿ
ಚಕಿತಗೊಳಿಸಿತ್ತು; ಗೋಣ ಉದ್ದ
ಮಾಡಿ ಆಶ್ಚರ್ಯದಿಂದ ನೋಡಿದ್ದೆ.
ಅದರ ಉದ್ದನೆ ಬಾಲ ಅಪರಿಚಿತ ಊಳು
ನಿಶ್ಯಬ್ದ ರಾತ್ರಿಯಲ್ಲಿ ನನ್ನನ್ನು ಆಕರ್ಷಿಸಿತ್ತು.
ಬಿದಿರು ತೋಪಿನ ಮಧ್ಯೆ ಅದರ ಮನೆ,
ಒಮ್ಮೆ ಹುಲ್ಲಿನ ಪಂಜುನಿಂದ ಅದರ
ಬಿಲದ ಬಾಗಿಲಲ್ಲಿ ಹೊಗೆ ಇಟ್ಟಾಗ ಉಸಿರುಗಟ್ಟಿ
ಗೋಳಾಡುತ್ತ ನೇರವಾಗಿ ನಮ್ಮ ಬಲೆಗೆ ಹಾರಿ
ಬಿದ್ದುಬಿಟ್ಟಿತು. ನಮ್ಮ ಸಂತೋಷ ಕೇಕೆಗಳ ಜೊತೆಗೆ
ಬಲೆಯ ಕ್ರೂರ ಗಂಟುಗಳು ಗುಳ್ಳನರಿಯ
ಹಣೆಬರಹವನ್ನು ಬರೆದುಬಿಟ್ಟಿದ್ದವು.

ನಮ್ಮನ್ನು ನೋಡಿದ ನರಿ ಮೂರ್ಛೆಹೋಗಿ
ಶರ ಪಂಜರದ ಒಳಕ್ಕೆ ದೂಡಿದ್ದೆವು,
ಹೊಟ್ಟೆ ಹಸಿದು ವಿಧಿ ಇಲ್ಲದೆ ಕೊನೆಗೆ
ನಾವು ಕೊಟ್ಟ ಸೋಯಾಬೀನು ಬಿಳಿಅನ್ನ
ಹಸಿರು ತರಕಾರಿ ಬಿಸ್ಕಟ್ ಹಾಲನ್ನು ಒಲ್ಲದ
ಮನಸ್ಸಿನಿಂದ ರುಚಿ ನೋಡಿತ್ತು.
ಅರಣ್ಯದಲ್ಲಿ ದಷ್ಟಪುಷ್ಟಿಯಾಗಿ ಬೆಳೆಸಿಕೊಂಡಿದ್ದ ದೇಹ
ಕ್ಷೀಣಿಸಿ ಜೀವನ ಜಿಗುಪ್ಸೆಯೊಂದಿ ದಿನಗಳು ಕಳೆದಂತೆ
ಮಿಂಚಿನ ನೋಟ ಕಳೆಗುಂದಿತ್ತು.

ಒಂದು ದಿನ ಅದರ ಕಾಲಿಗೆ ಹಗ್ಗ ಕಟ್ಟಿ
ಮುಸುಡಿಗೆ ಕಬ್ಬಿಣ ಕವಚ ಹಾಕಿದಾಗ

ಅದರ ಕಣ್ಣುಗಳಿಂದ ದಾರಾಕಾರವಾಗಿ ನೀರು
ಬಳಬಳನೆ ಹರಿದು ತನ್ನ ತೇಜೋವಧೆಗೆ
ವಿರೋಧ ತೋರಿಸಿತ್ತು.
ಆದರೂ ನನ್ನ ದೇಹದಿಂದ ಒಂದು ಹಿಡಿಮಾಂಸ
ಕಿತ್ತು ನನ್ನ ಸಂತೋಷಕ್ಕೆ ಮಾರಕ ಹೊಡೆತ ನೀಡಿತ್ತು.
ಘನತೆಯ ನಾಗರಿಕತೆಯಿಂದ ಜೀವನ ಚಕ್ರ
ಪೂರ್ಣ ಬದಲಾಗಿತ್ತು.

ನನ್ನ ಜೀವನದಲ್ಲಿ ಬಗೆಹರಿಯದ
ಒಂದು ಆಶ್ಚರ್ಯ ಉಳಿದುಹೋಗಿತ್ತು.
ಅದೇ ತೋಪಿನಲ್ಲಿ ಹುಗಿದಿದ್ದ ನನ್ನ ತಂಗಿಯ
ಬಿಳಿ ದೇಹವನ್ನು ಆ ಗುಳ್ಳನರಿ ತೋಡಿ
ತೆಗೆದಿದ್ದನ್ನು ನಾನು ನೋಡಿದ್ದೆ;
ನನ್ನ ಪುಟ್ಟ ತಂಗಿ ಬಾಲ್ಯದ ಗೆಳತಿಯಾಗಿ
ಅಲೆಲ್ಲ ನನ್ನ ಜೊತೆಯಾಗಿದ್ದಳು. ಆ ದಿನ ನನ್ನ
ಕಣ್ಣುಗಳ ಒಳಕ್ಕೆ ನೋಡಿದಾಗ ಗುಳ್ಳನರಿಯ
ಕೋರೆ ಹಲ್ಲುಗಳು ನನ್ನ ಎದೆಯೊಳಗೆ ನೇರವಾಗಿ
ಇಳಿದಿದ್ದು ಅಲ್ಲಿಂದ ಅದನ್ನು ಹಿಂಬಾಲಿಸಿದ್ದೆ.

ಆದಿಕಾಲದ ಒಂದು ದಿನ
ಒರಟುಸೂರ್ಯ ನಾಚಿಕೆ ಇಲ್ಲದೆ ತನ್ನ ಹಲ್ಲುಗಳನ್ನು
ಚಾಚಿ ಪೃಥ್ವಿಯನ್ನು ಜೇಡರ ಬಲೆಯಲ್ಲಿ ಬಂದಿಸಿಬಿಟ್ಟ;
ಅಲ್ಲಿಂದ ಅಸಹ್ಯ ದುರಾಶೆ ನನ್ನಲ್ಲಿ ಬೆಳೆಯುತ್ತಲೆ ಇದೆ.
ಒಂದು ದಿನ ಪಂಜರದಿಂದ ಗುಳ್ಳನರಿಯನ್ನು
ಹೊರತೆಗೆದೆ,
'ನಿನ್ನ ಕಿವಿಗಳನ್ನು ಕತ್ತರಿಸಿ ದೀಪ ಮಾಡಿಕೊಳ್ಳುವೆ'
ಎಂಬ ಲಾಲಿ ಹಾಡನ್ನು ನಮ್ಮ ತಾಯಿ ಹಾಡಿ ನಮ್ಮನ್ನು
ನಿದ್ದೆಗೊಳಿಸುತ್ತಿದ್ದಳು. ಅದರ ಕಿವಿಗಳನ್ನು ಕತ್ತರಿಸಿ,
ಭರ್ಜಿಯನ್ನು ಎದೆಗೆ ಚುಚ್ಚಿ ಹೃದಯದ ಬಡಿತವನ್ನು
ನಿಲ್ಲಿಸುತ್ತಿದ್ದಳು.

ಅದರ ಚರ್ಮ ಸುಲಿದಾಗ, ತೆಳುವಾದ
ಕಂದುಬಣ್ಣದ ಕೊಬ್ಬಿನ ಪೊರೆ ಮಾಂಸವನ್ನು
ಮುಚ್ಚಿಕೊಂಡಿತ್ತು, ಅದರ ಕೊನೆ ಮಿಡಿತ ರಕ್ತದಲ್ಲಿ
ಕಾಣಿಸಿತ್ತು. ಪ್ರಾಣಿಶಾಸ್ತ್ರದ ಯಾವುದೇ ಪುಸ್ತಕದಲ್ಲಿ
ಅದರ ಮಾಂಸದ ರುಚಿ ಹಾಗೂ ಅದರ ಊಳನ್ನು
ವಿವರಿಸಿಲ್ಲ, ಮಾಂಸದ ರುಚಿ ನನ್ನ ತಲೆಗೆ ಏರಿತ್ತು;
ಸ್ವಾಧದ ಸುರಳಿಯ ತಿರುಗಣಿ ತಲೆಯೊಳಗೆ ಸುತ್ತಿ
ಗನಘೋರವಾಗಿ ಗಾಯಗೊಂಡಿದ್ದ ನನ್ನ ಆತ್ಮವನ್ನು
ಸಂತೈಯಿಸಿಕೊಂಡೆ. ನನ್ನ ದೇಹ
ಕಲುಷಿತ ರೆಕ್ಕೆಗಳೊಂದಿಗೆ ಮಿಂಚಿತ್ತು–
ಬಹಳ ಮೋಜಿನ ಪ್ರಯತ್ನ ಮತ್ತು
ಘೋರ ಹತ್ಯೆಯಿಂದ ಆ ರಾತ್ರಿಯ
ನನ್ನ ಊಟ ಮುಗಿದಿತ್ತು.

Assame: Nilimkumar
English: Pradip Acharya

೨೧ ದೀಪಗಳನ್ನು ಆರಿಸಬೇಕೆ ಅಥವಾ ಬುದ್ಧಿಯನ್ನು ಕತ್ತಲಿಗೆ ನೂಕಬೇಕೆ?

ದೀಪಗಳನ್ನು ಆರಿಸಬೇಕೆ ಅಥವಾ
ಬುದ್ಧಿಯನ್ನು ಕತ್ತಲಿಗೆ ನೂಕಬೇಕೆ
ಇದು ಘನ ಸರಕಾರದ ಹೊಸ ಆಲೋಚನೆ
ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲೇಬೇಕು.
ದೀಪಗಳನ್ನು ಬಿಟ್ಟು ಬುದ್ಧಿಯನ್ನು ಕತ್ತಲಲ್ಲಿಡಬೇಕೆ
ಅಥವಾ ದೀಪಗಳನ್ನು ಆರಿಸಬೇಕೆ.

೭೭-೯೦ ವರ್ಷಗಳ ನಡುವಿನ ವಯೋವೃದ್ಧರು
ದಾರಿಯಲ್ಲಿ ಒಬ್ಬರನ್ನೊಬ್ಬರು ಸಂಧಿಸಿದಾಗ
ಕೇಳಿಕೊಳ್ಳುವ ಪ್ರಶ್ನೆ
ಈ ಸಲ ಯಾವುದು ಉತ್ತಮವಾದುದು?
'ವಿಷಯ ಖಚಿತವಾದರೆ ದೀಪಗಳನ್ನು ಆರಿಸಿ
ಬುದ್ಧಿಯನ್ನು ಪ್ರಕಾಶಿಸುವುದೇ ಒಳ್ಳೆಯದು.'
ಬಾಗಿದ ಬೆನ್ನುಗಳನ್ನು ನೇರಮಾಡಿಕೊಂಡು
ಕುಳಿತಿರುವವರು, ನಡೆಯುವಾಗ ತಮ್ಮ ಭಾರವನ್ನು
ಊರುಗೋಲು ಮೇಲಾಕಿ ಮಾತನಾಡಿಕೊಳ್ಳುತ್ತಿದ್ದರು.
ಏಕೆಂದರೆ 'ಇದು ಬುದ್ಧಿಗೆ ಸಂಬಂಧ ಪಟ್ಟ ಪ್ರಶ್ನೆ
ಗ್ರಹಿಸಲಾಗದು ನಾಳೆ ಏನಾಗಬಹುದು ಎಂದು'
ಮುಕ್ತಾಯ ದೊಡ್ಡದಾಗಿ ನೇಯ್ದುಕೊಳ್ಳುತ್ತಿರುವಾಗ
ಬಿಟ್ಟು ಬಿಡಿ ನಮ್ಮ ನಮ್ಮ ಹೃದಯದ ಒಪ್ಪಿಗೆಯಂತೆ
ಬುದ್ಧಿ ಪ್ರಕಾಶಗೊಳ್ಳಲಿ, ದೀಪಗಳನ್ನು ಆರಿಸಿಬಿಡಲಿ
ನಿರ್ಧಾರ ಮಾಡಿಬಿಟ್ಟಿದೆ ಸರಕಾರ.

ಹಿರಿಯರ ಆಲೋಚನೆಯಂತೆ ಈ ಪ್ರದೇಶದಲ್ಲಿ
ದೀಪಗಳನ್ನು ಆರಿಸಬೇಕು, ಲೋಡ್ ಶಡ್ಡಿಂಗ್
ಎಂದಿಗೂ ಕಾರ್ಯರೂಪದಲ್ಲಿ ಇರಬೇಕು.

ರೀಪೇರಿಯಾದರೂ ಮಾಡಿಸಬಾರದು
ಅದು ಸರಕಾರದ ಒಂದು ನಿಯಮ.

ದೀಪಗಳನ್ನು ಆರಿಸಬೇಕೆ ಅಥವಾ
ಬುದ್ಧಿಯನ್ನು ಕತ್ತಲಿಗೆ ನೂಕಬೇಕೆ?
ಮಧ್ಯ ವಯಸ್ಸಿನವರು ವಿಷಯಗಳನ್ನು
ವಿನಿಮಯ ಮಾಡಿಕೊಂಡಂತೆ; ಧ್ವನಿವರ್ಧಕಗಳಲ್ಲಿ
ಬಿತ್ತರಿಸಲಾಯಿತು ಮನೆಗಳಲ್ಲಿ, ಕ್ರೀಡಾಂಗಣಗಳಲ್ಲಿ
ದೇವಾಲಯದ ಅಂಗಳಗಳಲ್ಲಿ ಇನ್ನಿತರ ಸ್ಥಳಗಳಲ್ಲಿ
ಸಭೆಗಳನ್ನು ನಡೆಸಲಾಯಿತು.

ಪ್ರತಿಯೊಬ್ಬರ ಅಭಿಪ್ರಾಯದ ಆಧಾರದಿಂದ
ಠರಾವು ಹೊರಡಿಸಲಾಯಿತು.
ದೀಪಗಳಿಗೆ ಸಂಬಂಧಪಟ್ಟಂತೆ–ನಮ್ಮ ಬಾಲ್ಯದ
ದಿನಗಳಿಂದಲೂ, ಅದಕ್ಕೂ ಎಷ್ಟೋ ಹಿಂದಿನಿಂದಲೂ
ಕತ್ತಲೇ ಇತ್ತು, ಈಗಲೂ ಕತ್ತಲೇ
ನಾವು ಹುಟ್ಟಿದಾಗಿನಿಂದಲೂ ಕತ್ತಲೇ.
ಬುದ್ಧಿ ಬೆಳೆದಂತೆಯೂ ಕತ್ತಲೇ ನಮ್ಮ ಅರ್ಧ
ವಯಸ್ಸು ಮುಗಿದುಹೋಗಿದೆ. ಬುದ್ಧಿಯೂ ದಿನಕಳೆದಂತೆ
ಮಂಕಾಗುತ್ತಿದೆ. ಉಳಿದ ದಿನಗಳು ಕತ್ತಲಲ್ಲಿ
ಮುಕ್ತಾಯಗೊಂಡರೆ ಯಾವುದೇ ತೊಂದರೆ ಆಗುವುದಿಲ್ಲ.
ಬದಲಿಗೆ ಪ್ರತಿ ರಾತ್ರಿಯೂ ಪ್ರಜ್ವಲಿಸುವ ದೀಪಗಳಲ್ಲಿ
ರುಚಿಕರವಾದ ಆಹಾರ ಆನಂದಿಸುತ್ತ
ಗೊರಿಕೆ ಹೊಡೆಯುತ್ತ ನಿದ್ದೆ ಮಾಡಬಹುದು
ದೀಪಗಳು ಬೇಕಾದಷ್ಟು ಬೆಳಗಲಿ ಅವರ ನಿರ್ಧಾರದಂತೆ.

ಮತ ಚಲಾಯಿಸುವ ಹೆಚ್ಚಿನ ಜನರ
ನಿರ್ಣಯಕ್ಕೆ ಮಣ್ಣನೆ ನೀಡಬೇಕೆ? ಪ್ರಜಾಪ್ರಭುತ್ವದಲ್ಲಿ
ಸರಕಾರ ಹೊಸ ಹೊಸ ವಿಶೇಷ ಯೋಜನೆಗಳನ್ನು
ನಿಯೋಜಿಸಿದೆ ಬುದ್ಧಿಯನ್ನು ಕತ್ತಲಿಗೆ ನೂಕಲು.

ಹಗರಣಗಳನ್ನು ಸೃಷ್ಟಿಸಲಾಗುತ್ತದೆ, ಹಿಂದಿನ ಬಾಗಿಲಲ್ಲಿ
ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ
ಮಣಿಪುರಿ ಅಧಿಕಾರಿಗಳು ಗೌಹಾಟಿಯಲ್ಲೆ ಇಲ್ಲದಿರುವಾಗ
ಮಣಿಪುರಕ್ಕೆ ಅಕ್ಕಿ ಆಮದು ಮಾಡಿಕೊಳ್ಳುತ್ತಾರೆ.
ಗರ್ಭಗಳಿಲ್ಲದ ಜನರೇಟರುಗಳನ್ನು ಹೊರರಾಜ್ಯಗಳಿಂದ
ಖರೀದಿಸುವರು; ಕಳ್ಳರನ್ನು ಹಿಡಿಯಲು ನೇಮಿಸಿದ
ಅಧಿಕಾರಿಗಳು ಕಳ್ಳಸಾಗಾಣಿಕೆಯಲ್ಲಿ ತೊಡಗಿರುವರು.
ವಿಧಾನಸೌದದಲ್ಲಿ
ಫ್ಲೋರಿಗೆ ಬರದೆ ಬಿಲ್ಲುಗಳು ಪಾಸಾಗುತ್ತವೆ,
ಬೇಕಾದಾಗ ಸರಕಾರ ಉರುಳಿಸುತ್ತಾರೆ.

ಇದೆಲ್ಲವನ್ನು ಮಾಡುವ ಸರಕಾರ ಹೇಳುತ್ತದೆ
ಎಲ್ಲವನ್ನೂ ಜನರೆ ನಿರ್ಧರಿಸುತ್ತಾರೆ
ಈಗ ಹೇಳಿ ದೀಪಗಳನ್ನು ಆರಿಸಬೇಕೆ ಅಥವಾ
ಬುದ್ಧಿಯನ್ನು ಕತ್ತಲಿಗೆ ನೂಕಬೇಕೆ?
ಯುವಕರೆಲ್ಲ ಚರ್ಚಿಸುತ್ತಾರೆ ರಸ್ತೆ ಬೀದಿ ಮೂಲೆಗಳಲ್ಲಿ,
ಶಾಲೆ ಕಛೇರಿಗಳಲ್ಲಿ ಯಾವುದು ಒಳಿತು?
ನಾವು ಯುವಕರು ಮಣಿಪುರದ ಭವಿಷ್ಯ;
ನಮ್ಮ ರಾಜ್ಯದ ಒಳಿತು ನಮ್ಮ ಕೈಗಳಲ್ಲಿದೆ
ದೀಪಗಳನ್ನು ಆರಿಸಿ ನೋಡಿ, ಬುದ್ಧಿಯನ್ನು ಕತ್ತಲಿಗೆ ನೂಕಿ

ಇದೆಲ್ಲದರ ಮೇಲೆ ಸಾಧ್ಯವಾದರೆ ನಮ್ಮೆಲ್ಲರ ಮುಂದಿನ
ಒಂದು ಹಲ್ಲನ್ನು ಕಿತ್ತುಬಿಡಿ.
ಯಾಕೆಂದರೆ–
ದೀಪಗಳೆಂದರೆ ಅದೇ ವಿಷಯ
ಲೋಕ್‌ಟಕ್ ಸರೋವರದ ಯೋಜನೆ ಬರುವ ಮುಂಚೆ
ಮಣಿಪುರದಲ್ಲಿ ದೀಪಗಳಿರಲಿಲ್ಲ, ಯೋಜನೆಗಳು
ಮುಗಿದ ಮೇಲೂ ಕತ್ತಲೇ ಇದೆ.
ಇನ್ನೊಂದು ಕಡೆ ಲೋಕ್‌ಟಕ್ ಸರೋವರದಿಂದ
ಬತ್ತದ ಗದ್ದೆಗಳು ಮುಳುಗಿಹೋಗಿವೆ,

ಜನರು ಮನೆ ಮಠ ಗದ್ದೆ ಬಯಲು ಕೃಷಿ ಕೆಲಸ
ಕಳೆದುಕೊಂಡಿದ್ದಾರೆ
ದೀಪಗಳನ್ನು ಆರಿಸುವುದರ ಜೊತೆಗೆ
ಬುದ್ಧಿಯನ್ನು ಕತ್ತಲಿಗೆ ನೂಕಬೇಕು
ಯಾಕೆಂದರೆ–
ಓದಿನಿಂದ ಬುದ್ಧಿ ಬೆಳೆದು ಹಣ ಪೋಲಾಗುತ್ತದೆ
ವೃಥಾ ಕಾಲಹರಣ. ಓದಿ ಬುದ್ಧಿ ಬೆಳೆದಾಗ
ಉದ್ಯೋಗ ಪಡೆಯಲು ಲಂಚ ನೀಡಬೇಕು
ಆಗ ಇರುವ ಬುದ್ಧಿಯೂ ಹಾಳಾಗುತ್ತದೆ.
ನೀವು ವಿದ್ಯೆ ಪಡೆದರೆ ಆಲೋಚಿಸಲು ಪ್ರಾರಂಭಿಸುವಿರಿ
ವಿಷಯಗಳನ್ನು ಅರಿತುಕೊಳ್ಳುವಿರಿ.
ತಪ್ಪುಗಳನ್ನು ನೋಡಿ ಪ್ರಶ್ನಿಸಿದಾಗ ಬೆತ್ತದ ರುಚಿ
ತೋರಿಸುತ್ತಾರೆ, ನಿಮ್ಮ ಬೆನ್ನು ಮೂಳೆ ಮುರಿಯುತ್ತಾರೆ.
ಹಾಗಾಗಿ ಬುದ್ಧಿಯನ್ನು ಕತ್ತಲಿಗೆ ನೂಕುವುದೇ ಒಳಿತು
ಇದೆಲ್ಲದರ ಮೇಲೆ–
ದೀಪಗಳನ್ನು ಆರಿಸಿ ಬುದ್ಧಿಯನ್ನು ಕತ್ತಲಿಗೆ ತಳ್ಳಿ,
ಮನುಷ್ಯನಾಗಿ ಏನು ಸಾಧಿಸಬೇಕಿದೆ?
ಯುವಕರನ್ನು ಯಾವ ಕೆಲಸದಲ್ಲೂ ತೊಡಗಿಸಬೇಡಿ
ಏನು ವ್ಯತ್ಯಾಸವಾಗುವುದಿಲ್ಲ ಅದಕ್ಕಿಂತ ಚೆನ್ನಾಗಿ
ಕಾಣಬೇಕೆಂದರೆ ಮುಂದಿನ ಒಂದು ಹಲ್ಲನ್ನು
ಮುರಿಯುವುದು ಒಳ್ಳೆಯದು.

ಹೌದು!
ದೇಶದ ಮುಂದಿನ ಸಂಪತ್ತು ಅದನ್ನೇ ಹೇಳುತ್ತದೆ
ಅವರು ಹೇಳುವುದನ್ನು ಖಂಡಿತವಾಗಿ ಕೇಳಬೇಕು.
ಸರಕಾರ ಬೇಕಂತಲೆ ಲೋಕ್‌ಟಕ್ ಸರೋವರಕ್ಕೆ
ಅಳವಡಿಸಿದ ಜನರೇಟರುಗಳನ್ನು ಕೆಡಸಿ
ಜನರ ಬುದ್ಧಿಯನ್ನು ಕತ್ತಲಿಗೆ ನೂಕಿದೆ.
ಲೋಡ್‌ಶೆಡ್ಡಿಂಗ್ ಕಾರ್ಯಕ್ರಮವನ್ನು ಮುಂದುವರಿಸಿದೆ.
ವಿದ್ಯಾರ್ಥಿಗಳು ಯುವಕರು ಏನು ವಿರೋಧಿಸುತ್ತಾರೆಂದರೆ

ವಿಪರೀತ ಕೆರಳಿಸುವ ಯೋಜನೆಗಳನ್ನು
ತೆಗೆದುಕೊಂಡರೆಂದು.
ಯಾವುದೇ ವಿರೋಧ, ಮುಷ್ಕರ ಹೂಡಿದಾಗ ಅವರ
ಒಂದು ಹಲ್ಲನ್ನು ಕಿತ್ತುಬಿಡಬೇಕು
ಬಂದಿಸಿ ಬೆತ್ತದ ರುಚಿ ತೋರಿಸಬೇಕು.

ಜನಸಮೂಹದ ಒಮ್ಮತ ಜ್ಞಾನ ಮತ್ತು ಅರಿವಿನ
ಒತ್ತಾಯದಿಂದ ದೀಪಗಳನ್ನು ಆರಿಸಿ
ಬುದ್ಧಿಯನ್ನು ಕತ್ತಲಿಗೆ ನೂಕಬೇಕು
ಮುಂದಿನ ಒಂದು ಹಲ್ಲನ್ನು ಕಿತ್ತುಬಿಡಬೇಕು
ಮಣಿಪುರ ಆಭರಣಗಳ ನಾಡಿನಲ್ಲಿ.

Manipuri: R.K.Bhubonsana,
English: T.Bijoy kumar Singh

೨೨ ಎಲುಬಿನ ಸತ್ಯ

ದಿನಗಳು ಬರುತ್ತವೆ ಕೇವಲ ಅಗಲಿ
ಹೋಗುವುದಕ್ಕೆ, ಅನಂತರ ಸುಮ್ಮನೆ ಅಳುವುದಕ್ಕೆ.
ಒಂದು ದಿನ ಹೇಳುತ್ತೇನೆ, ಇದೆಲ್ಲ ಒಮ್ಮೆಲೆ
ಮತ್ತನೆ ಹೇಗೆ ಯಾಕಾದರು ಸಂಭವಿಸುತ್ತದೆ.
ನಿನಗಾಗಿ ಈ ಎಲುಬುಗಳ ಗೊಂಚಲು
ಈ ಹುಲ್ಲಿನ ಮೇಲೆ ವಿಶ್ರಾಂತಿ ಪಡೆಯಲಿ.
ಈ ಎಲುಬುಗಳಿಗೆ ಗೆಳೆಯರು, ಸಂಬಂಧಿಗಳು
ಯಾರೂ ಇಲ್ಲ ಈ ಭೂಮಿಯ ಮೇಲೆ.
ಇದು ಸಾಗುತ್ತದೆ, ಸಾಗಿಸುತ್ತದೆ
ಕಾಲ ಎಲ್ಲವನ್ನು ಖಾಲಿ ಮಾಡುತ್ತದೆ.

೨

ಮೋಡಗಳಿಗೆ ಹುಚ್ಚು ಹಿಡಿದಿದೆ,
ಗೊಂಚಲ ಎಲುಬುಗಳ ಮೇಲೆ ಅಗ್ನಿ ಸುಡುತ್ತಿದೆ.
ಮಹತ್ವಾಕಾಂಕ್ಷೆ ಇಲ್ಲದ ಮಾಂಸ ಎಲ್ಲವನ್ನೂ
ಖಾಲಿ ಮಾಡಿ ಉಳಿದ ಗಸಿಯನ್ನು
ಕಾಲ ಕುಡಿಯುತ್ತಿದೆ.

ಈಗಲೂ ಬಿರುಗಾಳಿ ಬೀಸುತ್ತಿದ್ದು,
ಇನ್ನೂ ವೇಗವಾಗಿ ಎಲುಬುಗಳ ಮೂಲಕ
ದಾರಿ ಸಾಗಬೇಕಿದೆ. ಸ್ವಚ್ಛ ನಯವಾದ
ಎಲುಬುಗಳಲ್ಲಿ ನೋವಿನ ಶಾಶ್ವತ
ಮುರಳಿಗಾನ ಕೇಳಿಸುತ್ತಿದೆ, ನೀವು ಕೇಳಿಸಿಕೊಂಡರೆ.

ಇದೇ ಎಲುಬುಗಳಲ್ಲಿ
ಮಂದಿರ ಮಸೀದಿಗಳು ಸತ್ತು ಶಾಶ್ವತವಾಗಿ
ನಿದ್ದೆ ಹೋಗಿವೆ. ಸಾಯಂಕಾಲ
ಸೊಲ್ಲಿಲ್ಲದೆ ಅಡಗಿ ಕುಳಿತಿದೆ.

೩

ಎಲುಬುಗಳ ಒಳಗೆ ಎಲುಬುಗಳು ಕೇಳುತ್ತವೆ,
ಎದ್ದು ಕುಳಿತುಕೊಳ್ಳುತ್ತವೆ, ಗೋಳಾಡುತ್ತವೆ;
ಏನು ಬೇಕಾದರೂ ಹೋಗಿ ಕೇಳಬಹುದು,
ಆದರೆ ನೆರಳನ್ನು ತನ್ನ ಪಾಡಿಗೆ ಬಿಟ್ಟುಬಿಡಿ.

ನಮ್ಮ ಮಾತುಗಳನ್ನೆಲ್ಲ ಮರೆತುಹೋಗುವುದು
ಒಳ್ಳೆಯದು, ಎಷ್ಟು ಸಾಧ್ಯವೊ ಅಷ್ಟು
ತೆಗೆದುಕೊಳ್ಳಿ ಕೊನೆಯವನು ಬರುವವರೆಗೂ.
ಒಳ್ಳೆಯದೊ ಕೆಟ್ಟದೊ ಏನು ದೊರಕುತ್ತದೋ
ಅದನ್ನೇ ಪ್ರೀತಿಸುವುದು.
ಎಲುಬುಗಳ ಒಳಗೆ ಎಲುಬುಗಳು, ನಾನು
ಮತ್ತೆ ಹಿಂದಿರುಗಿ ಬರಬಹುದು
ಸೂರ್ಯ ಮತ್ತೆ ಮುಗ್ಗರಿಸಿ ಬೀಳದೆಹೋದರೆ.

೪

ಕೆಲವು ರಾತ್ರಿಗಳು ತಮ್ಮನ್ನು ತಾವೇ
ಸಂತೈಯಿಸಿಕೊಳ್ಳುತ್ತವೆ, ರಾತ್ರಿ ಎನ್ನುವುದು ತಾಯಿ
ಬದುಕು ಉಯ್ಯಾಲೆ ಆಡುವ ಮಗು.
ಕಾಯಿಗಳು ಮಾಗುವವರೆಗೂ ಗಿಡಗಳು ಬೆಂಕಿಗೆ
ಸಿಲುಕಿಕೊಳ್ಳದೆ ಇರಲಿ.
ನೀವು ಮುಂದೆ ಇದ್ದಿರಿ ಹಿಂದೆಯೂ ಇದ್ದೀರಿ,
ಪ್ರತಿ ಸಲವೂ ದಿನಗಳು ಹಿಂದೆ ಮತ್ತು ಮುಂದೆ.

ಒಂದು ದಿನ ರಸ್ತೆಗಳು ಎಲುಬುಗಳಲ್ಲಿ ನಿದ್ದೆ ಮಾಡುತ್ತವೆ.
ಮತ್ತೊಂದು ದಿನ ನಿಜವಾಗಿಯೂ ಎದ್ದು
ಕುಳಿತುಕೊಳ್ಳುತ್ತವೆ.
ನಾನು ಹೇಳುತ್ತೇನೆ, ಹೇಳಲೇಬೇಕು
ಈ ಎಲುಬುಗಳು ನನ್ನವಲ್ಲ.

೫

ಮಣ್ಣಿನ ಗಡಿಗೆ ನೋಡಿರಬೇಕು
ಎಲ್ಲ ದಾಹವು ಅದರಲ್ಲಿತ್ತು,
ಮೋಡಗಳಾಗಿ ಹಾರುವ ಮುನ್ನ.
ಒಂದು ಮಿಂಚುಳ್ಳಿ ಎರಡು ಮೀನುಗಳು,
ಸರೋವರದ ಪ್ರತಿಷ್ಠೆ.
ಪಕ್ಕೆಲುಬಿನ ಹೂಗಳು ಅದರ ಮಾದರಿ
ಹುಲ್ಲುಗಾವಲು ಬೆಳದಿಂಗಳು.

ಶಾಶ್ವತವಾದ ಈ ಎಲುಬುಗಳು, ಆಪ್ತವಾದ
ಎಲುಬುಗಳು ಮೌನವಾದ ಎಲುಬುಗಳು.
ಕತ್ತಲಲ್ಲಿ ಹತ್ತು ಮಾಸಗಳು, ಹತ್ತು ದಿನಗಳು
ಅನಂತರದ್ದು ಚರಿತ್ರೆ.

೬

ವಲಸೆ ಹೋಗುವ ಕನಸು
ಬೆರಳುಗಳ ಮೇಲಿನ ಭ್ರಮೆ, ಕುತೂಹಲ ಅಗ್ನಿ.
ಮಳೆ ಬೀಳುವುದು ರಕ್ತ ಹರಡುವುದು ಹಸಿರನ ಕಡೆಗೆ.
ಶಿಲೆಗಳು ಅತ್ತು ಪೈರು ಕಾಳುಗಳನ್ನು ಎಲುಬುಗಳು
ಚದುರಿಸುವುದು. ಎಲುಬುಗಳಿಗೆ ಮನೆ ಇದ್ದರೂ
ತಿಳಿದಿಲ್ಲ ಯಾವುದೂ ವ್ಯರ್ಥವಲ್ಲ.
ತಪ್ಪುಗಳನ್ನು ಒಪ್ಪಿಕೊಳ್ಳುತ್ತೇವೆ ದಿನದ ಕೊನೆಯಲ್ಲಿ
ಸೂರ್ಯನು ಕೆಳಗಿಳಿಯುವಾಗ-

Assamee: Sameer Tanti
English: Pradip Acharya

೨೩. ಕವಿತೆ

ಕರಿದ ಆಲೂಗಡ್ಡೆ ಹಾಗೂ
ಚಹ ಸಾಯಂಕಾಲದ ಊಟ

ಹಸಿರು ಹಳದಿ ಮತ್ತು ನೀಲಿ ನಗು
ಒಟ್ಟುಗೂಡಿ ಆಕಾಶ ತಲುಪುತ್ತದೆ
ಪ್ರತಿಯೊಬ್ಬರ ಕೈಯಲ್ಲೂ ಸೂರ್ಯಕಾಂತಿ

ಕಠಿಣ ಸಮಯ ಮುಖದಲ್ಲಿ
ಕಣ್ಣುಗಳಲ್ಲಿ ತಿವಿಯುವ ಪ್ರೀತಿ
ಪ್ರತಿ ಹನಿಯನ್ನು ಹೀರಿಕೊಂಡಿತು
ಅತಿ ಸುಂದರ ರಾತ್ರಿ

೨

ಅರಣ್ಯಕ್ಕೆ ಹೊತ್ತೊಯಿರಿ ನನ್ನನ್ನು
ಅವರ ಮುಖ ನಿಗಿನಿಗಿಯಾಗಿ ಹೊಳೆಯುತ್ತದೆ.

ಚಿನ್ನದ ಮಾತುಗಳನ್ನು ರಮಣೀಯ ಹಸಿರಿನ
ಮೇಲೆ ಹಾಕುತ್ತೇನೆ
ಸ್ವಚ್ಛ ಬದ್ಧತೆ ನೋಡುತ್ತೇನೆ
ಹರಿಯುವ ಝರಿಗಳಲ್ಲಿ
ನಿಂತಿರುವ ಮರಗಳ ಪ್ರತಿಬಿಂಬವನ್ನು

ಅರಣ್ಯಕ್ಕೆ ಹೊತ್ತೊಯಿರಿ
ಬೆಳದಿಂಗಳಲ್ಲಿ ತೊಳೆದ ಮುಖದೊಂದಿಗೆ
ಶಾಂತಿ ತುಂಬಿದ ಪುಟ್ಟ ಗುಡಿಸಿಲಿಗೆ
ಪ್ರತಿ ಕ್ಷಣವೂ ಆನಂದ ತುಂಬಿದ ಹಕ್ಕಿಗಳ
ಚಿಲಿಪಿಲಿ ಸದ್ದಿನ ಪ್ರದೇಶಕ್ಕೆ
ಕೊಲೆಗುಡುಕ ಮಾನವನ ಹೆಜ್ಜೆಗುರುತುಗಳ
ಮುದ್ರಿಸುತ್ತೇನೆ ದಯೆ ತುಂಬಿದ ಪ್ರತಿ ಮರದ ಮೇಲೆ
ಹೊತ್ತೊಯಿರಿ ದಟ್ಟ ಅರಣ್ಯದೊಳಕ್ಕೆ
ತುಂಬಿ ಹರಿಯುವ ಎಲ್ಲ ನದಿ ಎದೆಗಳ ಮೇಲೆ
ಪ್ರೀತಿ ತುಂಬಿದ ಹೃದಯ ಹೊತ್ತ
ಒಂದು ಎತ್ತರದ ಮರವನ್ನು ನೆಡುವೆ
ಸಿಗುಳಿ ಹಾಕುವೆ ಫಲವಿಲ್ಲದ ಮನುಷ್ಯನ ತಪ್ಪುಗಳನ್ನು

ಹೊತ್ತೊಯಿರಿ ಶಾಶ್ವತ ಸ್ವತಂತ್ರ ಉಳ್ಳ ಅರಣ್ಯಕ್ಕೆ
ತಪ್ಪಲುಗಳಲ್ಲಿ ಎತ್ತರಕ್ಕೆ ಬೆಳೆದು ನಿಂತಿರುವ ಮರಗಳ
ಪುಷ್ಪರೇಣುಗಳನ್ನು ಪ್ರತಿ ಋತುವಿನಲ್ಲಿ
ಪ್ರತಿ ಮರದಲ್ಲಿ ಗಮನಿಸಿದ್ದೇನೆ
ಮರಗಳಿಗೆ ಗೊತ್ತಿಲ್ಲ
ಕೆಳಕ್ಕೆ ಹೇಗೆ ಬಾಗಬೇಕೆಂದು;
ಮನುಷ್ಯನ ನಿಷ್ಪ್ರಯೋಜಕ ಗರ್ವವನ್ನು
ಪ್ರತಿ ಮರದ ಮೇಲೆ ಕೆತ್ತುವೆ

೩

ಸಾಯಂಕಾಲ ದೇವಾಲಯಗಳಲ್ಲಿ ಗಂಟೆಗಳು
ಮೊಳಗುತ್ತವೆ
ಹಕ್ಕಿಗಳು ರೆಕ್ಕೆಗಳನ್ನು ಬಡಿದು ಹಾರುತ್ತವೆ
ವ್ಯಾಪಾರಿ ವಿಶಾಲ ನದಿ ದಾಟಿ ಹೋಗುತ್ತಿದ್ದಾನೆ

ಮಗು ಅಳುತ್ತಿದೆ-
ಬೀಸುವ ಗಾಳಿಯಿಂದ ಸ್ಮಶಾನ ತಂಪಾಗಿದೆ
ಕತ್ತಲ ಮೇಲೆ ಬೆಳಕಿನ ಕಿರೀಟ ಬೀಳುತ್ತಿದೆ

ಅಂಗೈ ಮೇಲೆ ದುಃಖದ ದಿನಗಳು ಹೆಪ್ಪುಗಟ್ಟಿವೆ
ಕನಸಿನ ಛಾವಣಿ ಮೇಲೆ ಆಕಾಶ ಮುಗಿಬಿದ್ದಿದೆ
ಕತ್ತಲಲ್ಲಿ ಗಂಧದ ರಾಗ ಝೇಂಕರಿಸುತ್ತಿದೆ
ನದಿಯ ಸೆಳೆತ
ಬೇರಿನಲ್ಲಿ ಮೌನವಾಗಿ ನಿಂತಿರುವ ಮರದ
ಎದೆಯೊಳಗೆ ಪುನರುಜ್ಜೀವಗೊಳ್ಳುತ್ತಿದೆ

ಹರಿಯುತ್ತಿರುವ ನದಿ ಹಳದಿ ತೆರೆಗಳ
ನೀರು ದಡಗಳನ್ನು ಸೃಷ್ಟಿಸುತ್ತಿದೆ
ಕಳೆದುಹೋದ ದೋಣಿಯ ಹಸಿವು
ತಿಕ್ಕಾಟ ಮತ್ತು ಸಂದೇಹ ತೇಲುತ್ತಿದೆ ಅದರಲ್ಲಿ

Assame: Prem Narayan Nath,
English: Pradip Khataniar

೨೪ ಸಾಯಂಕಾಲ

ಹಳ್ಳಿಯ ಮೇಲೆ
ನೀಲಿ ಬಣ್ಣದಿಂದ ನೇಯ್ದ
ಮೋಡಗಳು ಸುತ್ತುವರಿದಿವೆ;
ಗೂಡು ಸೇರಿದ ಪಾರಿವಾಳಗಳಿಗೆ
ನೀಲಿ ಆಹಾರ ನೀಡುತ್ತಿರುವರು ಕುವರಿಯರು.
ನೀಲಿ ಮದ್ದಳೆಗಳ ಸದ್ದು ಕೇಳಿ ಬರುತ್ತಿದೆ
ದೇವಾಲಯಗಳಲ್ಲಿ.

ಕೊಳಗಳಲ್ಲಿ ಸ್ವಚ್ಛಂದ ನೀರು ಚಿಮ್ಮುತ್ತಿದೆ.
ನೀಲಿ ದೇಹಗಳನ್ನು ನದಿಗೆ ಒಪ್ಪಿಸಿದ
ಮುಗ್ದೆಯರು ಸಾಯಂಕಾಲದ ನೀಲಿ
ಕೊಡಗಳ ತುಂಬಿ ಹಿಂದಿರುಗುತ್ತಿದ್ದಾರೆ
ಆಯಾಸದಿಂದ ಮನೆಗಳಿಗೆ.

Assame: Anuhhav Thulasi,
English: Pradip Achary

೨೫ ದ–ಪರ್ಬಟಿಯಾ

ಇಲ್ಲಿಂದ ದಿಗಂತದವರೆಗೂ
ಚಾಚಿಕೊಂಡಿದೆ ಜಲರಾಶಿ.

ನೀವು ಅಲ್ಲಿಗೆ ತಲುಪಿದಾಗ
ಬಾಳೆ ಎಲೆ ಕಂಪಿಸುತ್ತದೆ
ನಿಮ್ಮ ಕೂದಲು ಉದುರಿದಾಗ
ಮಳೆ ಎರಗಿ ಆಕ್ರಮಣ ಮಾಡುತ್ತದೆ.

ಮನುಷ್ಯರು ತಿಂದು ನಿರ್ಲಕ್ಷ್ಯ ಮಾಡಿ
ಬಿಸಾಡಿದ ಬೀಜಗಳು ಅಂಕುರಿಸುತ್ತಿವೆ
ನನ್ನ ಹೃದಯದಲ್ಲಿ

ಪಾರಿವಾಳ ಹಾರಿ ಬರುತ್ತದೆ ಕೊಕ್ಕಿನಲ್ಲಿ
ಹುಲ್ಲು ಕಡ್ಡಿ ಸಿಕ್ಕಿಸಿಕೊಂಡು
ಅಥವಾ ಅದು ಮಲ್ಲಿಗೆ ಹೂಹಾರವೆ ಇರಬೇಕು.

ಈಗ ಎಲ್ಲಿಯೂ ಯಾರೂ ಸಾಯುತ್ತಿಲ್ಲ
ಮಗೂ ಕೂಡ, ವೃದ್ಧರೂ ಕೂಡ.

ಇಲ್ಲಿಂದ ನೋಡಬಹುದು ಸೂರ್ಯ ಕೆಳಕ್ಕೆ
ಇಳಿಯುವುದನ್ನು ಮತ್ತು ಚಂದ್ರನು ಮೇಲಕ್ಕೆ
ಏರಿಬರುವುದನ್ನು.

ಇಲ್ಲಿಂದ ನೋಡಬಹುದು
ಬಾಗಿಲು ತೆರೆದುಕೊಂಡು ಶಾಶ್ವತವಾಗಿ
ಪ್ರೀತಿ ಮತ್ತು ಉತ್ಸಾಹ ತುಂಬಿದ ಪೃಥ್ವಿಯನ್ನು.

ಮುಪ್ಪಿಲ್ಲದ ಆ ಇಬ್ಬರು ದೇವತೆಯರು
'ದ-ಪರ್ಬಟಿಯಾ' ಬಾಗಿಲಲ್ಲಿ ಸ್ವಾಗತ
ಕೋರುತ್ತ ನಿಂತಿದ್ದಾರೆ.
ಹಾಸಿಕೊಂಡಿದೆ ಜಲರಾಶಿ–
ನಿಮ್ಮ ಪಾದಗಳಿಂದ ದಿಗಂತದವರೆಗೂ

ದ-ಪರ್ಬಟಿಯಾ: ಅಸ್ಸಾಂನ ತೇಜ್‌ಪುರ್ ಹತ್ತಿರ ಬ್ರಹ್ಮಪುತ್ರ ನದಿಯ ಬಲ ದಂಡೆಯಲ್ಲಿರುವ ಗುಪ್ತರ ಕಾಲದ ದೇವಾಲಯದ (ಎಷ್ಟೇ ದೊಡ್ಡ ನೆರೆ ಬಂದರೂ ಜಖಂಗೊಳ್ಳದ) ಬಾಗಿಲು ಮೇಲೆ ಎರಡು ಕಡೆ ಕೆತ್ತಿರುವ ನದಿ ದೇವತೆಗಳು.

Assame: Nilmani Phookan,
English: Hiren Gohain

೨೬ ಕುಂದೆಲ್ ಪಟ್ಟಣ

ಕುಂದೆಲ್ ಪಟ್ಟಣದ ಹೃದಯದಲ್ಲಿ
ರಾತ್ರಿ ನೀಲಿನದಿ ತೆರೆಗಳೊಂದಿಗೆ
ಉದ್ವಿಗ್ನವಾಗಿ ಸಾಗುತ್ತಿದೆ.

ನೀಲಿ ತೆರೆಗಳ ಜೊತೆಗೆ ದೋಣಿ
ಗುರಿ ಇಲ್ಲದೆ ಕೊಚ್ಚಿ ಹೋಗುತ್ತಿದೆ.

ತೆರೆಗಳ ಮೇಲೆ
ಚದುರಿ ಹೋಗಿರುವ ಸಾವಿರ
ಚಂದ್ರರು ಭಾವೋದ್ರೇಕಗೊಂಡಿದ್ದಾರೆ.

ಕೆಳದರ್ಜೆಯ ಚಿನ್ನದ ಪದಗಳಲ್ಲಿ
ನೀಲಾಕಾಶ ಬೆಳದಿಂಗಳು
ಕೈ ಕಡಗಗಳೊಂದಿಗೆ ಕಿಣಿಕಿಣಿಸಿದೆ.

ಕೆಂಪು ಆಡಮ್ ಮತ್ತು ನಸುಗೆಂಪು
ಈವ್ ಅಲ್ಲಿ ಇಲ್ಲಿ ಮೌನ ನಕ್ಷತ್ರಗಳು.

ಯಾರ ತೊಡೆ ಮೇಲೆ ನದಿ ಸಾಗುತ್ತಿದೆ
ಕತ್ತಲಲ್ಲಿ ಮುಳುಗಿರುವ ಕುಂದೆಲ್
ಪಟ್ಟಣವನ್ನು ನದಿ ಹಾವಿನಂತೆ ಸುತ್ತಿಕೊಂಡಿದೆ.

ಯಾವ ಪ್ರೇಕ್ಷಕನೂ ದೂರದಿಂದಲೂ ನೋಡಿಲ್ಲ
ಹಳದೀ ಗರಿಕೆ ಹೂವುಗಳನ್ನು.

ಆಡಮ್‌ಗೆ ಹಸಿವು ಈವ್‌ಳಿಗೆ ದಾಹ
ಚಂದ್ರನು ಸುರಿಸುತ್ತಾನೆ ಮಕರಂದ.

ಆಡಮ್‌ಗೆ ಕೆಂಪು ಹಸಿವು
ಈವ್‌ಳಿಗೆ ನಸುಗೆಂಪು ದಾಹ;
ಭೂಮಿ ತೇಲುತ್ತಿದೆ ನೀರಿನಲ್ಲಿ
ಆಕಾಶ ದಪ್ಪವಾಗಿದೆ.

ಬೆಳದಿಂಗಳ ರಾತ್ರಿಯಲ್ಲಿ ನದಿ
ಉದ್ವಿಗ್ನವಾಗಿ ಸಾಗುತ್ತಿದೆ
ಭೂಮಿ ಕೆಳಗೆ ಸಿಕ್ಕಿಕೊಂಡಿದೆ.

Assame: Prem Narayan Nath
English: Tabu Taid

೨೭ ಮಹ್‌ಸಿನ್ರಾಮ್

ಮಹ್‌ಸಿನ್ರಾಮ್*
ಪರ್ವತಗಳ ಸುತ್ತುವರಿದಿರುವ
ಮೋಡಗಳು ಪ್ರಶ್ನಿಸುತ್ತಿವೆ ಏಕಾಂತತೆಯನ್ನು.
ಸುಸ್ತಾಗಿರುವ ನಮ್ಮ ವಾಹನದಲ್ಲಿ ನಿಶ್ಯಬ್ದದ
ಭಾಷೆಯಲ್ಲಿ ಮಾತನಾಡುತ್ತಿದ್ದೇವೆ; ರಸ್ತೆಗಳು
ಹಾವುಗಳಂತೆ ಸುತ್ತಿ ಬಳಸಿ ಕವಿತೆ
ಮೊಕ್ಕಾಗದ ಹಾಗೆ ಸಾಗಿಹೋಗಿವೆ.
ಬೃಹತ್ತಾದ ಗುಹೆಗಳು ಗತಕಾಲದ ದುಃಖವನ್ನು
ಪ್ರತಿಧ್ವನಿಸಿ ನಿರಾಳವಾಗುತ್ತಿವೆ.
ಚರಿತ್ರೆ ಕಾಲಾಂತರದ ಪಾತಾಳ ರಸ್ತೆಗಳನ್ನು
ಸಿಗುಳಿಹಾಕಿದೆ. ಮಹ್‌ಸಿನ್ರಾಮ್ ನಿಜವಾಗಿಯೂ
ಬೆರಗುಗೊಳಿಸುವ ದೃಶ್ಯ; ಆದರೂ
ಓಡಿಹೋಗುವ ಬಯಕೆ ನಮ್ಮಲ್ಲಿ
ನೇಯ್ದುಕೊಳ್ಳುತ್ತಿತ್ತು. ಗುಹೆಯಲ್ಲಿನ
ಶಿವಲಿಂಗ ಮತ್ತೊಂದು ಸೌಂದರ್ಯ ಕಲೆಯನ್ನು
ಹೆಣೆದಿದೆ. ಮಹ್‌ಸಿನ್ರಾಮ್ ಮಧ್ಯಾಹ್ನ ಎಬ್ಬಿಸಿದೆ
ಹಲವಾರು ಪ್ರಶ್ನೆಗಳನ್ನು, ಉತ್ತರ ಉಳಿದುಕೊಂಡಿದೆ
ಉಸಿರು ಎಳೆದುಕೊಳ್ಳುವಾಗ ಗಂಟಲಲ್ಲಿ.

ಚಿರಾಪುಂಜಿಯ ಮೂಲ ಹೆಸರು ಸೊಹರಾ. ಇದು
ಪ್ರಪಂಚದಲ್ಲಿಯೆ ಹೆಚ್ಚು ಮಳೆ ಬೀಳುವ ಪ್ರದೇಶ.
ಆದರೆ ಚಿರಾಪುಂಜಿಯಿಂದ ೪೦/೫೦ ಕಿ.ಮೀ. ಪಶ್ಚಿಮಕ್ಕಿರುವ
ಮಹ್‌ಸಿನ್ರಾಮ್ ಪ್ರದೇಶ ಈಗ ಹೆಚ್ಚು ಮಳೆ ಬೀಳುವ
ಪ್ರದೇಶವಾಗಿ ಮಾರ್ಪಡುತ್ತಿದೆ.

English: Ananya S Guha

೨೮ ಚೀನಾ ರೆಸ್ಟಾರೆಂಟ್

ನಾವು ಇಲ್ಲಿಗೆ ಬಂದೆವು ಉದ್ದವಾದ
ಮಧ್ಯಾಹ್ನದ ಮೇಲೆ ವಿಶಾಲವಾಗಿ ಹರಡಿಕೊಂಡ
ಪಟ್ಟಣದ ಇಳಿಜಾರು ಛಾವಣಿಗಳ ಮೇಲೆ, ಅದರ
ಜಿಡ್ಡು ಗಿರಿಕಂದರ ಮತ್ತು ಐಸ್‌ಕ್ರೀಮ್ ಪಾರ್ಲರ್‌ಗಳು,
ಖಿನ್ನತೆ ತುಂಬಿದ ಹಳೆ ಪುಸ್ತಕ ಅಂಗಡಿಗಳಲ್ಲಿ
ಕಳೆದುಕೊಂಡ ಹಲವು ಪುಟಗಳಲ್ಲಿ.

ಜೀವನ ಮುಂದಕ್ಕೆ ಸಾಗುತ್ತಿಲ್ಲ.
ನಾವು ಕೆಂಪು ಮೇಜಿನ ಮುಂದೆ ಕುಳಿತುಕೊಂಡೆವು
ಡ್ರ್ಯಾಗನ್ಸ್‌ಗಳ ನಡುವೆ; ಅರೆ ಮುಚ್ಚಿದ ಪರದೆಗಳ ಹತ್ತಿರ
ಕಿಟಕಿಗಳ ಕಡೆಗೆ ಮುಖ ಮಾಡಿ.
ಬೀದಿಗಳಲ್ಲಿ ಕತ್ತಿನಲ್ಲಿ ವಕ್ರವಾಗಿ ಓಲಾಡುವ ಟೈಗಳ
ಶಾಲಾಮಕ್ಕಳು, ಹಣ್ಣು ಅಲಂಕಾರ ಮಾಡಿರುವ ವ್ಯಾಪಾರಿಗಳು.

ನಮಗೆ ಬೇಕಾದಕ್ಕಿಂತ ಹೆಚ್ಚು ಆಹಾರ ತೆಗೆದುಕೊಳ್ಳುತ್ತೇವೆ
ನಮ್ಮ ಬೇಸರ ಅಪಾಯವಾಗದೆ ಇರಲು,
ಸೂಪು ಕುಡಿದು ಮಾಂಸಾಹಾರ ಸೇವಿಸಿ ಸಮಾಧಾನಗೊಳ್ಳುತ್ತೇವೆ.
ನಾವು ನೋಡಿರದ ನಗರಗಳ ಬಗೆಗಿನ ಸ್ಮೃತಿಯನ್ನು
ಮರೆಯಬಹುದು, ತಿಳಿಯದ, ಗೊತ್ತಿಲ್ಲದ ಸಂಬಂಧಗಳು,
ಮಾಸದ ತುಟಿ ಬಣ್ಣ ಮತ್ತು ಅವರ ವಿಶ್ವಾಸದ ಸನ್ನೆ
ಎಂದೂ ನಮ್ಮದಾಗುವುದಿಲ್ಲ.

ಒಂದು ದಿನ ನಾವು ಬೇಗನೆ ಓಡಿಹೋಗುತ್ತೇವೆ,
ನಮ್ಮ ಬದುಕು ಓಡುವ ಬಸ್ಸಿನಲ್ಲಿ ಕುಳಿತಾಗ
ಅಸ್ಪಷ್ಟವಾಗಿ ಕಾಣುವ ದೃಶ್ಯಗಳಂತಿರುತ್ತದೆ.
ನಮ್ಮ ನಿಮ್ಮ ಪತ್ರಗಳನ್ನು ಓದಿಕೊಳ್ಳುವುದಿಲ್ಲ ಮೂರು ಸಲ,
ಆದರೆ ಅಲ್ಲಿ ನಾವು ಎಳೆಯರು, ನಮ್ಮ ಹಣವನ್ನು
ಜಾಗರೂಕರಾಗಿ ಎಣಿಸುತ್ತೇವೆ; ಬಹಳ ಕಷ್ಟವಾಗಿ ನಕ್ಕಾಗ
ಕೈಗಳಲ್ಲಿರುವ ಚಮಚಗಳು ಕೆಳಕ್ಕೆ ಬೀಳುತ್ತವೆ.
ದುಃಖದಿಂದ ಕಿತ್ತುಕೊಳ್ಳುತ್ತೇವೆ ನಮ್ಮನ್ನು ಅಲ್ಲಿಂದ;

ಆ ಸಣ್ಣ ಪ್ಲಾಸ್ಟಿಕ್ ಸ್ಥಳದಿಂದ ದೀಪಗಳ
ಬೆಳಕು ಕಡಿಮೆಯಾಗಿ, ಪರಿಚಾರಕರು
ಕಲ್ಲುಗಳಾಗಿದ್ದಾರೆ ಬೇಸರದಿಂದ,
ನಿರಂತರ ಈರುಳ್ಳಿ ಹುರಿಯುವುದು ಮತ್ತು
ಕೆಛೆಪ್ ಘಾಟುವಾಸನೆ ಆವರಿಸಿದೆ ಒಂದೇ ಸಮನೆ.

English: Anjum Hasan

೨೯ ಹಣ್ಣಿನ ಹಾಡು

ಅರಣ್ಯ ವಲಯದ ಖಾಲಿ ತೋಟಗಳ
ಹಳೆ ಮರಗಳಲ್ಲಿ ಹಳದಿ ನೇತಾಡುತ್ತಿದೆ,
ಸೀಬೆ ಗಿಡದ ಎಲೆಗಳು ಸೂರ್ಯ ಕಿರಣಗಳನ್ನು
ಬದಲಿಸುತ್ತ ಮಳೆ ಹನಿಗಳನ್ನು ವಿಭಾಗಿಸುತ್ತಿವೆ.
ರಸ್ತೆ ಮೇಲೆ ದಾಳಿಂಬೆ ಹಣ್ಣು ಒಡೆದು
ಅದರ ಸಕ್ಕರೆ ಕೆಂಪು ಇಬ್ಬನಿ ಅಲ್ಲೆಲ್ಲ ಚೆಲ್ಲಾಡಿದೆ.
ಬಾಟ್ಲ್‌ಬ್ರಷ್ ಹೂವಿನ ಮುಳ್ಳುಗಳು ರೇಷ್ಮೆ ಗಾಳಿಯನ್ನು
ಗಾಯಗೊಳಿಸಿವೆ. ಕಡು ಚೆರ್ರಿ ಎಲೆಗಳು ಸಿಕ್ಕಿಕೊಂಡಿವೆ
ಹೊಗೆಯ ಆಕಾಶ, ಭೂಮಿ ಮತ್ತು ತೇವದ ಮಧ್ಯೆ.
ಕಪ್ಪು ಚೆರ್ರಿ ಬಣ್ಣದ ಬಾಯಿಗಳು ನಗುತ್ತಿವೆ
ಮುಳ್ಳುಗಳಿಂದ ಹೀರಿದ ಕಡು ಬಣ್ಣದ ರಸವನ್ನು
ನೋಡಿ. ಮನೋಹರ ಹಣ್ಣು ತಡುವುತ್ತಿದೆ ಕಾಲದ
ಜೊತೆಗೆ ಕಹಿಯಾಗಿ, ಸಣ್ಣದಾದ ಕೆಂಡ ಮುಸುಕು
ಜೋಳ ಕಾಳಿನ ತಿರುಳನ್ನು ತಿನ್ನುತ್ತಿದೆ.
ಸೌತೆಬಳ್ಳಿ ತಿಂಗಳು: ಗಾಢ ಉಸಿರು ನೆಲದಿಂದ
ಒಟ್ಟುಗೂಡಿ ಬಂಗಾರ ಹೂವು ಉತ್ಪತ್ತಿಯಾಗುತ್ತಿದೆ;
ಕಂತರಿಸಿದ ಮರಗಳ ಒಳಗಿಂದ
ಉಳುಗಳಂತೆ ಸಾಗುತ್ತಿರುವ ಆರ್ಕಿಡ್
ಹೂವುಗಳಿಗೆ ಸೂರ್ಯ ಬಣ್ಣ ಹಚ್ಚುತ್ತಿದ್ದಾನೆ.
ಆದರೆ ಎಲ್ಲವೂ ನಶಿಸಿ ಹೋಗುತ್ತವೆ ಅಥವಾ
ಸತ್ತೆ ಹೋಗುತ್ತವೆ ನಿದ್ದೆಯಲ್ಲಿ
ಕಿತ್ತಲೆ ಹಣ್ಣುಗಳು ಬಂದಾಗ.

Englishb: Anjum Hasan

೩೦ ಶಿಲ್ಲಾಂಗ್

ಸಾಯಂಕಾಲ
ಭೀತಿ ತುಂಬಿದ ಜಲ್ಲಿಕಲ್ಲಿನ
ಬೂದು ರಸ್ತೆಯಲ್ಲಿ ಇಬ್ಬನಿ ತೊಯ್ದ ಬಿಳಿ
ಫ್ಲೋರೆಸೆಂಟ್ ದೀಪಗಳು
ಕಳವಳಗೊಂಡು ದೂರ ದೂರಕ್ಕೆ ನಿಂತಿವೆ–
ದೆಹಲಿಯಲ್ಲಿರುವ ನನ್ನ ಚತುರ ಗೆಳೆಯರಿಗೆ
ಬಿನ್ನಹ ಮಾಡಿಕೊಂಡೆ ಕಾಡು ಕಮಲದ ಮೂರು
ಜೇಡರ ದಳಗಳನ್ನು ಅರ್ಪಿಸುವೆನೆಂದು;
ಆ ಸೂಳೆ ಮಕ್ಕಳು ಗಂಡಸರು ರಚಿಸುವ
ಸ್ತ್ರೀವಾದಿ ಸಾಹಿತ್ಯದಲ್ಲಿ ತಲ್ಲೀಣರಾಗಿದ್ದಾರೆ
ಕೈತರಕಲಾ (kaitharkala)
ಮಹಿಳೆಯರಂತೆ. ಬಾಯಿಬುಡುಕ ಅವಿನಾಶ್
ಇನ್ನೂ ಕಾಫೀ ಗುಟುಕರಿಸುತ್ತಿದ್ದಾನೆ.
ನನ್ನ ಪತ್ನಿ ಪಂಜಾಬಿ ಅಧಿಕಾರಿಯ ಜೊತೆಗೆ
ಹ್ಯಾಪಿ ವ್ಯಾಲಿಯಿಂದ* ನೆನ್ನೆ ಓಡಿಹೋಗಿದ್ದಾಳೆ,
ಇಷ್ಟೊತ್ತಿಗೆ ಸರಿಯಾಗಿ ಆಲಿಪುರ್ ತಲುಪಿರಬೇಕು.
ತುಂಬಿಕೊಳ್ಳುತ್ತಿದ್ದೇನೆ ಸೂಟುಕೇಸನ್ನು ನನ್ನ
ಕಪ್ಪು ಮೋಜುಗಳು ಇನ್ನೂ ದೊರಕಿಲ್ಲ,
ಗೆಳೆಯರೆ ನೀವು ಬಂದರೆ ಪರಿಚಯಿಸುತ್ತೇನೆ
ಪ್ರತೀಕವಾದಿಗಳನ್ನು, ಬಿಳಿ ಅಂಬಾಸಿಡರ್‌ನಲ್ಲಿ
ಕುಳಿತು ಅವರು ಕೇಳುತ್ತಾರೆ ಲಕ್ಕಿ ಅಲಿ ಹಾಡುಗಳನ್ನು.

ಗೋಮಾತೆ ಸಪ್ಪೆಯನ್ನು ಮೆಣಸಿನೊಂದಿಗೆ
ಚೆನ್ನಾಗಿ ತಿಕ್ಕಿ ಇಪ್ಪತ್ತುನಾಲ್ಕು ಗಂಟೆ ಇಡಬೇಕು.
ಬೆಳಿಗ್ಗೆ ರಾಧಾಸ್ವಾಮಿಯ ಗೀತೆಗಳು
ಪ್ರತಿಧ್ವನಿಸುತ್ತಿದ್ದಾಗ ಮುಕ್ಕಾಲು ಭಾಗ
ತಣ್ಣಗೆ ಉರಿಯುವ ಇದ್ದಿಲು ಮೇಲೆ ಹಾಕಬೇಕು;
ನಿಮ್ಮ ನೇರಿಳೆ ಬಣ್ಣದ ಕನ್ನಡಕ ಧರಿಸಿ ನೋಡಿ
ಈಗ ನೀವು ಹಳದಿ ನೋಡುತ್ತೀರಿ

ಉಪವಾಸದಿಂದ ಬಳಲುತ್ತಿರುವ ಮಕ್ಕಳು
ಚರ್ಚ್‌ಗಳಿಂದ ಹಿಂದಿರುಗುವುದನ್ನು
ಭಾನುವಾರದ ವಿಶೇಷದೊಂದಿಗೆ.
ತಿಳಿಗುಲಾಬಿ ರೇಖೆಗಳುಳ್ಳ ಮುಕ್ಕು
ಕೋನಗಳೊಂದಿಗೆ ಪುದ್ಮಾವರಿ ಗೋಮಾಂಸ-
ಅದು ನನ್ನ ಅಡಿಗೆ ಮನೆಯಲ್ಲಿ ಯಾವಾಗ
ಬೇಯುವುದು? ಮಂಗಳ ಗ್ರಹದ ಮೇಲೆ
ಲಮೂರ್ ಖರ್‍ಕೊಂಗೊರ್ ರಾಜದೂತನಾಗಿ
ಬರುವಾಗ.

*ಶಿಲ್ಲಾಂಗ್‌ನಲ್ಲಿರುವ ಮಿಲಿಟರಿ ಕಾಲೋನಿ

English: Tarun Bhartiya

೩೧ ರಾತ್ರಿಯ ಬಾಗಿಲು

ರಾತ್ರಿ ಕನಸಿನಲ್ಲಿ
ಭೀತಿಗೊಂಡಾಗ ನೀನು ದಾರಿ
ಹಿಡಿದುಬಂದೆ ಕೂದಲನ್ನು ಸೀಳಿದಂತೆ.

ರಾತ್ರಿ ಪ್ರಜ್ವಲಿಸುವ ಹೂವುಗಳಲ್ಲಿ
ನನ್ನ ರಕ್ತದಲ್ಲಿ ತೊಯ್ದಿರುವ ನೀನು
ನನ್ನ ಕಡೆಗೆ ಇಣಿಕಿ ನೋಡುತ್ತಿರುವೆ,
ನೀರಿನ ಬಣ್ಣ ಏನು ಎಂದು ಕೇಳಿದರೆ
ನೀನು ಮೂಸಿ ನೋಡಿ ಹೇಳು;
ರಾತ್ರಿ ಬೀಸುವ ಸುಗಂಧದ ಬಣ್ಣ
ರುಚಿಕರವೆ ಅಥವಾ ಕೇವಲ
ಬಿಳಿ ಬಣ್ಣವೆ?

ನಿನ್ನ ಕಡೆಗೆ ನೋಡಿ ಆಶ್ಚರ್ಯ ಪಡುವೆ
ನಿನ್ನನ್ನು ಬದಲಾವಣೆ ಸುತ್ತಿಕೊಂಡಿರುವುದು.
ನಿನ್ನ ಬಳೆಗಳನ್ನು ಒಂದೊಂದಾಗಿ ತೆಗೆದು
ಖಾಲಿ ನೆಲದ ಮೇಲೆ ಎಸೆದಾಗ
ಅವು ಸದ್ದು ಮಾಡುತ್ತ ಪ್ರಜ್ಞೆ
ಕಳೆದುಕೊಳ್ಳುತ್ತವೆ, ಅವು ಬಿದ್ದಂತೆ
ನೀವು ಮರಗಳ ನೆರಳಿನ ಮೇಲೆ ಬೀಳುತ್ತೀರಿ.

ನೀನು ನನ್ನನ್ನು ಕೇಳು ಒಬ್ಬರು ನಿದ್ದೆಯಲ್ಲಿ
ಎಷ್ಟು ದೂರ ಹೋಗಬಲ್ಲರು
ಕೆಳಗೆ ರಾತ್ರಿಯ ಬಾಗಿಲಲ್ಲಿ, ಒಬ್ಬರು
ಎಷ್ಟು ಸಲ ತೂಕಡಿಸಿ ಏಳುವರು
ರಾತ್ರಿ ಹಾಸಿಗೆಯಲ್ಲಿ. ಎಷ್ಟು ಸಲ
ನಿನ್ನ ಕೂದಲನ್ನು ಬಿಚ್ಚುವೆ ರಾತ್ರಿ
ಸೂರ್ಯನ ಬೆಳಕಿನಲ್ಲಿ–

ನಿನಗೆ ಗೊತ್ತಿದೆ ರಾತ್ರಿಯ ದಾರಿ ನನಗೆ
ಪರಕೀಯ ಅಕ್ಕಪಕ್ಕದ ಪ್ರದೇಶಗಳ
ಗುರುತು ಸಂಬಂಧವಿಲ್ಲ ನನಗೆ,
ನನ್ನನ್ನು ದೂಷಿಸಬೇಡ ಏನಾದರೂ
ಹೆಚ್ಚುಕಡಿಮೆಯಾದರೆ ಇದಕ್ಕೆಲ್ಲ ಕಾರಣ
ನೀನೆ, ನನ್ನನ್ನು ರಸ್ತೆಯಿಂದ ಸುಗಂಧದ
ಕಡೆಗೆ ಕರೆದು ತಂದದ್ದು.

ಮನೆಯಲ್ಲಿ ನಾನೆ ಕೊನೆಯವನು
ಎಲ್ಲರೂ ನನ್ನ ಬಗ್ಗೆ ಚಿಂತಿಸುತ್ತಾರೆ
ಸುಳ್ಳು ಹೇಳಲಾರೆ ನನ್ನ ಚಿಕ್ಕಪ್ಪಂದಿರರಿಗೆ,
ಯಾಕೆಂದರೆ ಅವರ ವಯಸ್ಸು ಇನ್ನೂ ನೆರೆತಿಲ್ಲ.

ದಯವಿಟ್ಟು ಇದರ ಬಗ್ಗೆ ಆಲೋಚಿಸಿ ಹೇಳಿ
ರಾತ್ರಿ ಹೂವುಗಳಿಗೆ ಮುಳ್ಳುಗಳಿವೆಯೇ
ನಾವು ನಿಜವಾಗಿಯೂ ಹಿಂದಕ್ಕೆ ಹೋಗಬಲ್ಲವೆ
ಬಂದ ದಾರಿಯಲ್ಲಿ.

Assame: Jiban Narah
English: Pradip Acharya

೩೨ ನಾಯಿ

ನಾಯಿಯೊಂದು
ಬಹಳ ಕಾಲದಿಂದಲೂ
ಬೊಗಳುತ್ತ ನನ್ನ ಕಚ್ಚತೊಡಗಿದೆ.
ಈಗ ಮೂರು ರಸ್ತೆಗಳು ಕೂಡುವ ಸ್ಥಳದಲ್ಲಿ
ಕತ್ತಲು ಗಾಢವಾಗಿ ಮುತ್ತಿದೆ.
ಕ್ರೇನು ತನ್ನ ತೊಡೆಯ ಮೇಲೆ ಒಂದು ಲಾರಿಯನ್ನು
ಮಗುವಿನಂತೆ ಎತ್ತಿ ಉಯ್ಯಾಲೆ ಆಡಿಸುತ್ತಿದೆ;
ಇದ್ದಿಲು ದೂಳು ಸುರಳಿ ಸುರಳಿಯಾಗಿ ಹೊಗೆ
ಏಳುತ್ತಿದೆ.

ಕಿಟಿಕಿ ಮೂಲಕ ಒಂದು ಪುಸ್ತಕ ಓದಿದೆ,
ಬೆಳಿಗ್ಗೆ ಸಿನಿಮಾ ನೋಡಿದೆ, ಬಸ್ ನಿರ್ವಾಹಕನ
ಜೊತೆಗೆ ಜೋರಾಗಿಯೇ ಜಗಳವಾಡಿದೆ.
ಧಗೆಯ ಮಧ್ಯಾಹ್ನವನ್ನು ಕಡಿತಗೊಳಿಸಲು ರಸ್ತೆ
ಹಾಡಾಗಿ ಬೂದಿ ಉದಿರಿಸುವ ಚಿತಾಭಸ್ಮ ಕುಂಡ
ಆಕಾಶವಾಯಿತು ಆದರೂ ನಾಯಿ ನನ್ನನ್ನು ಕಚ್ಚುತ್ತ
ರಕ್ತ ಹೀರುತ್ತಲೆ ಇದೆ ಬಹಳ ಕಾಲದಿಂದಲೂ.

ಯೋಚನೆಗೆ ಬೂದಿಯಲ್ಲಿ ಆಹಾರವಿಲ್ಲ.
ಚಹ ತೋಟದಲ್ಲಿ ಮರಗಳು ಒಂದೇ ಎತ್ತರಕ್ಕೆ
ಬೆಳೆದು ನಿಂತಿವೆ, ಎಲ್ಲವೂ ಹಸಿರು, ಎಲೆಗಳು
ಕೊಂಬೆ ರೆಂಬೆಗಳ ಮೇಲೆ ಕ್ರಮಬದ್ಧವಾಗಿ ಜೋಡಿಸಲ್ಪಟ್ಟಿವೆ.
ಮಟಮಟ ಮಧ್ಯಾಹ್ನ ಸಂತಲ್‌ಬಾಲೆ
ಶಿರಿಸ್ ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದಾಳೆ.
ಆ ನಾಯಿ ಬೊಗಳುವಿಕೆ ನನಗೆ ಕೇಳಿಸುತ್ತಿದೆ,
ಮೊದಲನೇ ಬರಗಾಲ ಚಹ ಕಪ್ಪಿನ
ತುಂಬಾ ಕಾಣಿಸುತ್ತಿದೆ.
ಅವರ ಸಲುಗೆ ಸಂಬಂಧ, ಸಂದೇಹಕ್ಕೆ
ಯಾವುದೇ ಕಾರಣವಿಲ್ಲದಿದ್ದರೂ ಕೆಲವೊಮ್ಮೆ ನಾನು
ಬೊಗಳುವಿಕೆ ಮತ್ತು ಸಂತಾಲ್ ಮದ್ದಲೆಯ
ನಡುವಿನ ದೂರವನ್ನು ಕಡಿಮೆ ಮಾಡುತ್ತೇನೆ.

ರಸ್ತೆಯಿಂದ ಛತ್ರಕ್ಕೆ ಬಿದ್ದಿದೆ ಉದ್ಧವಾದ ವೀರಗಾಥಾ
ಚರಿತ್ರೆ, ಪದ್ಧತಿ, ಭೌಗೋಳಿಕ ಅಥವಾ ಕೆಲವು
ಹೆಚ್ಚು ಬೆಲೆ ವಸ್ತ್ರಗಳುಳ್ಳ-ಮಾಂಸದ ಅಂಗಡಿ
ನನಗೆ ಗೊತ್ತಾಯಿತು ಪ್ರಥಮ ಬಾರಿಗೆ
ಈ ಬೊಗಳುವಿಕೆ ಎಷ್ಟು ಹಿಂದಿನದೆಂದು-
ಮೊದಲ ತುಂತುರು ಮಳೆಗಾಲದಲ್ಲೆ ಅಥವಾ
ಹಾರುತ್ತಿದ್ದ ಹಕ್ಕಿಯ ಕೊಕ್ಕಿನ ಮೇಲೆ ಬರೆದ
ಹಸಿ ಭೂಮಿಯ ವಿಳಾಸವೆ.
ನೀರಿನ ಒಳಗಿರುವ ಪಾಚಿ ಉಸಿರಾಡುತ್ತದೆಯೇ.

ಪ್ರಾಯಶಃ ನನಗೆ ಮೊದಲೆ ಗೊತ್ತಿದೆ
ಮಹಿಳೆ ಬೆಚ್ಚಗಿನ ಉಣ್ಣೆಯ ಒಳಗೆ ಬೆಂಕಿಯನ್ನು
ಇಷ್ಟಪಡುತ್ತಾಳೆ;
ಒಂದು ವೇಳೆ ಈ ಬೊಗಳುವಿಕೆಯ ಪ್ರತಿಧ್ವನಿ
ಬಹಳಷ್ಟು ಜನರನ್ನು ಆಕರ್ಷಿಸಿಸಬಹುದು
ಮತ್ತು ಬೆಂಕಿ ಹಾರಿಸುವ ಯೋಧರ
ಒಂದು ಗುಂಪು ಕ್ಲಿಷ್ಟ ಸಮಯದಲ್ಲಿ ಆಗಾಧ ನೀರಿನಲ್ಲಿ
ಬಹಳಷ್ಟು ಅಮಾಯಕರು ಆಳದಲ್ಲಿ ಹೂತುಹೋದರು.
ಹರಿತವಾದ ಉಗುರುಗಳು ಮತ್ತು ಕೋರೆಹಲ್ಲುಗಳು
ಸಮುದ್ರ ಹನಿಮೂನ್‌ಗಳನ್ನು ಪ್ರಜ್ವಲಿಸುವ ನಕ್ಷತ್ರಗಳಂತೆ
ಛಿದ್ರಛಿದ್ರ ಮಾಡಿದ್ದವು.
ಸಮುದ್ರ ದಂಡೆಯ ಪಕ್ಕ ನಾಯಿ ಜೊತೆಗೆ ನಾನು
ಸಾಯಂಕಾಲ ನಡಗೆ ಹೋಗುವುದು ತುಂಬ ಹಳೆಯ ವಿಷಯ
ಆದರೂ ಇಂದು ಮೂರು ರಸ್ತಗಳು ಸಂಧಿಸುವ
ಸ್ಥಳದಲ್ಲಿ ವಾಚಾಳಿ ಬೊಗಳುವಿಕೆಯೊಂದಿಗೆ
ನಾನು ಜೋರಾಗಿಯೇ ಕಿರಿಚಾಡಿ ಬೈಯ್ದಿದ್ದೆ.

Assame: Anubhav Tulasi
English: Pradip Acharya

೩೩ ಡಾಂಕುಲ

ಪ್ರಪಂಚವನ್ನು ಪ್ರೀತಿಸುವ ದೇವರು
ತನ್ನ ಒಬ್ಬನೇ ಮಗನನ್ನು
ಅನಾಥನಾಗಿ ಬಿಟ್ಟುಹೋದ...

ನೆನ್ನೆ ಮಾಮೂಲಿಯಾಗಿಯೆ ತಡವಾಗಿ ಬಂದೆ
ನನ್ನ ಪ್ರೇಯಸಿ ನನಗಾಗಿ ಕಾಯುತ್ತಿದ್ದಳು.
ಆಕೆ ಕೊಟ್ಟ ಪತ್ರದಲ್ಲಿ
'ಈ ದಿನಗಳಲ್ಲಿ ಹೇಗಿದ್ದೀಯ?' ಎಂದು ಗೀಚಿದ್ದಳು,
'ನನ್ನ ಬಗ್ಗೆ ಬಹಳವಾಗಿ ಹೇಳಬೇಕಿದೆ' ಎನ್ನುತ್ತಿದ್ದಂತೆ
ಆಕೆಗೆ ಒಂದು ಮುತ್ತು ಕೊಡಲು ಯತ್ನಿಸಿದೆ,
'ನನಗೆ ಭಯವಾಗುತ್ತಿದೆ' ಎಂದಳು
ಅಥೆನ್ಸ್ ಸುಂದರಿ! ಅನಂತರ ಗೆಳೆಯನ
ಮನೆ ತಲುಪಿದೆ, ಎಂದಿನಂತೆ ಆತ
ಕೊಂಡು ತಂದಿದ್ದ ಒಳ ಚಡ್ಡಿ ಮೂರನೆ ಸಲ
ಒಗೆದಾಗ ಜೋಲುಬಿದ್ದಿದ್ದು ನಾನು ಹಾಸ್ಯ ಮಾಡಿದೆ.
ಆತ ನನ್ನ ನೋಡಿ ನಗುತ್ತ, ಜೀನ್ಸ್ ಪ್ಯಾಂಟ್ ಬಿಚ್ಚಿ
ಒಳ ಚಡ್ಡಿಯನ್ನು ಕಿಟಿಕಿಯಲ್ಲಿ ಬಿಸಾಕಿದ,
ಉದ್ದವಾಗಿ ಬೆಳೆದುನಿಂತಿದ್ದ.
ಹಾಸಿಗೆ ಮೇಲೆ ನಕ್ಷೆ
ಮೂಡಿಸುತ್ತಾನೆಂದು ತಿಳಿದ ಮೇಲೆ
ಅವನಿಂದ ಬೀಳ್ಕೊಂಡೆ.
ನಂತರ ಹುಡುಗಿಯ ಹತ್ತಿರ ಹೋಗಿ
ಅವಳ ಜೊತೆಗೆ ಒಂದು ಬಾಟಲ್ ರಮ್ ತೆಗೆದುಕೊಂಡೆ
ಎರಡು ಸಲ 'ಜೆಸ್ಟ್ ಡು ಇಟ್' ಸನ್ನೆ ಮಾಡಿದಳು.
ಮತ್ತೆ ಮತ್ತೆ ಮುದ್ದಿಸುತ್ತ ಪಿಸುಗುಟ್ಟಿದಳು
'ಯು ಕ್ಯಾನ್ ಡು ಇಟ್ ಟು ಮಿ'
ಕೊನೆಗೆ ಶುಭರಾತ್ರಿ ಹೇಳಿದಳು. ಕುಡಿದು ಜಾರುತ್ತ,
ದಾರಿ ಕಳೆದುಕೊಳ್ಳುತ್ತ ಮನೆ ತಲುಪಿದೆ.
ಜೇಸಸ್‌ನ ರಕ್ತ ಹೀರುತ್ತಿರುವ ಸೊಳ್ಳೆಯನ್ನು

ದೇವರು ಚಾವಟಿಯಲ್ಲಿ ಹೊಡೆಯುವ ಕನಸು ಕಂಡೆ.
'ಜೇಸಸ್ ಚಿರಾಯವಾಗಿ ಬಾಳಲಿ
ದಣಿ ಆತನ ಬೆನ್ನು ಮುರಿ, ರೆಕ್ಕೆಗಳನ್ನು ತರಿದು ಹಾಕು'
ದೇವ ಕನ್ನೆಯರು ಕಿರುಚುತ್ತಿದ್ದರು.

ಈ ದಿನ ಬೆಳಗ್ಗೆ ಎದ್ದು ಕುಳಿತು ಜ್ಞಾಪಿಸಿಕೊಂಡೆ
ಗಾಲೀಬನ ಸಾಲುಗಳನ್ನು: ಕುಡಿದ ಅಮಲಿನ ಸಂತೋಷದ
ಅನಿಶ್ಚಿತೆಯ ಅನುಭವ ಭೀಕರವಾದುದು.
ನಾನು ಯಾರೆಂದು ಆತನಿಗೆ ಗೊತ್ತಿಲ್ಲ.
ಎದುರಿಗೆ ಗೋಡೆಯ ಮೇಲೆ
ಒಝ್ಝಿ ಓಸ್‌ಬೋರ್ನ ಚಿತ್ರದ ಪಕ್ಕ ಒಂದು ಬರಹ:
'ದೊಡ್ಡತನ ಇರುವುದು ಸರಳತೆಯಲ್ಲಿ'
ಮೇಜಿನ ಮೇಲೆ ಕಾದಂಬರಿ ಬಿದ್ದಿದೆ.
'ಲವ್ ಟು ಲಿಕ್' ನನ್ನ ಅಥೆನ್ಸ್ ಸುಂದರಿ
ಜ್ಞಾಪಕಕ್ಕೆ ಬಂದುಬಿಟ್ಟಳು ಮಿ. ಒಳಚಡ್ಡಿ ಎಲ್ಲಿಯೊ,
ಜಸ್ಟ್ ಡು ಇಟ್ ಹುಡುಗಿ.

ಮೊಡವೆಗಳಿಂದ ಮುತ್ತಿಕೊಂಡಿರುವ
ನನ್ನ ಸೇವಕ ಡಾನ್ 'ನಿನಗೆ ಫೋನ್ ಇದೆ' ಕಿರುಚಿದ.
ಫೋನ್ ತೆಗೆದುಕೊಂಡಾಗ ಗೊತ್ತಾಯಿತು
ಮಿ.ಚಡ್ಡಿ ಸತ್ತಿಲ್ಲ.
ಆತ ಎದ್ದು ನನಗಾಗಿ ನೋಡುತ್ತ ನನ್ನನ್ನು ಮನೆಯಲ್ಲಿ
ಬಿಡಬೇಕೆಂದು ಆಲೋಚಿಸುತ್ತಿದ್ದುದ್ದಾಗಿ,
ಅವನ ಸಹೋದರರು ಹೇಳಿದರು.
ಮೆಟ್ಟಿಲುಗಳಿಂದ ಬಿದ್ದವನು ಏಳಲೇ ಇಲ್ಲವಂತೆ.

ಈಗ ಪುನರುಜ್ಜೀವದ ಮಾತೇ ಇಲ್ಲ.

ನಾನು ಹೋಗಿ ಆತನನ್ನು ಸ್ಪರ್ಶಿಸಬೇಕು.
ಅವನ ಬೆನ್ನಿನ ಮೇಲೆ 'ಜೇಸಸ್ ಕ್ರೈಸ್ಟ್' ಪದಗಳನ್ನು
ಕೊರೆದು ರಕ್ತದ ರುಚಿ ನೋಡಬೇಕು.
ನಾನೊಂದು ಸೊಳ್ಳೆ.

ನೀವು ನಗಬಹುದು ಓ! ನೀವು ನನ್ನ ಹಾಗೆಯೇ.
ನನ್ನ ಗೆಳೆಯರು ಕರೆಯುವರು ನನ್ನನ್ನು ಡಾಂಕಲಾ ಎಂದು.
ನನಗೇನು ಅಭ್ಯಂತರ ಇಲ್ಲ, ನಾನು ಹೇಳುವುದೇನೆಂದರೆ–
ಪತ್ರಗಳನ್ನು ಕೊಡುತ್ತಿರು, ಶುಭರಾತ್ರಿ ಎಂದು ಮುದ್ದಿಸು,
ಆಗ ನೀನು ಬಹಳ ಉದಾರಿ ಎನ್ನುತ್ತೇನೆ,
ರಕ್ತ ಕೊಡು,
ನನ್ನ ಪ್ರೀತಿಸುವಿ ಎಂದು ಒಪ್ಪಿಕೊಳ್ಳುತ್ತೇನೆ.

English: Donboklang Ryntathiang

ಇಳ ಜೋಸಪ್‌ಗೊಂದು ಕವಿತೆ

ಯಾವಾಗ ಹಿಂದಿರುಗಿ ಬಂದರೂ ತಡವಿಲ್ಲ
ಮನೆಗೆ. ಆದರೆ ನನಗೆ ತಾಯಿನಾಡು ಬೇಕು
ಅಲ್ಲಿ ನನ್ನನ್ನು ಗುರುತಿಸಿಕೊಳ್ಳಬೇಕು, ಒಂದು
ನಕ್ಷೆ, ಒಂದು ಮರ, ಕಲ್ಲು ಅಥವಾ ಯಾವುದೋ
ಒಂದು ಗುರುತಿರಬೇಕು ಹಿಂದಿರುಗಿ ಬರಲು
ಪ್ರಾಣಿಯಂತೆ ಅಲ್ಲಿ ಏನೇ ಇರದಿದ್ದರೂ ಪರವಾಗಿಲ್ಲ.
ಅದಾಗ್ಯೂ ಇದು ಸತ್ಯ.

ನನ್ನ ತಾಯಿನಾಡಿನಲ್ಲಿ ಮಕ್ಕಳು ಬಿಲಗಳಿಂದ ಹೊರ
ಬರುತ್ತಾರೆ, ವಿಷಮ ಸ್ಥಿತಿಯಲ್ಲಿ ಕೆಲಸ ಮಾಡುತ್ತಾರೆ
ದೊಡ್ಡವರಾದ ಮೇಲೆ ದೂರ ಹಾರಿ ಹೋಗುತ್ತಾರೆ,
ಭಾವಣಿಗಳು ಬಿಡಿ ಬಿಡಿ ಆಗುತ್ತವೆ ಅಪ್ಪಚ್ಚಿಯಾದ
ತಲೆಗಳಂತೆ.

ನೀನು ಹೇಳಿದೆ ವಿಷಾಧ ಪಡಲಿಲ್ಲ ಎಂದು
ಈಗ ಜನಾಂಗೀಯ ಗುತ್ತಿಗೆದಾರರು ಕೈಜೋಡಿಸಿದ್ದಾರೆ.
ಹೊಸದಾಗಿ ನಿರ್ಮಿಸಿದ ನಿನ್ನ ಮನೆ
ಜನರ ರಕ್ತದ ಫಲಿತಾಂಶ, ಸದುದ್ದೇಶದ ಗುರಿಯನ್ನು
ಬಿಡಲು ಹಿಂದೆ ಮುಂದೆ ನೋಡಲಿಲ್ಲ, ೨೫ ವರ್ಷಗಳಿಂದ
ಸಂಗ್ರಹಿಸಿದ ಅಥವಾ ನೀನು ಬಾಡಿಗೆ ಮನೆಯಲ್ಲಿ
ಜೀವನ ಮಾಡಲು ಹೇಗೆ ಬಂದೆ? ನಿನ್ನ
ಪತ್ನಿ ಮಕ್ಕಳೊಂದಿಗೆ–
ನಾಯಿಗಳು ವಾಸಿಸುವ ಇಂಫಾಲ್‌ನಲ್ಲಿ, ನೀನೆ
ಹೇಳಿಕೊಳ್ಳುವ ನಿನ್ನ ನಿರ್ದಯಿ ಬುಡಕಟ್ಟು ಜನರ
ಮಧ್ಯೆ. ಚಿತ್ರಪಟಗಳ ಮುಂದೆ ನಿಂತು ಶೋಕಿಸುವೆ,
ಎಲ್ಲರೂ 'ಸೆಪಿಯಾ' ಎಂಬ ಒಂದೇ ಮರದ ಬೇರುಗಳು,
ನೀನೇ ಉದಾಹರಣೆ ನಿನ್ನ ತಂದೆ ಇದ್ದನೆಂಬುದಕ್ಕೆ;
ಆದರೆ ಈಗ ಯಾರು ನಂಬುತ್ತಾರೆ?
ನೀನು ಬದುಕಿದ್ದೀಯ ಎಂದು.

English: Robin S Ngangom

೩೫ ಚಿತ್ರಗಳು

ಆಕಾಶದಲ್ಲಿ ಪಕ್ಷಿಗಳು
ಚುಕ್ಕೆಗಳಂತೆ ಕಾಣಿಸುತ್ತವೆ,
ಕಡುಕೆಂಪು ವೈನ್ ಗಂಟಲನ್ನು ನೆನೆಸುತ್ತದೆ,
ಜೊತೆಗೆ ಒಂದು ಮಧುರ ಧ್ವನಿ ಕರೆಯುತ್ತದೆ.

ಕೆಟ್ಲ್‌ನ ಸೊಂಡಿಲು ಆವೇಶದಿಂದ ಚಹ ಸುರಿಸುತ್ತದೆ;
ಹೊರಗಡೆ ಬೆಳಗಿನ ತಂಗಾಳಿಯಲ್ಲಿ ಎಲೆಗಳು
ಆಟವಾಡಿಕೊಳ್ಳುತ್ತಿವೆ. ಬಿಸಿ ಚಹ ಕುಡಿದ ಮೇಲೆ ಹಿಂದೆ
ಕುಳಿತು ಧ್ಯಾನಿಸುತ್ತಿದ್ದೆ: ನೆನ್ನೆ ರಾತ್ರಿ ಕನಸಿನಲ್ಲಿ
ಯಾವಾಗಲೊ ಸತ್ತುಹೋದ ಸಂಬಂಧಿಗಳು ನಿಧಾನವಾಗಿ
ಬಂದು ಹೋಗುತ್ತಿದ್ದರು...
ಸತ್ತವರು ಯಾವಾಗಲೂ ಒಳ್ಳೆಯವರೆ.

ಸಿಡಿಲು ಮೋಡಗಳನ್ನು ನೆಕ್ಕುತ್ತಿತ್ತು ಸಂತೋಷವಾಗಿ,
ತುಂತುರು ಮಳೆ ನಿಧಾನವಾಗಿ ಉದುರುತ್ತಿತ್ತು.
ನಿನ್ನ ಕೂದಲು ತೇವವಾಗಿತ್ತು, ಒದ್ದೆ ಉಡುಪು
ದೇಹವನ್ನು ನವಿರಾಗಿ ಶಿಲ್ಪ ಕಡೆದಿತ್ತು.

ಆಶ್ಚರ್ಯವಾಯಿತು ನನಗೆ, ನನ್ನ ಕಾವು ನಿನ್ನ
ಎಡ ಕೆನ್ನೆಯ ಮೇಲೆ ಗುಳಿ ಬೀಳಿಸಿತ್ತು.

English: Desmond L Kharmawphlang

೩೬ ಗೆಲವು

ನಾನು ಜನಿಸಿದ ಸ್ಥಳದ ಬಗ್ಗೆ ಎಷ್ಟೇ
ಹೇಳಿಕೊಂಡರೂ ದಣಿವಾಗುವುದಿಲ್ಲ. ಬೇಸಿಗೆಯಲ್ಲಿ
ಆಕಾಶ ಗರ್ಭ ಧರಿಸಿ ಉಬ್ಬಿಕೊಳ್ಳುತ್ತದೆ ಮಳೆ
ಹುಯ್ಯಲು. ಚಳಿಗಾಲ ಆಗಮಿಸುತ್ತದೆ ಉಗುರು
ಬೆಚ್ಚನೆ ಸೂರ್ಯನೊಂದಿಗೆ ಗಡ್ಡೆ ಕಟ್ಟಿದ ಶಿಖರಗಳನ್ನು
ಸ್ಪರ್ಶಿಸುತ್ತ, ಸರೋವರಗಳಲ್ಲಿ ತೇಲುತ್ತವೆ ಕನಸಿನ
ದೋಣಿಗಳು.
ಬಹಳ ಹಿಂದೆ ಜನ ಸುರ್ಮಾ ಆಚೆಗೆ ಹೋಗಿದ್ದರು
ವ್ಯಾಪಾರ ಮಾಡಲು, ಹೆಣ್ಣುಗಳನ್ನು ಮನೆಗೆ ತಂದರು
ಅವರ ಬೀಜಗಳನ್ನು ಪೋಷಣೆ ಮಾಡಲು.
ಅನಂತರ ಬಿಳಿಯರು ಬಂದರು ಬುಲೆಟ್
ಕೊಡುಗೆಗಳೊಂದಿಗೆ, ಹಣ ರಕ್ತ ಮತ್ತು
ಧರ್ಮದೊಂದಿಗೆ. ಗೆಲವು ದೊರಕುತ್ತಾಹೋಯಿತು
ಬಂದೂಕಗಳ ಶಬ್ದದೊಂದಿಗೆ.
ಒಂದು ದಿನ ಇದ್ದಕ್ಕಿದ್ದ ಹಾಗೆ ಬಿಳಿಯರು
ಹೊರಟುಹೋದರು. ಶಾಂತಿ, ತೇವದ ಎಲೆಗಳ
ಸಿಹಿವಾಸನೆ ನಿಧಾನವಾಗಿ ಮರುಕಳಿಸಿತು.
ಮತ್ತೆ ಕಾಲ ಕಳೆದಂತೆ ಎಲ್ಲಾ ದಿಕ್ಕುಗಳಿಂದ
ಜನರು ಬಂದರು ಬೆವರು ಬಯಲುಗಳಿಂದ.
ಪ್ರತಿಯೊಂದಕ್ಕೂ ಮುಷ್ಕರ ಹೂಡುವ ನಿಮ್ಮನ್ನು
ಅವರು ಹೇಗೆ ಪ್ರೀತಿಸುವರು? ನಿಮ್ಮ ಸಮೃದ್ಧ
ಮಣ್ಣು, ನಿಮ್ಮ ಜಜ್ಜುವ ಮಕ್ಕಳನ್ನು.
ಒಬ್ಬರು ಹೇಳಿದರು "ನಿಮಗೆ ಗೊತ್ತೆ ನಿಮ್ಮದು
ನಿಜವಾಗಿಯೂ ಮೆಟ್ರೋಪಾಲಿಟನ್ ನಗರ."

ಸುರ್ಮಾ: ಮೇಘಾಲಯದ ದಕ್ಷಿಣ ಗಡಿ
ಬಂಗ್ಲಾ ದೇಶದಲ್ಲಿ ಹರಿಯುವ ನದಿ

English: Desmond L Kharmawphlang

೩೭ ಮಿನ್‌ಟ್ಟು ಮತ್ತು ಮಿನ್ರನ್‌ಗಾಡ್

ಒಂದಾನೊಂದು ಕಾಲದಲ್ಲಿ,
ಹೊಸದಾದ ಪ್ರಪಂಚದಲ್ಲಿ ಪರ್ವತ,
ಗಿಡ ಮರಗಳು ಬೆಳೆಯುತ್ತಿದ್ದ ಸಮಯದಲ್ಲಿ
ಕಾಶಿ-ಜಯಂತಿ ಪರ್ವತಗಳ ಮೇಲಿಂದ
ಸುಂದರ ನದಿ ಸಹೋದರಿಯರಿಬ್ಬರು
ಕೆಳಗಿನ ಬಯಲುಗಳನ್ನು ಯಾರು ಮೊದಲು
ಮುಟ್ಟುತ್ತಾರೆಂದು ಪಂದ್ಯ ಹಾಕಿಕೊಂಡು
ಓಡಿದರು; ಮಾನವನ ಸೇವೆ ಮಾಡಿ, ಪ್ರೀತಿ
ಪ್ರಶಂಸೆ, ಬಹುಮಾನ ಪಡೆಯಲೆಂದು.

ಮಿನ್ರನ್‌ಗಾಡ್ ರಭಸವಾಗಿ ಮತ್ತು ಗರ್ವದಿಂದ
ಕಾಶಿ ಬೆಟ್ಟಗಳನ್ನು ಕತ್ತರಿಸುತ್ತ ಹೊರಟರೆ,
ಮಿನ್‌ಟ್ಟು ಅಷ್ಟೇ ಸಾವಧಾನವಾಗಿ ಜಯಂತಿಯ
ಪರ್ವತಗಳಿಂದ ಬಯಲುಗಳ ಕಡೆಗೆ ಓಡಿದಳು.
ಮಿನ್ರನ್‌ಗಾಡ್ ಬೋರ್ಗರೆಯುತ್ತ ಜಂಬ ಕೊಚ್ಚಿಕೊಳ್ಳುತ್ತ
ಯಾರಿಗೂ ಕಾಣಿಸದೆ, ಬೆಟ್ಟಗಳಿಗೆ ಅಪ್ಪಳಿಸುತ್ತ,
ದೂರದವರೆಗೂ ಸಿಡಿಲಿನಂತೆ ಶಬ್ದ ಮಾಡುತ್ತ, ಕೊರಕಲು
ಸೃಷ್ಟಿಸುತ್ತ, ಮನುಷ್ಯ ಪ್ರಾಣಿಗಳ ನಿದ್ದೆ ಕೆಡಿಸುತ್ತ, ಎತ್ತರದ
ಪರ್ವತಗಳಿಂದ ಅಡ್ಡ ಸಿಕ್ಕಿದ ಶಿಲೆಗಳನ್ನು ಪುಡಿ ಮಾಡುತ್ತ,
ಮುಗ್ಗರಿಸುತ್ತ ಹೇರಳ ಗುಂಡು ಕಲ್ಲು ಮಣ್ಣು
ರಾಶಿಯೊಂದಿಗೆ ಒಂದೇ ಉಸಿರಿನಲ್ಲಿ
ಧಾವಿಸಿ ಬಂದಿದ್ದಳು ಬಯಲು ಪ್ರದೇಶಕ್ಕೆ.

ಆದರೆ ದಪ್ಪದಾದ ಮಣ್ಣುದಾರಿ ಅವಳನ್ನು
ಮುಂದೆ ಸಾಗದಂತೆ ಕಟ್ಟಿಹಾಕಿತ್ತು, ತೊಂದರೆಗಳು ಹೆಚ್ಚಿ
ದಾರಿ ಕಾಣದೆ ಕಂಗಾಲಾಗಿ ಶಂಬುಕದಂತೆ ದಾರಿ ಸವೆದಳು.
ಸ್ವಲ್ಪ ದೂರ ಸಾಗಿ ಎತ್ತರದಲ್ಲಿ ನಿಂತು ಕೆಳಕ್ಕೆ ಕಣ್ಣು
ಹಾಯಿಸುತ್ತಾಳೆ? ಎಲ್ಲೆಲ್ಲೂ ಬಯಲು ಪ್ರದೇಶ;
ಒಪ್ಪ ಓರಣ ಮಾಡಿ ಹರಿಯುತ್ತಿದ್ದಾಳೆ ಮಿನ್‌ಟ್ಟು,

ಮೌನವಾದ ಮಿನ್ರನ್‌ಗಾಡ್ ಹಿಂದಕ್ಕೋಗಲಾರದೆ,
ಮುಂದಕ್ಕೂ ಸಾಗದೆ ದುಃಖಿಸುತ್ತಾ ನೆಲದ ಆಳದಲ್ಲಿ
ಹುದುಗಿ ಗೊತ್ತು ಗುರಿಯಿಲ್ಲದೆ ಸಾಗಿದಳು.

ಮಿನ್‌ಟ್ಡು, ಗಿಡ ಮರ ಹಸಿರು ಹುಲ್ಲಿನ ನಡುವೆ
ಜುಳು ಜುಳು ಶಬ್ದದೊಂದಿಗೆ ಹಾಡುತ್ತ-
ಸೂರ್ಯ ಚಂದ್ರರು ಯಾವುದೇ ಸದ್ದು ಮಾಡದೆ
ಕೆಲಸ ನಡೆಸಿದಂತೆ ತನ್ನ ಕೆಲಸವನ್ನು
ಗುಪ್ತವಾಗಿ ಮಾಡಿ ಮುಗಿಸಿದ್ದಳು;
ಪ್ರಕೃತಿಯ ವಿಸ್ಮಯ ಅಲ್ಲಿ ಕಾಣುತ್ತಿತ್ತು,
ವಸಂತಕಾಲದ ಹಾಡು ಪ್ರಾರಂಭವಾಗಿತ್ತು; ನದಿ
ಕಣಿವೆಗಳಲ್ಲಿ ಹಸಿರು ಸ್ಫೋಟಿಸಿ ಬಯಲುಗಳೆಲ್ಲ
ಹಸಿರು ತುಂಬಿತ್ತು, ನದಿಯ ಇಕ್ಕೆಲುಗಳಲ್ಲಿ
ಬಣ್ಣ ಬಣ್ಣದ ಹೂವುಗಳು ಬಿರಿದಿದ್ದವು. ಅಲ್ಲಿಂದ
ಹುಬ್ಬೇರಿಸಿ ನಿಂತು ಬೆಟ್ಟಗಳು ತಲುಪಿದಾಗ ಬೇಸಿಗೆ
ಕಾಲವಾಗಿತ್ತು. ಅಂತೂ ಅವಳು ತಾನು ಸವೆದ
ದಾರಿಯಲ್ಲಿ ಜಯಸಿ ಬಂದಿದ್ದಳು; ಸರೋವರ,
ಜಲಪಾತಗಳನ್ನು ತುಂಬಿಸಿ ಕೊನೆಗೆ ಮರುಳು
ನೆಲವ ಮುಟ್ಟಿ ಮಾನವನ ಪ್ರೀತಿ ಪ್ರಶಂಸೆಗೆ
ಪಾತ್ರಳಾಗಿದ್ದಳು, ಬಹುಮಾನವು ಗಳಿಸಿದ್ದಳು.
ಅದು ಅವಳಿಗೆ ದಕ್ಕಲೇ ಬೇಕಲ್ಲವೇ..

ಮಿನ್‌ಟ್ಡು ಮತ್ತು ಮಿನ್ರನ್‌ಗಾಡ್ ಎಂಬ ನದಿ ಸಹೋದರಿಯರು ಮೇಘಾಲಯದ ಕಾಶಿ ಜಯಂತಿಯ ಪರ್ವತಗಳಿಂದ ಫಲವತ್ತಾದ ಬಯಲುಗಳನ್ನು ಯಾರು ಮೊದಲು ತಲುಪುತ್ತಾರೆಂದು ಪಂದ್ಯ ಹಾಕಿಕೊಂಡರು. ಮಿನ್‌ಟ್ಡು ಬಹಳ ಉತ್ಸಾಹಿ ಮತ್ತು ಮುನ್ನೋಟ ಉಳ್ಳವಳಾದರೆ, ಮಿನ್ರನ್‌ಗಾಡ್ ಆತುರ ಮತ್ತು ಗರ್ವದವಳು. ಈ ಜಾನಪದ ಕಾವ್ಯವನ್ನು ಮೇಘಾಲಯದ ಕಾಶಿ ಬುಡಕಟ್ಟು ಜನರ The language and literature of Megalaya - M.Bareh's ಕೃತಿಯಿಂದ ಸಂಗ್ರಹ ಮಾಡಲಾಗಿದೆ.

ಖಿಲ ಕಿಲ್ಲಂಗ್

ಪುರಾತನ ಬೋಳು ಶಿಲೆ
ಅಡ್ಡಡ್ಡ ಆಕಾಶದೆಡೆಗೆ ಮುಖಮಾಡಿ
ನಿಂತಿದೆ; ಗಾಳಿ ಬೀಸುವ ಎತ್ತರದಲ್ಲಿ ನಿಂತು
ಸುತ್ತಲೂ ದೃಷ್ಟಿ ಬೀರುತ್ತಿದೆ.

ಅವನ ತಲೆಯಿಲ್ಲದ ಕಣ್ಣೋಟದ ಕೆಳಗೆ
ಕಡಿದಾದ ಪರ್ವತಗಳ ನಡುವೆ
ನದಿಗಳು ಹಾಡುತ್ತ ನಾಟ್ಯವಾಡುತ್ತ
ವೇಗವಾಗಿ ಧಾವಿಸುತ್ತಿವೆ.

ಅಚಲವಾದ ಅವನ ಕಣ್ಣುಬ್ಬುಗಳ ಕೆಳಗೆ
ಕಾಲಮಾನಗಳು ಕಳೆದು ಹೋಗಿವೆ,
ಋತುಗಳು ಬಂದು ಹೋಗಿವೆ;
ಮಾನವನ ತಲೆಮಾರುಗಳು ಬದಲಾಗಿವೆ.

ಎಷ್ಟೋ ಗುಡುಗು ಸಿಡಿಲು ಅವನ
ಬೋಡು ತಲೆಯನ್ನು ಸವರಿಕೊಂಡು ಹೋಗಿವೆ,
ಚಂಡಮಾರುತಗಳು ಬಂದು ಹೋಗುತ್ತಲೆ ಇವೆ,
ಯಾವುದಕ್ಕೂ ಜಗ್ಗದೆ ಬಗ್ಗದೆ ನಿಂತಿದೆ ಕಿಲ್ಲಂಗ್*.

ಕಿಲ್ಲಂಗ್ ನಿಜವಾಗಿಯೂ ನಮ್ಮ ಶುಭಸೂಚಕ,
ನಂಬಿಕೆಯ ದೇವತೆ,
ಉದಾತ್ತ ಕಾಶಿ ಜನಾಂಗಗಳ
ಯಶಸ್ಸಿನ ಹಿಂದೆ ನಿಂತಿದ್ದಾಳೆ.

ತೊಂದರೆ ಬಂದಾಗ ದೃಢವಾಗಿರಿ,
ಶಾಂತತೆಯಿಂದ ನಿಶ್ಚಿಂತೆಯಾಗಿರಿ, ಉಳಿದಿದ್ದು
ಅವಳ ಶಕ್ತಿಯ ಮೇಲೆ ಭಾರ ಹಾಕಿ
ಕಾಲ ಎಲ್ಲವನ್ನೂ ನೋಡಿಕೊಳ್ಳುತ್ತದೆ.

ಧೈರ್ಯಶಾಲಿ ಬೋಳು ಶಿಲೆ ಆಕಾಶದ ಜೊತೆಗೆ
ಯಾವಾಗಲೂ ನಿಂತಂತೆ ನಾವು ಎಲ್ಲವನ್ನೂ
ಮರೆತು ಈ ದೇವತೆ ಹೇಳಿದಂತೆ ಮಾಡೋಣ
ಆ ಕಲ್ಲಿನ ಜೊತೆಗೆ ಬದುಕಿ ಸಾಯೋಣ

ನಮ್ಮ ಜೊತೆಗೆ ಇರುವವರೆಗೆ ನಾವು
ಹೆಜ್ಜೆ ತಪ್ಪುವುದಿಲ್ಲ ನಮ್ಮ ಪೂರ್ವಜರ
ಪಿಸುಮಾತುಗಳು ನಮ್ಮ ಆತ್ಮಗಳಲ್ಲಿ
ನಿಧಾನವಾಗಿ ಹೀಗೆಯೇ ಬೆರೆತೋಗುತ್ತಿರಲಿ–

* ಕಿಲ್ಲಂಗ್ ಹೆಸರಿನ ಗ್ರಾನೈಟ್ ಶಿಲೆ ಕಾಶಿ ಪರ್ವತಗಳ ಮಧ್ಯೆ ದೈತ್ಯಾಕಾರವಾಗಿ ಎದ್ದು ನಿಂತಿದೆ. ಕಾಶಿ ಜನರ ನಂಬಿಕೆಯಂತೆ ಕಿಲ್ಲಂಗ್ ಶಿಲೆ ಬಿರುಗಾಳಿ-ಚಂಡಮಾರುತಗಳ ದೇವತೆಯಾಗಿದ್ದು ಕ್ಷುದ್ರ ಶಕ್ತಿಗಳನ್ನು ಎದುರಿಸಿ ಯಾವಾಗಲು ಜಯ ಪಡೆಯುತ್ತದೆ.

ಈ ಜನಪದ ಕಾವ್ಯವನ್ನು ಮೇಘಾಲಯದ ಕಾಶಿ ಬುಡಕಟ್ಟು
ಜನರ The language and literature of Megalaya -
M.Bareh's ಕೃತಿಯಿಂದ ಸಂಗ್ರಹ ಮಾಡಲಾಗಿದೆ.

೩೯ ಬೀಘು ವೈಯ್ಯಾರ ಮಯೂರ

ಚೈತ್ರ ಹೋಗಿ ವೈಶಾಖ ಆಗಮಿಸುತ್ತಿದ್ದಂತೆ,
ಬೇಬೆಲಿ ಬಳ್ಳಿ ಮೊಗ್ಗೊಡೆದಾಗ ಮಾತು
ಮುಗಿಯುವುದೇ ಇಲ್ಲ ಬೀಘು ಬಗ್ಗೆ...
ಮದ್ದಳೆಗಾರರು ಬಾರಿಸುತ್ತಾರೆ ಮದ್ದಳೆ,
ನೃತ್ಯ ಮಾಡುವವರು ನೃತ್ಯ ಮಾಡುತ್ತಾರೆ:
ಓ ನೃತ್ಯಗಾರನೇ ಹತ್ತಿರ ಬರಬೇಡ...
ನಿನ್ನ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲಾರೆ.

ರಾತ್ರಿ ಮುಗಿಯುತ್ತಾಹೋದರು...
ಬೀಘು ನೃತ್ಯದಿಂದ ನಮಗೆ ಆಯಾಸವೆ ಇಲ್ಲ,
ರಾತ್ರಿಯೆಲ್ಲ ಗೂಬೆಗಳು ಹೀಕಾರ ಮಾಡಿದರೂ
ಯಾರಿಂದಲೂ ನಮ್ಮ ಬೀಘು ನಿಲ್ಲಿಸಲಸಾಧ್ಯ.
ದೇವರು ಮೊದಲಿಗೆ ಎಲ್ಲವನ್ನು ಸೃಷ್ಟಿಸಿದ,
ಅನಂತರ ಎಲ್ಲಾ ಜೀವಜಂತುಗಳು: ಕೊನೆಗೆ
ಮನುಷ್ಯ... ಅದೇ ದೇವರು ಪ್ರೀತಿ ಮಾಡಿ
ತೋರಿಸಿದ: ನಾವು ಪ್ರೀತಿಸುವುದರಲ್ಲಿ
ತಪ್ಪೇನಿದೆ?

ನಾನೊಂದು ಹಂಸವಾಗಿ ನಿನ್ನ ಕೊಳದಲ್ಲಿ ಈಜಲೆ,
ಪಾರಿವಾಳವಾಗಿ ನಿನ್ನ ಮನೆಯ ಮೇಲೆ ಹಾರಲೆ:
ಬೆವರಾಗಿ ನಿನ್ನ ದೇಹದ ಮೇಲೆ ಉರುಳಲೇ,
ದುಂಬಿಯಾಗಿ ನಿನ್ನ ಕೆನ್ನೆ ಚುಂಬಿಸಲೇ.
ದಿಢೀರನೆ ನಿನ್ನೊಳಗೆ ತೂರಲು ಸಿಡಿಲಲ್ಲ ನಾನು,
ನದಿಯೂ ಅಲ್ಲ ನಿನ್ನ ಆಳಕ್ಕೆ ಹರಿಯಲು:
ಪಕ್ಷಿಯಾಗಿದ್ದರೆ ಎರಡು ರೆಕ್ಕೆಗಳ ಮೇಲೆ
ಹೊತ್ತು ಹಾರುತ್ತಿದ್ದೆ ನಿನ್ನ.

ನೀನು ಸೌತೆಕಾಯಾಗಿದ್ದರೆ ಚಪ್ಪರಿಸುತ್ತಿದ್ದೆ,
ಹುಲ್ಲೆಯ ನಿನ್ನ ಕಣ್ಣುಗಳು-:
ಎರಡು ತಾವರೆ ಬೀಜಗಳ-ಪಾತ್ರೆಗಳು ನಿನ್ನ ಮೊಲೆಗಳು:
ನಿನ್ನ ಎರಡು ತೋಳಗಳು ರೇಷ್ಮೆ ಒಳಗಿನ
ತಾವರೆ ಬಳ್ಳಿಗಳು.
ಆಯ್ದುಕೊಂಡೆ ಪ್ರಿಯೆ ನಾನು-
ನಿನ್ನ ಹಿಡಿಗಾತ್ರದ ನಡುವನ್ನು:
ನನ್ನ ದೇಹ ಉರಿಯುತ್ತಿದೆ ಬೆಂಕಿಯಲ್ಲಿ
ಬಿದ್ದ ಸಾಸುವೆ ಕಾಳುಗಳಂತೆ:
ನದಿ ಘಾಟಿನಲ್ಲಿ ನಿನ್ನ ನೋಡಿದಂದಿನಿಂದ.

ಹಸಿ ಬಾಳೆ ಮರವನ್ನು ಹೀಗೇಕೆ
ಕತ್ತರಿಸುವಿರಿ? (ಕರಿಮಾಡಲು)
ಯಾರೋ ಬೋಗುಣಿ ತುಂಬಿಕೊಂಡು ಮುಕ್ಕುವರು:
ಹೆಣ್ಣು ಮಕ್ಕಳನ್ನು ಯಾಕಾದರೂ ಬೆಳೆಸಬೇಕು?
ಅವಳ ಕಷ್ಟದ ಫಲವನ್ನು ಅನ್ಯರು ಉಣ್ಣುವುದಕ್ಕೆ.
ನನ್ನ ಪುಟ್ಟ ತಾಯಿ, ನೆನ್ನೆ ಅವಳ
ತಾಯಿಯ ಜೊತೆಗೆ ಮಲಗಿ ನಿದ್ದೆ ಮಾಡಿದ್ದಳು:
ಈ ದಿನ ಆಗಲೆ ತಯಾರಾಗುತ್ತಿರುವಳು
ನಮ್ಮನ್ನಗಲಿ ಕಾಡು-ಬೆಂಕಿ ದಾಟಿ ಹೋಗಲು
(ಗಂಡನ ಮನೆಗೆ).

ಆಚಾರಿ ಹಗಲು ರಾತ್ರಿ ಚಿನ್ನದ
ಆಭರಣಗಳ ತಯಾರಿಸುತ್ತಿದ್ದಾನೆ-
ಮಧುಮಗಳು ಸುಂದರ ಧಿರಿಸಾಕಿಕೊಂಡು
ನೆರಳಲ್ಲಿ ನಿಂತರೂ ಒಣಗಿ ಹಿಡಿಯಾಗುತ್ತದೆ
ಅಂಗೈಯಲ್ಲಿ; ಅವಳು ಮಧುಮಗಳಾಗಿ ನಿಂತಾಗ
ಈ ನೆಲದಲ್ಲಿಯೇ ಸುಂದರವಾಗಿ ಕಾಣುತ್ತಾಳೆ.

೪೦ ಹನ್ನೆರಡು ಮಾಸಗಳ ಬೀಹು

ಪುಷ್ಯಮಾಸ, ಓ ಶಾಂತಿ, ಮಂಜು ಆವರಿಸಿದೆ ಸುತ್ತಲೂ:
ನನ್ನ ನಲ್ಲ ಹೋಗಿರುವನು ಪಗಡೆ, ಜೂಜಾಡಲು;
ಎಲ್ಲಿಗೋದೆ ನನ್ನ ಬಿಟ್ಟು ಓ ನನ್ನ ಗೋಪಾಲ?

ವೈಶಾಖ, ಓ ಶಾಂತಿ, ಆಕಾಶದಲ್ಲಿ ದೇವತೆಗಳ ಘರ್ಜನೆ
ಕೇಳಿದ ಮೀನುಗಳು ಮೊಟ್ಟೆ ಇಡಲು ಬರುತ್ತಿವೆ:
ವರ್ಷಕ್ಕೊಮ್ಮೆ ಮೊಟ್ಟೆ ಇಡುತ್ತವೆ ಮೀನುಗಳು,
ದುರಾದೃಷ್ಟಳಾದ ನಾನು ಅದನ್ನೂ ಮಾಡಲಾರೆ.

ಜೇಷ್ಠ, ಓ ಶಾಂತಿ, ತೀವ್ರ ಬರಗಾಲ,
ಮೇವು ದೊರಕದೆ ಕಾಡುಹುಲ್ಲೆ ಹಿಂದಿರುಗುತ್ತದೆ ಮನೆಗೆ:
ಯಾರನ್ನು ಇಷ್ಟಪಡುವೆನೊ ಅವರೇ ಮೋಸಮಾಡುವರು,
ಬುದ್ಧಿ ಇಲ್ಲದ ನನ್ನ ವ್ಯಾಪಾರಿ ಗಂಡ ಹಿಂದಿರುಗಿ ಬರಲಿಲ್ಲ.

ಆಷಾಢದಲ್ಲಿ ಮೊದಲ ನೆರೆ ಬರುತ್ತದೆ,
ಹೂವುಗಳ ಪದರು ಮೇಲೆ ಕೆಳಗೆ ತೇಲಾಡುತ್ತದೆ:
ಹೂಹಾಸಿಗೆ ಮೇಲೆ ಶಾಂತಿಗೆ ನಿದ್ದೆ ಬರಲಿಲ್ಲ,
ಅವಳ ಗಂಡ ಎಷ್ಟು ದಿನಗಳಾದರೂ ಬರಲಿಲ್ಲ.

ಶ್ರಾವಣ ಮಾಸ ಭತ್ತ ನಾಟಿ ಮಾಡುವ ಕಾಲ:
ಅವಳ ಜೊತೆಗೆ ನಾಟಿ ಮಾಡಲು ಒಬ್ಬನೂ ಇಲ್ಲ:
ಚಂದ್ರನಿಲ್ಲದ ಆಕಾಶದಲ್ಲಿ ನಕ್ಷತ್ರಗಳು ಹೊಳೆಯಲಿಲ್ಲ,
ಗಂಡನಿಲ್ಲದ ಹಾಸಿಗೆ ಮೇಲೆ ಅವಳು ಹೆಣವಿದ್ದಂತೆ.

ಭಾದ್ರಪದ ತೀರ ಬರಗಾಲದ ಕಾಲ,
ನದಿ ಪಾತ್ರಗಳು ಒಣಗಿ, ಮರಳು ಮೇಲೆ ಕಾಣಿಸುತ್ತಿದೆ:
ಕಾಗೆಗಳು ಕಾಕಾ ಎಂದು, ಬಾತುಗಳು ಕರ್ಕಶ ಕೂಗುತ್ತಿವೆ,
ಆರು ತಿಂಗಳಿಂದ ಮಳೆರಾಯ ಆಕಾಶದಲ್ಲಿ ಕಾಣಿಸಲಿಲ್ಲ.

ಆಶ್ವಿನಿಯಲ್ಲಿ ದೇವಿಯ ಪೂಜೆ ನಡೆಯುತ್ತದೆ,
ಬಾತು ಮತ್ತು ಆಡುಗಳ ಬಲಿ ಸಾಗುತ್ತದೆ,
ಪಾರಿವಾಳ ಗುಡ್ಡೆಗಳಿಗೆ ಲೆಕ್ಕ ದೊರಕುವುದಿಲ್ಲ,
ನನ್ನ ವ್ಯಾಪರಿ ಗಂಡ ಎಲ್ಲೆ ಇರಲಿ ಚನ್ನಾಗಿರಲಿ.

(ಅಸ್ಸಾಂನ ಬೀಹು ಪದಗಳು)

೪೧ ಆತ್ಮರತಿ

ಕಳೆದ ರಾತ್ರಿ ನೆರಳು ನನ್ನನ್ನು ಹಿಂಬಾಲಿಸಿತ್ತು
ಮತ್ತು ಚಳಿಗಾಲದ ಚಂದ್ರ ನನ್ನ
ಕಿವಿಗಳಲ್ಲಿ ಕಿರಿಚಿದ್ದ:
ಆಹಾ! ಕಲಕತ್ತ, ನನಗೆ ನಿದ್ದೆ ಬರಲಿಲ್ಲ.
ಗಮನಿಸಿದೆ ನಿನ್ನ ನಿಶ್ಯಬ್ದ ನೇಯ್ಗೆಯನ್ನು,
ನಿನ್ನ ಕಾವ್ಯದ ವಸ್ತ್ರಾಲಂಕಾರ, ಹಾಡುಗಳು,
ಬಾಡಿದ ಗುಲಾಬಿಗಳು ಮತ್ತು ಗಾಢ ಬಣ್ಣದ
ಒಂದು ಜೋಡಿ ಕಣ್ಣುಗಳನ್ನು.

ನಾನು ನೋಡಿದೆ-
ಸಾವಿರ ಜಿಪ್ಸಿ ಬೇಸಿಗೆಗಳನ್ನು
ಮಧ್ಯ ರಾತ್ರಿ ರಾಷ್ಟ್ರೀಯ ಹೆದ್ದಾರಿ
೩೭ರಲ್ಲಿ ಪ್ರಯಾಣ ಮಾಡಿದೆ ಮತ್ತು
ಬೆಳಗಿನ ಜಾವ ಕಾಡು ಹಕ್ಕಿಗಳ
ಜೊತೆಗೆ ಸಂಭಾಷಿಸಿದೆ,
ಭತ್ತದ ಗದ್ದೆಯಲ್ಲಿ ಚಿಲಿಪಿಲಿ ಹಕ್ಕಿಗಳು
'ಏ ಮಾರಿಯಾ... ಏ ಮಾರಿಯಾ...'
ಹಾಡನ್ನು ಹಾಡುತ್ತಿದ್ದವು. ಮುಳ್ಳು
ಕಂಟೆಗಳಲ್ಲಿ ಹಾಡುತ್ತಿದ್ದ ಪಕ್ಕಿಯೊಂದು
ನನ್ನನ್ನು ಹಿಂದಕ್ಕೆ ತಂದಿತ್ತು, ನಾನು ಹೇಳಿದ
ಗುಡ್‌ಬೈ ನಿನಗೆ ಕೇಳಿಸಲಿಲ್ಲ ಕನ್ಯೆ;
ನನ್ನ ಸಾಯಂಕಾಲದ ಅರ್ಧ ಹಾಡನ್ನು,
ಕನಸುಗಳನ್ನು ಮತ್ತು ಕಳೆದ ವರ್ಷ
ತಂದುಕೊಂಡ ಶರದೃತುವನ್ನು
ನಿನಗಾಗಿ ಇಲ್ಲೆ ಬಿಟ್ಟುಹೋಗುವೆ.

ನಿನ್ನ Solipsism ಉಳಿಸಿಕೊಂಡು
ನನಗೆ ಪ್ರೀತಿ ನೀಡು To Dylan at ೧೨:೩೦ಕ್ಕೆ
ಅರೆಬಿಯನ್ ರಾತ್ರಿ ಧರಿಸುತ್ತಾನೆ ಅತ.

English : Easterine Iralu

೪೨ ಲುಂಗ್ವೆರೊಕ್ ಕಲ್ಲು ಮಾನವರು

ಲುಂಗ್ವೆರೊಕ್‌ನ
ಭೂಗರ್ಭದಿಂದ ಜನಿಸಿದರು
ನಮ್ಮ ಪೂರ್ವಜರು ಆರು ಕಲ್ಲುಗಳಾಗಿ.

ಕಲ್ಲು–ಜನರು
ಕಾವ್ಯ ಮತ್ತು ವಿವೇಕ ಉಳ್ಳವರಾಗಿ
ಅಸಂಸ್ಕೃತ ಮತ್ತು ಲಾವಣಿಕಾರರಾಗಿ
ನೀರು ಕಂಡಿಡಿದವರು ಮತ್ತು ಬೆಂಕಿಯ
ಜೊತೆಗೆ ಹೋರಾಟ ನಡೆಸಿದವರು.

ಕಲ್ಲು–ಜನರು
ಬಹುಭಾಷೆ ಬಲ್ಲವರು
ಪಕ್ಷಿ ಭಾಷೆ ಮತ್ತು ಪ್ರಾಣಿಗಳ
ಜೊತೆಗೆ ಸಂಭಾಷಿಸುವವರು,
ಇರುವೆಗಳಿಂದ ಕೆತ್ತನೆ ಕಲೆ ಕಲಿತವರು,
ಯುದ್ಧದಲ್ಲಿ ಶತ್ರುಗಳ ತಲೆ ಕಡಿದು
ಟ್ರೋಫಿಗಳನ್ನು ಮಾಡಿಕೊಂಡವರು.

ಕಲ್ಲು–ಜನರು
ರಮ್ಯ ಕಲ್ಪನೆಯುಳ್ಳವರು;
ಸೂರ್ಯ ಸೆಟಗೊಂಡವನು
ಚಂದ್ರ ಮರೆಯಾಗುವವನು, ನಕ್ಷತ್ರಗಳು
ನಕ್ಷತ್ರಗಳಲ್ಲ ವಿಯೋಗಗೊಂಡ ನಮ್ಮ ಶುದ್ಧ
ಆತ್ಮಗಳು ಹತ್ತಿರ ನಿಂತು ನೋಡುತ್ತವೆ ಎಂದು
ನಂಬಿದವರು.

ಕಲ್ಲು–ಜನರು
ಮಡಿಕೆ ಕುಡಿಕೆ ಮಾಡುವವರು
ಬಟ್ಟೆ ನೇಯುವವರು, ಕೃಷಿಕರು,

ತಲೆ ಚೆಂಡಾಡುವವರು, ಹಾಡುಗಾರರು,
ತಲೆಗಳ ಕಡಿಯುವವರು, ಸಭ್ಯ ಪ್ರಿಯತಮರು
ಮತ್ತು ಅನಾಗರಿಕ ವೀರರು ಮನೆ ಕಟ್ಟಿ
ಹಳ್ಳಿಗಳ ನಾಶ ಮಾಡುವವರು.

ಕಲ್ಲು-ಜನರು
ಗೊತ್ತಿಲ್ಲದ, ನೋಡಿಲ್ಲದ ಭೂತ ಪ್ರೇತಗಳನ್ನು
ಆರಾಧಿಸುವವರು ಗಿಡ ಮರ ಕಾಡು,
ಬೆಟ್ಟ ಗುಡ್ಡ ನದಿಗಳು, ಆತ್ಮಗಳ
ನಂಬಿಕೆ ಇರುವವರು.

ಕಲ್ಲು-ಜನರು
ಅನಾಗರಿಕರು ಮತ್ತು ಋಷಿ ಮುನಿಗಳು,
ಲುಂಗ್ಪೆರೊಕ್‌ನಿಂದ ಹೊರಬಂದವರು
ಕಲ್ಲು ಬಿರಿದಾಗ ವಯಸ್ಕರರಾಗಿದ್ದರೆ?
ಅಥವಾ ಕಲ್ಲು-ಜನರು ಇನ್ನೂ
ಮನುಷ್ಯರಾಗಿ ಬೆಳೆಯಬೇಕೆ?

ಲುಂಗ್ಪೆರೊಕ್:(ಆರು ಶಿಲೆಗಳು):
ಆಓ ನಾಗಾಗಳು ನಂಬಿದಂತೆ ಅವರ ಮೂಲಸ್ಥರು ಲುಂಗ್ಪೆರೊಕ್ ಎಂಬ ಸ್ಥಳದಲ್ಲಿ ಭೂಗರ್ಭದಿಂದ ಹೊರಬಂದವರು ಎನ್ನಲಾಗಿದೆ. ಮೂವರು ಪುರುಷರು ಮತ್ತು ಮೂವರು ಮಹಿಳೆಯರು.

English: T Ao (Nagaland)

೪೩ ಚರಮವಾಕ್ಯ

*When you go home, tell them of us and say that for their tomorrow, we gave our today...

(ಕೊಹಿಮಾ ರುದ್ರಭೂಮಿಯ
ಸ್ತಂಭದ ಮೇಲೆ ಬರೆದಿರುವ ಚರಮ ವಾಕ್ಯ)

ಮೃದು ಚರ್ಮಶಿಲೆಯ ಮೇಲಿನ
ಚರಮವಾಕ್ಯ ದಾರಿ ತಪ್ಪಿದೆ, ರಕ್ತ ಮತ್ತು
ಕಣ್ಣೀರಿನ ಬಗ್ಗೆ ಅದು ಮಾತನಾಡುತ್ತಿಲ್ಲ
ಆದರೆ ಇಂದು ಮತ್ತು ನಾಳಿನ
ಸಂಗತಿಯ ಬಗ್ಗೆ ಹೇಳುತ್ತಿದೆ.

ಅಮಲೇರಿದ ಆಸೆಯಿಂದ
ಸಾವಿರಾರು ಮೈಲಿಗಳ ದೂರದಿಂದ
ಸಾಮ್ರಾಜ್ಯಗಳ ಸ್ಥಾಪಿಸಲು ಓಡಿ ಬಂದ
ವೀರರು ಇಲ್ಲಿ ಮಲಗಿದ್ದಾರೆ ಮೌನವಾಗಿ.

ನೀಟಾದ ಪುಟ್ಟ ಪೋಷಾಕು ಧರಿಸಿದ
ಅಮೃತ ಶಿಲೆಗಳು ಸುಮ್ಮನೆ ಕುಳಿತಿವೆ
ಮಕ್ಕಳಂತೆ ಎದ್ದು ಓಡಾಡಲು ಮನಸ್ಸಿಲ್ಲದೆ.
ಅಪರಿಚಿತ ಪರ್ವತ ತಪ್ಪಲಲ್ಲಿ ಕ್ರೂರ
ಬುಡಕಟ್ಟು ಜನರ ನಾಡಿನಲ್ಲಿ ಅನಾಥರಾದ
ಇವರ ಬಾಳು ಚೆಲ್ಲಿಹೋಗಿದೆ
ಮೂರಾಬಟ್ಟೆಯಾಗಿ.

ಕೀರ್ತಿ, ವೈಭವ, ಮಾನವ ಮಾನವನನ್ನು
ದೋಚಲು ಹೋದ ಫಲಿತಾಂಷವಿದು;
ನಾಳೆಯ ವ್ಯರ್ಥವನ್ನು–
ಕಲ್ಲು ಶಿಲೆಗಳ ಕೆಳಗೆ ಹೂತಿರುವುದನ್ನು

ಯೋಚಿಸಿ ನೋಡಿ ಮತ್ತು ಖಾಲಿ ಪದಗಳನ್ನು
ಹೇಳಬೇಡಿ ಬಳಲಿದ ಯಾತ್ರಿಕರಿಗೆ.

ಮನೆಗೆ ಹಿಂದಿರುಗಿಹೋಗಿ
ಪ್ರಪಂಚದ ಎಲ್ಲ ಅನಾಗರಿಕತೆಯ ಬುದ್ಧಿಹೀನ
ಅಪರಾಧಗಳಿಗೆ ಚರ್ಮವಾಕ್ಯ ಬರೆಯಿರಿ.

*ಚರಮವಾಕ್ಯ: ೨ನೇ ವಿಶ್ವಯುದ್ಧದಲ್ಲಿ ಮಡಿದ
ಬ್ರಿಟಿಷರ ಮಸಣದಲ್ಲಿ ಕೊಹಿಮಾ ನಗರದ ಮಧ್ಯೆ
ನಿಲ್ಲಿಸಿರುವ ಶಿಲೆಗಳ ಮೇಲೆ ಬರೆದಿರುವ ಶ್ರದ್ಧಾಂಜಲಿ ಲಿಪಿ.

English: T Ao (Nagaland)

೪೪ ಗಾಳಿ ಸುದ್ದಿ

ಒಂದು ಗಾಳಿ ಸುದ್ದಿ
ದೇವರು ಸತ್ತನಂತೆ ಅಥವಾ
ಇನ್ನೂ ಕೆಟ್ಟ ಸುದ್ದಿಯೆಂದರೆ
ಆತ ಯಾರನ್ನೂ ಲಕ್ಷಿಸುವುದಿಲ್ಲವಂತೆ.
ರೆಕ್ಕೆ ಬಿಚ್ಚಿ ಹಾರುತ್ತ ಬಂದ ಪುಟ್ಟ
ಹಕ್ಕಿಯನ್ನು ಕೇಳಿದೆ ನಾನು
ದೇವರು ಸತ್ತ ಸುದ್ದಿ ನಿಜವೇ?
'ಯಾರಿಗೆ ಗೊತ್ತು ಸತ್ಯ?'
ಅಷ್ಟು ಹೇಳಿದ ಹಕ್ಕಿ ಹಾರಿಹೋಯಿತು.

ಅದೇ ರಸ್ತೆಯಲ್ಲಿ ಅವಸರದಿಂದ
ಓಡಿ ಬರುತ್ತಿದ್ದ ಇರುವೆ ಕೇಳಿತು,
'ಆ ಪುಟ್ಟ ಹಕ್ಕಿ ದೇವರನ್ನು ಸಾಯಿಸಿತೆ?'
'ಸುಳ್ಳು ಸುದ್ದಿ ಕೇಳಿರುವೆ ನೀನು, ಅದು
ಗಾಳಿ ಸುದ್ದಿ ಮಾತ್ರ ಪುಟ್ಟ ಹಕ್ಕಿಗೆ
ಏನೂ ತಿಳಿದಿಲ್ಲ' ಎಂದೆ.

ಇರುವೆ ವಿಷಾಧವಾಗಿ ನೋಡಿ
ತಲೆ ತಗ್ಗಿಸಿ ಬಾಗಿದ ಕಾಲುಗಳಲ್ಲಿ
ಅವಸರವಸರವಾಗಿ ಮುಂದೆ ಹೋಯಿತು.
ಕೆಲವೇ ಕ್ಷಣಗಳಲ್ಲಿ ಸಾಲು
ಸಾಲು ಇರುವೆಗಳು ಬೀದಿಗಳಲ್ಲಿ
ತುಂಬಿ ಹೋದವು. ಕೈಗಳಲ್ಲಿ ಪ್ಲಕಾರ್ಡ್‌ಗಳು–
'ದೇವರು ಸತ್ತುಹೋದ' ಮತ್ತು
'ಪುಟ್ಟ ಹಕ್ಕಿ ದೇವರನ್ನು ಸಾಯಿಸಿದೆ'
ಇತ್ಯಾದಿ. 'ಎಲ್ಲ ಹಕ್ಕಿಗಳಿಗೆ ದಿಕ್ಕಾರ'
ಎಂದು ಕೂಗುತ್ತಿದ್ದವು.

ಜನಸಾಗರ ಹರಿದು ಬಂದು ರಸ್ತೆಗಳು
ಜಾಮ್ ಆಗಿ, ಅಪಾಯದ ಸೈರನ್ ಮೊಳಗಿತು.

ಸಾಲು ಸಾಲು ಇರುವೆಗಳು ಪ್ಲಕಾರ್ಡ್‌ಗಳೊಂದಿಗೆ
ಧಿಕ್ಕಾರ ಕೂಗುತ್ತಲೆ ಇದ್ದವು.
ಬಹುಬೇಗನೆ ವ್ಯಾಪಾರಿಗಳು ಅಂಗಡಿಗಳನ್ನು
ಮುಚ್ಚಿದರು, ಮಕ್ಕಳು ಶಾಲೆಗಳನ್ನು ಬಿಟ್ಟು
ಓಡಿ ಬಂದು ಗುಂಪಿನಲ್ಲಿ ಸೇರಿಕೊಂಡರು.
ಅಧಿಕಾರಿಗಳು ಕಛೇರಿಗಳನ್ನು ತೊರೆದರು,
ಸರಕಾರ ರಜಾ ಘೋಷಿಸಿತು.

ಮಧ್ಯಾಹ್ನದ ವೇಳೆಗೆ ಜನರಿಗೆ ಲೆಕ್ಕ
ಸಿಕ್ಕಲಿಲ್ಲ, ಎಷ್ಟು ಇರುವೆಗಳು, ಮಕ್ಕಳು,
ಪೊಲೀಸರು ಕಾಲು ತುಳಿತದಲ್ಲಿ
ಅಸು ನೀಗಿದರು ಎಂದು.
ಮೆರವಣಿಗೆ ದೊಡ್ಡ ಜಾತ್ರೆ ಸೇರುವ
ಮೈಧಾನ ತಲುಪುವ ಹೊತ್ತಿಗೆ ಮಿಲಿಟರಿ
ಸುತ್ತಿಕೊಂಡಿತು. ಹಲವು ರಾಜಕೀಯ
ಪಕ್ಷಗಳು ವಿವಿಧ ಹೇಳಿಕೆಗಳನ್ನು ನೀಡಿ
ಖಂಡಿಸಿದವು.
ಇದಕ್ಕೆಲ್ಲ ಕಾರಣ ಇರುವೆಗಳೆ? ಸರಕಾರವೆ?
ಹಕ್ಕಿಗಳೆ ಯಾರು? ಮೂಲೆಯಲ್ಲಿ
ಪುಟ್ಟ ಹಕ್ಕಿ ಒಂದು ಗೊಣಗುತ್ತಿತ್ತು.
ಈಗ ನಿಜವಾಗಿಯೂ ದೇವರು
ಸತ್ತು ಹೋಗಿದ್ದಾನೆ ಅಥವಾ ಇನ್ನೂ
ಕೆಟ್ಟ ಸುದ್ದಿ ಎಂದರೆ ಆತ ಯಾರನ್ನೂ
ಲಕ್ಷಿಸುತ್ತಿಲ್ಲ.

English: T Ao (Nagaland)

೪೫ ದೂಳು

ಈಗ ನನ್ನ ಸರದಿ ಕೊಳಾಯಿ ಮುಂದೆ:
ಈ ದಿನ ನೀರು ನಿಧಾನವಾಗಿ ತೊಟ್ಟಿಕ್ಕುತ್ತಿದೆ.
ಪ್ರತಿ ದಿನವೂ ಅದು ಮತ್ತಷ್ಟು ನಿಧಾನವಾಗುತ್ತಿದ್ದು,
ಒಂದು ದಿನ ಪೂರ್ಣವಾಗಿ ನಿಂತೇ ಹೋಗಬಹುದು;
ನನ್ನ ಗದ್ದೆ ಒಣಗಿ ದೂಳಾಗಬಹುದು.
ಸೂರ್ಯನ ಕೆಂಡದ ಕಣ್ಣು,
ರಂಧ್ರಗಳು ತುಂಬಿಹೋಗಬಹುದು ದೂಳು.
ನನ್ನ ಹಿಂದೆ ಬಕ್ಕೆಟ್ಟುಗಳ ಜೊತೆಗೆ
ದೊಡ್ಡದಾಗಿ ಜಗಳವಾಡುತ್ತಿದ್ದಾರೆ ಜನರು.
'ಹುಚ್ಚ ಆ ಬಕ್ಕೆಟ್ ತುಂಬಾ ನೀರಿಡಿಯಬೇಡ
ನಾವೆಲ್ಲ ಕೆನ್ನೆಗೆ ಬಾರಿಸುತ್ತೇವೆಂದು ಗೊತ್ತಲ್ಲ?'
ಗುಂಪಿನಿಂದ ಬಂದ ಆ ಎಚ್ಚರಿಕೆಯಿಂದ
ಬಕ್ಕೆಟ್ ಹಿಂದಕ್ಕೆ ತೆಗೆದುಕೊಂಡೆ ನಾನು.
ಅದು ಸತ್ಯ: ಅಮೂಲ್ಯ ನೀರನ್ನು ಚೆಲ್ಲಬಾರದು
ಆಸೆಯಿಂದ ನೋಡುವ ಸೂರ್ಯನಿಗೆ ಮದ್ಯತರ್ಪಣ
ಮಾಡುವುದಕ್ಕಿಂತ ನೀರು ಮುಖ್ಯ.

ಮಾರುಕಟ್ಟೆಯಲ್ಲಿ ಒಬ್ಬ ಯುವಕನನ್ನು
ಬಂದೂಕಿನಲ್ಲಿ ಸುಟ್ಟು ಸಾಯಿಸಿದ್ದು ನಾನು ನೋಡಿದೆ.
ದಡ್... ದಡ್... ಸದ್ದು ಆತ ನೆಲಕ್ಕೆ ಉರುಳಿದ,
ಆತನ ಮುಖದ ಒಂದು ಭಾಗ ಕಿತ್ತುಹೋಗಿತ್ತು.
ದುರುಗುಟ್ಟುತ್ತಿದ್ದ ಸೂರ್ಯನ ಎದುರಿಗೆ
ಆತ ಅಸ್ತವ್ಯಸ್ತ ಬಿದ್ದುಹೋಗಿದ್ದ.
ಹೊಡೆದವರು ದೂಳಿನ ಮೋಡಗಳೊಂದಿಗೆ
ಮಾಯವಾಗಿದ್ದರು ಒಂದು ಹೊಚ್ಚ ಹೊಸ ವ್ಯಾನಿನಲ್ಲಿ;
ರಕ್ತ ದೂಳಿನೊಂದಿಗೆ ತುಂತುರು ಮಳೆಯಾಗಿ
ನೆಲದ ಮೇಲೆ ಹೂವಿನ ದಳಗಳಂತೆ ಚದುರಿತ್ತು.
ಸೂರ್ಯನ ಎದುರುಗೆ ಹೂವಿನ ದಳಗಳು
ಉರಿದು ಕಿಲುಬುಗಟ್ಟಿ ನೆಲದಲ್ಲಿ ಇಂಗುತ್ತಿತ್ತು.

ನನ್ನ ರಹಸ್ಯ ಹೆಜ್ಜೆಗಳ ಸದ್ದನ್ನು ದೂಳು
ಹಣಿಕಿಸುತ್ತ ಹೇಗೊ ಏನೊ ಮನೆ ತಲುಪಿದೆ.
ಆಕಾಶದ ಕಡೆಗೆ ದೃಷ್ಟಿಸಿ ನೋಡಿದೆ-
ನಿರ್ಮಲ ನೀಲಾಕಾಶ ಆಳವಾಗಿತ್ತು.

ಓ! ಶುದ್ಧ ಮತ್ತು ಘನತೆವೆತ್ತ ಸ್ವರ್ಗದ ಆಕಾಶ!
ನಿಂತುಕೊಳ್ಳಲು ನನಗೆ ನೆರಳಿಲ್ಲವೆ. ಸ್ವರ್ಗದ
ಕುಕ್ಕುವ ಕಣ್ಣಿನಿಂದ ತಪ್ಪಿಸಿಕೊಳ್ಳಲು ಅತ್ತೆ?
ಕೈಯಿನ್ ನನ್ನ ಸಹೋದರ-ಕೈಯಿನ್!
ನನಗೆ ಗೊತ್ತು ಭಯ, ಅಪರಾಧ, ನಿನ್ನ ನೋವು-
ಈಗ ನನಗೊಬ್ಬ ಗತಿಸಿದ ಸಹೋದರ ಸಿಕ್ಕಿದ್ದ.
ರಕ್ತದ ಹೂವುಗಳಲ್ಲಿ ಮುಚ್ಚಿ ಹೋಗಿದ್ದೇನೆ ನಾನು
ನನ್ನ ಪೆನ್ನಿನಲ್ಲಿ ಮಸಿ ಮೆತ್ತಿಕೊಂಡಿದೆ ಮತ್ತು
ಹೃದಯದಲ್ಲಿ ಆ ದೂಳು.

English: Nini Lungalang (Nagaland)

೪೬ ಪೃಥ್ವಿಯ ಬಿಂದು

ಜಗಳವಾಡುತ್ತಿವೆ
ನಮ್ಮ ಅಕ್ಕ ಪಕ್ಕದ ಎರಡು ಮನೆಗಳು
ತಲೆಮಾರುಗಳಿಂದ ಬಿದ್ದಿರುವ ಅವರ ಮನೆಗಳ
ನಡುವಿನ ಒಂದು ತುಂಡು ನೆಲಕ್ಕಾಗಿ
ಅದರ ನಡುವೆ ಹರಿಯುವ ಸಣ್ಣ ಗಟಾರಿನಲ್ಲಿ
ವಿಷ ಹರಿಯುತ್ತಿದೆ ತಲತಲಾಂತರದಿಂದ
ಬಂದಿರುವ ಹಗೆ ಮುಂದುವರಿಸಲು; ಆದರೂ
ಅದು ಗಟಾರಿನಲ್ಲಿ ಕೊಚ್ಚಿ ಹೋಗಿಲ್ಲ,
ಮಣ್ಣಿನಲ್ಲಿಯೂ ಮುಚ್ಚಿಹೋಗಿಲ್ಲ;
ಸಂಪೂರ್ಣವಾಗಿ ನಾಶವೂ ಆಗಿಲ್ಲಿ.

ನನಗೆ ಆಶ್ಚರ್ಯವಾಗಿದೆ:
ನಾವಿರುವ ನೆಲ ಸ್ವಂತ ಎಂದುಕೊಂಡರೆ
ಅದರ ಕೆಳಗಿನ ಮಧ್ಯದ ನೇರ ಬಿಂದು;
ಕೇವಲ ಒಂದು ಗುಂಡು ಸೂಜಿಯ ಮೊನೆ-
ಆ ಬಿಂದು ಯಾರಿಗೆ ಸ್ವಂತ?
ಮತ್ತು ಮಳೆಯ ಯಜಮಾನ ಯಾರು?
ನಾವು ಕುಡಿಯುವ ನೀರು,
ಯಾರ ಗಾಳಿ ನಾವು ಉಸಿರಾಡುತ್ತೇವೆ?
ನೀವು ಅಥವಾ ನಾನು, ಕೋಟ್ಯಾಧಿಪತಿಗಳು
ಕೊಂಡುಕೊಳ್ಳಬಲ್ಲರೆ ಸೂರ್ಯನ ಒಂದು
ಕಿರಣವನ್ನು, ಸಾಯಂಕಾಲದ ತಂಪು,
ಬೆಳದಿಂಗಳ ರಹಸ್ಯವನ್ನು? ಯಾರಾದರು
ನಮ್ಮ ನೆರೆ ಮನೆಯ ಬೆಕ್ಕಿನ ಮೇಲೆ
ಕಲ್ಲು ಹೊಡೆಯುವರೆ?

English: Nini Lungalang (Nagaland)

೪೭ ಅವಕಾಶವಿಲ್ಲ ಚರ್ಚೆಗೆ

ಗರಿಕೆಹುಲ್ಲು ಜೀವಿಸುತ್ತಿದೆ ಇಲ್ಲಿ
ಸಿಡಿ ಮದ್ದಿನ ಘಾಟು ವಾಸನೆಯಲ್ಲಿ;
ಗ್ಯಾಂಗ್ ಒಂದು ಅತ್ಯಾಚಾರ ನಡೆಸಿದ
ಪರ್ವತ ಹೆಣ್ಣು ದೇಹ ಚೈತನ್ಯ ಇಲ್ಲದೆ
ಬಿದ್ದಿದೆ ಜೂಮ್ ಟೊಂಗ್‌ನಲ್ಲಿ.*

ಆಹಾ! ನೀತಿಗೆಟ್ಟ ಕೆಲವು ಭ್ರಾಂತ ಯುವಕರ
ಸ್ವಯಂ ಆಡಳಿತದ ಅರ್ಥ, ಪೂರ್ಣವಾಗಿ
ಬೇರೆಯೆ ಆಗಿದೆ...
ಅಲ್ಲಿ ಇಲ್ಲಿ ಎಲ್ಲೆಲ್ಲೂ ನೀಚರಾದ ಸಿಡಿಮದ್ದು
ವ್ಯಾಪಾರಿಗಳು; ಭಯೋತ್ಪಾದಕರ ಹಿಡಿತದಲ್ಲಿ
ನೀವು ನಾವು, ಆತ್ಮಸಾಕ್ಷಿ ಎಲ್ಲಿಯೋ
ಇನ್ನೊಂದು ಕಡೆ ಕಳೆದುಹೋಗಿದೆ
ಅಷ್ಟೇ ಅಲ್ಲ?
ಈಗ ಭಯೋತ್ಪಾದನೆ ಬಹಳ ಅಗ್ಗದ ವಸ್ತು
ಬಹುಶಃ ಮಕ್ಕಳ ಆಟಿಕೆಗಳಿಗಿಂತ ಅಗ್ಗ.
ಈಗ ಉಳಿದಿಲ್ಲ ಯಾವುದೇ ಕುತೂಹಲ-
ಯಾವ ಪ್ರಶ್ನೆಗಳೂ ಇಲ್ಲ.
ಈಗ ಮಾನವೀಯತೆ ಪುನರುತ್ಥಾನಗೊಳ್ಳುವ
ಸಮಯ ವಿಷಯ-ಜೀಸಸ್‌ಗೆ ಬಿಟ್ಟಿದ್ದು.

*ಜೂಮ್ ಟೊಂಗ್: ಕೃಷಿ ಮಾಡುವ ಸ್ಥಳದಲ್ಲಿನ ಗುಡಿಸಲು
ಚಕ್ಮ: ತ್ರಿಪುರ ರಾಜ್ಯದ ಒಂದು ಬುಡಕಟ್ಟು ಭಾಷೆ.

Chakma: Niranjan Chakma,
English: Rita Chakma

೪೮ ಅಪರಿಚಿತ ಕತ್ತಲಲ್ಲಿ

ಅವನ ಜೊತೆಗೆ ಯಾವುದೇ ವ್ಯಾಪಾರದ
ಸಂಬಂಧ ಇರಲಿಲ್ಲ, ಗಿಯಸ್ ಉದ್ದಿನ್
ಕೆಲವು ತಿಂಗಳ ಹಿಂದೆ ಓಡಿಹೋಗಿದ್ದ.
ನನ್ನ ಅಜ್ಜಿಯ ಮೂರು ಬಿಗಾ ಜಮೀನು
ಅನಾಥ ಆಶ್ರಮಕ್ಕೆ ಕೊಡುವುದಾಗಿ
ಹೇಳಿ ಮೋಸ ಮಾಡಿದ ಕಾರಣ
ಆಕೆ ಕೆಲವು ದಿನಗಳ ಹಿಂದೆ ದೈವಾದೀನಳಾಗಿದ್ದಳು.

ಅಳಿದುಳಿದ ಸಾಲ ತೀರಿಸಿ ನನ್ನ ಗುಡಿಸಿಲನ್ನು ಹೊಸ
ಕಾಲೋನಿಗೆ ಬದಲಾಯಿಸಿದೆ. ನನ್ನ ಅಡಿಗೆ ನಾನೇ
ಮಾಡಿಕೊಳ್ಳುತ್ತೇನೆ ಮತ್ತು ನನ್ನ ಗುಡಿಸಿಲ ಒಳಗೆ
ಬರುವವರು ತಲೆ ಬಗ್ಗಿಸಿ ಬರಲೇಬೇಕು; ಅದು ಕಾನೂನು,
ಅದೊಂದು ಅಪಪ್ರಚಾರ ಸಾಮ್ರಾಜ್ಯಶಾಹಿಗಳು
ಒಳ್ಳೆಯದಕ್ಕೆ ದೇಶ ಬಿಟ್ಟುಹೋದರು.

ಜನಸಾಮಾನ್ಯರು ಹಣ ಮಾಡುವುದನ್ನು ಬಿಟ್ಟು ಬೇರೆ
ಏನಾದರು ಯೋಚಿಸುತ್ತಾರೆಯೆ? ಅಪರಿಚಿತ ಕತ್ತಲು
ಮಡಿಚಿಟ್ಟ ನಯವಾದ ಬಟ್ಟೆಗಳ ಮಡಿಕೆಗಳಲ್ಲಿ ಅಡಗಿ ಕುಳಿತಿದೆ.
ಕೊಳಚೆ ನೀರು ಗಟಾರುಗಳ ಮೂಲಕ ರಸ್ತೆಗಳ ಮೇಲೆ
ಹರಿಯುತ್ತಿದ್ದು ಕುಡಿಯುವ ನೀರನ್ನು ಹತ್ತಿರದ ಕೊಳಾಯಿಯಲ್ಲಿ
ಮುಖಗಳು ಇಡಿ ದಿನ ತುಂಬಿಕೊಳ್ಳುತ್ತಿವೆ.

ಗಾಯಕರ ಗುಂಪುಗಳು ಬೆಳಗಿನ ಜಾವ ಕೀರ್ತನೆಗಳನ್ನು
ಹಾಡುತ್ತ ಬರುತ್ತಿದ್ದವು. ಮನೆಗಳಿಂದ ಎದ್ದು ಬಂದ ಜನ
ಕೋಲುಗಳನ್ನು ಹಿಡಿದುಕೊಂಡು ಓಡಿಸಿಕೊಂಡು ಹೋದರು
ಗಾಯಕರನ್ನು: 'ಇದು ಜನರನ್ನು ಎಬ್ಬಿಸುವ ಸಮಯವೇ?'
ಎಂದು.

Tripuri: Kalyanbrata Chakraborti
English: Kalyanbrata Chakraborti)

೪೯ ಮಣಿರಂಗ್ ರಿಯಂಗ್

ಪರ್ವತ ಹೆಣ್ಣು, ಮಣಿರಂಗ್ ಈಗ ನಗ್ನಳಾಗಿದ್ದಾಳೆ
ಮರದ ತುತ್ತತುದಿಯ ಕೊಂಬೆಗೆ ನೇಣು ಹಾಕಿಕೊಂಡು.
ನಾಗರಿಕತೆಯ ಕ್ರೌರ್ಯದ ವ್ಯಾಖ್ಯಾನ; ಕತ್ತಲು ಮತ್ತು
ನಿಶ್ಯಬ್ದದೊಂದಿಗೆ ಆಮ್‌ಪುರ ಅರಣ್ಯದಲ್ಲಿ
ಪಿಸುಗುಟ್ಟುತ್ತಿದೆ ಗಾಳಿ. ತನ್ನವರು, ಬಲ್ಲವರು
ಯಾರೂ ಇಲ್ಲ ಅವಳಿಗೆ, *ಗಾವ್‌ಬುಡಾ
ಕುರುಡ ಮತ್ತು ಶಕ್ತಿ ಇಲ್ಲದವ; ಆಕೆಯ ಸಾವಿಗೆ
ಸಾಕ್ಷಿ ಎಂದರೆ ಮರಗಳು ಮತ್ತು ಹಕ್ಕಿಗಳು ಮಾತ್ರ,
ಹಗ್ಗ ಬಿಗಿದುಕೊಂಡಿರುವ ಗೋಣು,
ಉದ್ದವಾಗಿ ಚಾಚಿಕೊಂಡು ಕತ್ತರಿಸಿದ ನಾಲಿಗೆ-
ಕೊಂಬೆಯಲ್ಲಿ ನೇತಾಡುತ್ತಿರುವ ಮಣಿರಂಗ್‌ಳ
ದೇಹ ಆಗಾಗ ಕಂಪಿಸುತ್ತಿತ್ತು ಗಾಳಿಯಲ್ಲಿ.

ಕಳೆದ ಕೆಲವು ದಿನಗಳಿಂದ ಅವಳಿಗೆ ತಿನ್ನಲು
ಏನೂ ಇರಲಿಲ್ಲ, ಯುದ್ಧದಲ್ಲಿ ಮಗ್ನರಾದ ಮತಿಹೀನರು
ಬಂದೂಕುಗಳೊಂದಿಗೆ ಆಕೆಯನ್ನು ಕರೆದೊಯ್ದು ಅವರ
ತೊಡೆಗಳನ್ನು ತೂರಿಸಿದ್ದರು ಅವರ ತಾಯಂದಿರ
ರಕ್ತದೊಂದಿಗೆ. ಆಕೆಗೆ ಯಾವುದೇ ವಿಳಾಸವಿರಲಿಲ್ಲ,
ನಾಗರಿಕತೆಯಲ್ಲಿ ಎಲ್ಲವೂ ಸಾಧ್ಯ? ಹೌದು! ಎಲ್ಲವೂ
ಸಾಧ್ಯ ಈ ದಿನಗಳಲ್ಲಿ ಘನತೆವೆತ್ತ ನ್ಯಾಯಾಲಯಗಳಲ್ಲಿ.
ಈಗ ಎಲ್ಲವೂ ಜಾರಿಕೊಳ್ಳುತ್ತಿದೆ ಫ್ಯಾಶನ್ ನಡುಗೆಯ
ಕಡೆಗೆ, ಮಹಿಳೆಯ ಅಂಗಾಂಗಗಳ ಪ್ರದರ್ಶನ
ನಡೆಯುತ್ತಿದೆ. ಗಾಳಿ ಮತ್ತು ಹಕ್ಕಿಗಳು, ಪುಟ್ಟಗಿಡಗಳ
ಎಲೆಗಳು ಕೂಡ ಮರಗಳ ಜೊತೆಗೆ ನಿಶ್ಯಬ್ದಗೊಂಡಿವೆ;
ಮನುಷ್ಯ ಕಾಡಿನ ಒಳಗೆ ಹೋಗುತ್ತಿಲ್ಲ ಕೊಳೆತು
ಹೋಗುತ್ತೇನೆಂಬ ಭೀತಿಯಿಂದ, ಮಣಿರಂಗ್ ಮಾತ್ರ
ಹೋಗುತ್ತಾಳೆ; ನಾವು ಒಂದು ದಿನ ಹೋಗಲೇಬೇಕು,
ಎಷ್ಟು ದಿನ ಸುಮ್ಮನೆ ಇರುವಿರಿ.

* ಗಾವ್‌ಬುಡಾ: ಹಳ್ಳಿಯ ಹಿರಿಯ ಅಥವಾ ಮುಖ್ಯಸ್ಥ

Tripuri: Kalyanbrata Chakraborti,
English: Kalyanbrata Chakraborti

೫೦ ತಲೆಗಳ ಬೇಟೆಗಾರರು

ರುಂಡ ಚೆಂಡಾಡುವ ಬೇಟೆಗಾರನ ಮಗಳು
ಸುಂದರಿ ನಾಗಾ ಯುವತಿಯೊಬ್ಬಳು,
ಏಕಕಾಲದಲ್ಲಿ ಪ್ರೀತಿಸಿದರು ಇಬ್ಬರು ಧೀರ ಯುವಕರು
ಯಾರನ್ನು ವರಿಸಬೇಕೆನ್ನುವ ಆಶ್ಚರ್ಯ ಅವಳಿಗೆ!

ಇಬ್ಬರಲ್ಲಿ ಯಾರು ಶ್ರೇಷ್ಠರು ನನ್ನ ಮಗಳಿಗೆ
ಎಂದು ತೀರ್ಮಾನಿಸಲು ಬೇಟೆಗಾರನು–
ಮನುಷ್ಯರ ತಲೆಗಳನ್ನು ಬೇಟೆಯಾಡಿ ತನ್ನಿ
ಎಂದು ಆದೇಶಿಸಿದ ಇಬ್ಬರಿಗೂ

ಇಬ್ಬರೂ ಹೊರಟರು ತಲೆಗಳ ಬೇಟೆಗೆ
ಗಾಳಿಯಂತೆ ವೇಗವಾಗಿ ವಿರುದ್ಧ ದಿಕ್ಕಿನಲ್ಲಿ,
ಹುಡುಗಿಯ ಸೌಂದರ್ಯ ಹೃದಯದಲ್ಲಿ
ತುಂಬಿಕೊಂಡು ಸಾಹಸದ ಕೆಲಸಕ್ಕೆ–

ಪರ್ವತಗಳ ದಾಟಿ ಶತ್ರುಗಳ ನೆಲದಲ್ಲಿ
ಅನೇಕ ಹಗಲು ರಾತ್ರಿಗಳು ಕಳೆದವು,
ತಮ್ಮ ಕನಸುಗಳ ನೆಲದಲ್ಲಿ ಓಡಾಡಿದರು
ಶತ್ರುಗಳ ತಲೆಗಳನ್ನು ಉರುಳಿಸಲು

ತಮ್ಮ ಬೆನ್ನಿಗೆ ಕಟ್ಟಿಕೊಂಡು ಹೊತ್ತು
ತಂದಿದ್ದ ಆಹಾರ ಪೊಟ್ಟಣಗಳನ್ನು
ಹರಿಯುವ ನದಿ ದಡಗಳಲ್ಲಿ ಏಕಾಂತ ತಿಂದು
ಮುಗಿಸಿದ್ದರು ಹಸಿದ ಹುಲಿಗಳಂತೆ

ಬಹಳ ದಿನಗಳು ಕಳೆದ ಮೇಲೆ
ಹಿಂದಿರಿಗಿದರು ಅವರು ಆಶಾಭಾವನೆಯೊತ್ತು,
ಇಬ್ಬರು ಕೈಗಳಲ್ಲೂ ಇದ್ದವು ಒಂದೊಂದು
ರುಂಡ ಹೆಸರು ವಿಳಾಸ ಹೊತ್ತು–

ಒಬ್ಬನ ಕೈಯಲ್ಲಿ ಮುಖ್ಯಸ್ಥನ ಸೇವಕನ
ರುಂಡವಿದ್ದು ಕಣ್ಣಿಗೆ ಚೂಪಾದ ಕಡ್ಡಿ
ಚುಚ್ಚಲಾಗಿತ್ತು, ಇನ್ನೊಬ್ಬ ನಿದ್ದೆಯಿಲ್ಲದೆ ಬೇಟೆ
ಯಾಡಿ ತಂದಿದ್ದ ಹಳ್ಳಿಯ ಮುಖ್ಯಸ್ಥನ ರುಂಡವನ್ನೇ

ಹಳ್ಳಿಯ ಮುಖ್ಯಸ್ಥ ವೀರ ಬೇಟೆಗಾರನ ತಲೆಗಿಂತ
ಸೇವಕನ ತಲೆ ಕೆಳದರ್ಜೆಯಾಗಿ ತೋರಿ ನೆಲಕ್ಕೆಸೆದು
ತನ್ನ ತಂದೆ ತಲೆ ಬೇಟೆಯಾಡಿದ ಯುವಕನನ್ನು
ವರಿಸಿದಳು ಆ ನಾಗಾ ಸುಂದರಿ.

English: T. Penzu

೫೧ ಕೇಶರಾಶಿಯ ಮಹಿಳೆಯರು

ತಲೆಬೇಟೆಯ ಪುರಾಣ ಕಾಲದಲ್ಲಿ
ನೀಳ ಕೇಶರಾಶಿ ಮಹಿಳೆಯರ
ತಲೆ ಬೇಟೆಯಾಡಲು ಗುಡುಗು ಸಿಡಿಲಿನಂತೆ
ಎರಗುತ್ತಿದ್ದರು ತಲೆ ಬೇಟೆಗಾರರು.

ವೀರ ಬೇಟೆಗಾರರು ತಮ್ಮ ಕೀರಿಟಕ್ಕೆ,
ಎದೆ ಕವಚಕ್ಕೆ, ಬಿಲ್ಲು ಭರ್ಜಿಗಳಿಗೆ ಯಾವ
ಕನಿಕರವೂ ಇಲ್ಲದೆ ಧರಿಸುತ್ತಿದ್ದರು
ಬೇಟೆಯಾಡಿದ ಅವರ ಉದ್ದನೆ ಕೂದಲನ್ನು.

ನೀಳ ಕೇಶರಾಶಿ ಮಹಿಳೆಯರ
ರುಂಡಗಳನ್ನು ಪ್ರದರ್ಶಿಸುತ್ತಿದ್ದರು ವಿಶೇಷವಾಗಿ.
ಅವರಿಗೆ ಅದು ಹೆಮ್ಮೆಯ ವಿಷಯ
ಶತ್ರುಗಳಿಗೆ ನಡುಕ ಹುಟ್ಟಿಸುವ ಎಚ್ಚರಿಕೆ

ಪುರಾಣ ಕಾಲದಲ್ಲಿ ನೀಳಕೇಶವುಳ್ಳ
ಮಹಿಳೆಯರಿಗೆ ಹಳ್ಳಿಯಲ್ಲಿ ವಿಶೇಷ ಗೌರವ
ಮತ್ತು ಆದರ, ಅಶುಭ ನಿವಾರಿಸುವ ಶುಭ
ಸೂಚಕ, ಹಳ್ಳಿಯ ಫಲವತ್ತೆಯ ಸಂಕೇತ

ಆ ಮಹಿಳೆಯರ ಕೂದಲು
ಮೊಣಕಾಲದವರೆಗೂ ಇಳಿದಿದ್ದರೂ
ಕತ್ತರಿಸುವಂತಿಲ್ಲ, ಅದು ಅವರ ಫ್ಯಾಷನ್ ಅಲ್ಲ,
ನೈಜ ನೀಳ ಕೇಶರಾಶಿ ಅವರ ಸಂಪ್ರದಾಯ.

ಯಾವಾಗಲೂ ಭೀತಿಯಂದಲೇ ಇರುವರು
ನೀಳ ಕೂದಲ ಮಹಿಳೆಯರ ಪೋಷಕರು,
ಇವರು ಹೆಚ್ಚು ಕಾಲ ಬದುಕುವುದಿಲ್ಲ
ಎನ್ನುವ ಆತಂಕದಲ್ಲಿ; ಅವರ ತಲೆಗಳನ್ನು

ಬೇಟೆಯಾಡದೆ ಬಿಡಿವುದಿಲ್ಲವೆಂದು.
ನಾವು ಬೇಟೆಯಾಗುವೆವು ಎಂಬ ಭೀತಿಯಿದ್ದರೂ
ಆ ನೀಳ ಕೇಶರಾಶಿಯ ಸುಂದರಿಯರು–
ಅಪಾಯ ಮೆಟ್ಟಿ ನಿಲ್ಲುವ ಛಲದಿಂದ
ತೊಡಗಿಕೊಳ್ಳುವರು ದಿನನಿತ್ಯ ಕೆಲಸದಲ್ಲಿ.

ಆ ಮಹಿಳೆಯರು ಹಳ್ಳಿಯ ಸ್ವತ್ತು ಮತ್ತು
ಆಪತ್ತು ಕೂಡ, ಗಂಡಸರು ಸದಾ ಅವರ
ರಕ್ಷಣೆಯಲ್ಲಿ; ಆ ಧೀರರ ನಡುವೆ ಆ ಮಹಿಳೆಯರು
ಹೊಳೆಯುತ್ತಿದ್ದರು ಆಕಾಶದಲ್ಲಿನ ನಕ್ಷತ್ರಗಳಂತೆ–

ಆ ಮಹಿಳೆಯರು ಪುರಾಣ ಕಾಲದಲ್ಲಿ
ಹಳ್ಳಿಯ ವಿಸ್ಮಯ, ಬೇಟೆಗಾರರು ಅವರ
ತಲೆಗಳ ಬೇಟೆಯ ಆಸೂಯೆಯಲ್ಲಿದ್ದರೂ
ಓಡಾಡುತ್ತಿದ್ದರು ಅವರು ಅದಮ್ಯ ಉತ್ಸಾಹದಲ್ಲಿ.

ಓ! ಆ ಮಹಿಳೆಯರು ಶುಭ, ಅಶುಭ
ಸೂಚಕಗಳಂತೆ ಬದುಕಿದ್ದರು ಆಗ; ಈಗ
ಎಲ್ಲೂ ಕಾಣಿಸುವುದಿಲ್ಲ ಅವರು ಆದರೂ ಅವರ ಬಗೆಗಿನ
ಕತೆಗಳು ಮಾತ್ರ ಇಂದಿಗೂ ಕೇಳುತ್ತಲೆ ಇವೆ.

English: T. Penzu

೫೨ ಕೆಂಪು ಇರುವೆಯುಳ್ಳ ಹೃದಯ

ಒಬ್ಬ ವೀರ ನಾಗಾ ತಲೆ ಬೇಟೆಗಾರ
ಅವನು ನುಗ್ಗಿದರೆ ಸಿಡಿಲು ಗರ್ಜಿಸಿದಂತೆ,
ಅವನ ಹೆಸರೇ ನಡುಕ ಹುಟ್ಟಿಸುವಂತೆ–

ಶತ್ರುಗಳನ್ನು ಒಂಟಿಯಾಗಿ, ಗುಂಪುಗಳಲ್ಲಿ
ಸದೆ ಬಡಿದು ಸೋಲಿಸುತ್ತಿದ್ದ, ಅವನ ಶತ್ರುಗಳ
ಯೋಜನೆಗಳೆಲ್ಲ ಸೋಲು ಕಂಡು
ರಕ್ತ ಹರಿದು ಚೆಲ್ಲಾಡಿ ಕೋಡಿ ಹರಿದಿತ್ತು.

ಅವನ ರಕ್ಷಣೆಯಲ್ಲಿ ಆ ಹಳ್ಳಿ ಸದೃಢವಾಗಿ
ಸುರಕ್ಷಿತವಾಗಿತ್ತು, ಶತ್ರುಗಳು ದೂರದ
ಹಳ್ಳಿಗಳಿಂದ ಆಳುಗಳನ್ನು ಕರೆಸಿದ್ದರು ಸೇಡು
ತೀರಿಸಿಕೊಳ್ಳಲು, ಅವನ ತಲೆ ಬೇಟೆಯಾಡಲು.

ಒಂದು ದಿನ ಅವನು ಒಂಟಿಯಾಗಿರಲು
ಇಡೀ ಶತ್ರು ಹಳ್ಳಿ ಸುತ್ತುಗಟ್ಟಿ ಬಂಡೆ ಕಲ್ಲುಗಳ
ನಡುವೆ ನಿಲ್ಲಿಸಿಕೊಂಡು
ಅವನನ್ನು ನಿರಾಯುಧನನ್ನಾಗಿಸಿತು–

ಶತ್ರುಗಳು ಸಾಯಿಸಲಿಲ್ಲ ಒಂದೇ ಏಟಿಗೆ
ಅವನನ್ನು, ಸುತ್ತುಗಟ್ಟಿ ಹಿಡಿದುಕೊಂಡು
ಬಾಯಿಗೆ ಬಟ್ಟೆ ತುರುಕಿ, ದೇಹವೆಲ್ಲಾ
ಕಬ್ಬಿಣದಿಂದ ಸುಟ್ಟು ಹಿಂಸಿಸತೊಡಗಿತು–

ಕೊನೆಗೆ ಅವನನ್ನು ಕೊಂದು
ಹೃದಯವನ್ನು ಬಗೆದು ನೋಡಿದಾಗ
ಉಗ್ರ ಕೆಂಪು ಇರುವೆಯೊಂದು
ಗೂಡುಕಟ್ಟಿ ಕುಳಿತಿತ್ತು ಅವನ ಹೃದಯದಲ್ಲಿ.

ಆ ಕೆಂಪು ಇರುವೆ ನೋಡಿ-
ಶತ್ರುಗಳ ದೇಹಗಳು ನಡುಗಿದವು ಒಂದೇ ಸಮನೆ
ಭೀತಿಯಿಂದ, 'ನಮ್ಮ ಹಳ್ಳಿಗೆ ಕೇಡು ತಪ್ಪಿದ್ದಲ್ಲ
ನಿಜವಾಗಿ ಇವನು ಭೂತವೆ ಸರಿ' ಎಂದರು.

ಆ ಧೀರನ ಹಳ್ಳಿ ಅನಾಥವಾಗಿ ದುಃಖಗೊಂಡಿತು,
ಅವನ ಶತ್ರುಗಳ ತಲೆಗಳನ್ನು ಉರುಳಿಸಿ
ಸೇಡು ತೀರಿಸಿಕೊಂಡಿತು ಆ ಹಳ್ಳಿ;
ಶತ್ರುಗಳ ಹಳ್ಳಿ ಪಾಳು ಬಿದ್ದುಹೋಯಿತು.

English: T. Penzu

೫೩. ತಲೆ ಬೇಟೆಯ ಹಿನ್ನೆಲೆ

ಪೃಥ್ವಿಯ ಸೃಷ್ಟಿ ಕಾಲದಲ್ಲಿ
ಒಂಟಿ ಮರಹೊಂದಿತ್ತು; ಪಕ್ಷಿ
ಪ್ರಾಣಿಗಳು ಹಾರಾಡುತ್ತ ಅದರ
ಹಣ್ಣುಗಳನ್ನು ಕುಕ್ಕಿ ತಿನ್ನುತ್ತಿದ್ದವು.

ಒಂದು ದಿನ ಹಕ್ಕಿಯ ಕೊಕ್ಕಿನಿಂದ
ಜಾರಿಬಿದ್ದಿತು ಕೆಳಕ್ಕೆ ಹಣ್ಣೊಂದು,
ದೊಡ್ಡ ಗವುಳಿಯೊಂದು ಅಗಲ ಬಾಯಿ
ತೆರೆದು ನುಂಗಿಕೊಂಡಿತು ಹಣ್ಣನ್ನು.

(ಬೆಳ್ಳಿ ಕಿವಿಗಳ ಈ ಹಕ್ಕಿಗಳು ಗುಂಪಾಗಿ
ಹಾರಾಡುತ್ತಿದ್ದವು ಯಾವಾಗಲೂ, ಈ ಹಕ್ಕಿಗಳು
ದಕ್ಷಿಣ ಏಷಿಯಾ ನಿವಾಸಿಗಳು*
ಕಲರವ ಮಾಡುವ ಜಾಯಮಾನದವು)

ಹಕ್ಕಿ ಕೆಳಕ್ಕೆ ಇಳಿದು ಹಣ್ಣನ್ನು
ಹುಡುಕಿದಾಗ ಗವುಳಿ ಉತ್ತರಿಸಿತು: ಕೆಂಪು
ಇರುವೆ ಹಣ್ಣನ್ನು ತಿಂದುಬಿಟ್ಟಿತೆಂದು, ಕೆಂಪು
ಇರುವೆಯನ್ನು ಕೇಳಿದಾಗ ಅದು ಇಲ್ಲವೆಂದಿತು–

ಆ ಗವುಳಿ ಮತ್ತು ಕೆಂಪು ಇರುವೆಯ
ನಡುವೆ ಉಗ್ರಯುದ್ಧ ನಡೆಯಿತು, ಕೆಂಪು
ಇರುವೆಗಳು ಗವುಳಿಯ ಕತ್ತು ಕತ್ತರಿಸಿ
ಅದರ ಸುತ್ತಲೂ ನೃತ್ಯಮಾಡುತ್ತ ಹಾಡಿದವು.

ಸುತ್ತಲಿದ್ದ ನಾಗಾಗಳು ನಿಂತು ನೋಡಿದರು ಆ
ಭೀಕರ ಯುದ್ಧವನ್ನು, ಶತ್ರುಗಳ ಕತ್ತು ಹಾರಿಸುವ
ಕಲೆಯನ್ನು; ಅಲ್ಲಿಂದಲೇ ಅವರು ಅನುಸರಿಸಿದರು
ತಲೆ ಬೇಟೆಯಾಡುವ ಕಲೆಯನ್ನು.

ಯುದ್ಧದಲ್ಲಿ ತಲೆಗಳನ್ನು ಗೆದ್ದು ಗೌರವ
ಪಡೆದರು, ಅದು ಅವರ ಪದ್ಧತಿಯಾಯಿತು.
ತಲೆಗಳನ್ನು ಬೇಟೆಯಾಡುತ್ತ ಆಡುತ್ತ ಲೆಕ್ಕಹಾಕುತ್ತ
ಶತಮಾನಗಳು ಸಾಗಿ ಬಂದರು.

ತಲೆ ಬೇಟೆ ತರದ ಸೋಲುಗಾರರಿಗೆ
ಪರಲೋಕದಲ್ಲೂ ತೇಜೋಭಂಗ ತಪ್ಪುವುದಿಲ್ಲ,
ಓ! ಈ ಕ್ರೂರ ಆಟದಲ್ಲಿ ಬದುಕು ಸಾವಿನ ಜೊತೆಗೆ
ಶೌರ್ಯ ಮತ್ತು ಭೀಕರತೆ ಕೂಡ ಅಡಿಗಿದೆ.

* ಇವರೆಲ್ಲ ದಕ್ಷಿಣ ಏಷಿಯಾ ಮೂಲದವರು

English: T. Penzu

೫೪ ತಲೆ ಬುರುಡೆಗಳ ಮರ

ಭಾಗ–೧

ನುಣುಪಾದ ಮುಳ್ಳುಗಳ ಮರವೊಂದು
ಎತ್ತರವಾಗಿ ನಿಂತಿದೆ ಹಳ್ಳಿಯ ಮಧ್ಯದಲ್ಲಿ,
ಶತ್ರುಗಳ ತಲೆ ಬುರುಡೆಗಳನ್ನು ನೇತುಹಾಕಿರುವರು
ಅದಕ್ಕೆ ನಾಗಾ ಬುಡುಕಟ್ಟು ಜನರು.

ಮರದಲ್ಲಿ ಶತ್ರುಗಳ ಕೈಕಾಲುಗಳು ನೇತಾಡುತ್ತಿದ್ದು
ನೋಡಲು ಭೀಕರವಾಗಿ ಕಾಣುತ್ತಿತ್ತು, ಇಡೀ ಮರ
ಬಿರುಗಾಳಿಯಿಂದ ದೆವ್ವದಂತೆ ಜೋಲಾಡುತ್ತಿತ್ತು
ಬುರಡೆ ಕೈಕಾಲುಗಳ ನೇತುಹಾಕಿಕೊಂಡು–

ಆ ಸ್ಥಳ ಮೂಢನಂಬಿಕೆಗಳ ತಾಣವಾಗಿ
ಜನರು ಪೂಜಿಸುತ್ತಿದ್ದರು ಆ ಮರವನ್ನು,
ಹೊಸದಾಗಿ ಹಸಿ ತಲೆಗಳು ಬಂದಾಗ ಜನರು
ಅದರ ಸುತ್ತಲೂ ಹಾಡುತ್ತ ನೃತ್ಯ ಮಾಡುತ್ತಿದ್ದರು.

ಪ್ರತಿ ನಾಗಾ ಹಳ್ಳಿಯಲ್ಲೂ ಶಿಖರದ ಮೇಲೆ
ಅಂತಹ ಮರ ಎತ್ತರವಾಗಿ ನಿಂತು,
ತಲೆಬುರುಡೆಗಳನ್ನು ಪ್ರದರ್ಶಿಸಿತ್ತು ಹೆಮ್ಮೆಯಿಂದ;
ಹಳ್ಳಿ ಹೊಗಳುತ್ತಿತ್ತು ತಲೆ ಬೇಟೆಗಾರರನ್ನು.

ಶತ್ರುಗಳ ಬುರುಡೆಗಳನ್ನು ಎತ್ತರದಲ್ಲಿ
ಪ್ರದರ್ಶಿಸುತ್ತಿತ್ತು ಆ ಮರ, ಕೆಲವು ಹಸಿ ಮಾಂಸ,
ಕೆಲವು ಒಣಗಿರುವ ಬುರುಡೆ ಕೈಕಾಲುಗಳು, ಮರದ ತುಂಬಾ
ಶತ್ರುಗಳಿಗೆ ಸೇರಿದ ಕಣ್ಣು ಚುಚ್ಚಿದ ಕುರುಡು ದೆವ್ವಗಳು.

ಆ ಮರ ಹಂದಿ–ಕೊಂಬೆಗಳ
Moder ಹೆಸರಿನ ಮರ, ಸಸ್ಯಶಾಸ್ತ್ರದ ಪ್ರಕಾರ
ನಲವತ್ತು ಅಡಿ ಎತ್ತರ ಬೆಳೆಯುವ
Erythrina Indica.

ಆ ಮರದ ವಿಶೇಷವೆಂದರೆ:
ಕ್ರಿಮಿ ಕೀಟಗಳು ಹತ್ತಿರಕ್ಕೂ ಬರುವುದಿಲ್ಲ,
Erythrina Indica ಒಂದು ವೈಜ್ಞಾನಿಕ ವಿಶೇಷ;
ಅದಕ್ಕೆ ಶತ್ರುಗಳ ಬುರುಡೆಗಳ ತಾಣವದು–
ಈ ಮರದ ಮೇಲಿನ ಹಸಿ ಕೈಕಾಲು ತಲೆಗಳು
ಕೊಳೆತು ನಾರುವುದಿಲ್ಲ, ವಾಸನೆಯೂ ಬರುವುದಿಲ್ಲ,
ಆದರೆ ಗಾಳಿ ಬೆಳಕಿಗೆ ಒಣಗಿ ಎಲ್ಲಾ ತಲೆಗಳೂ
ಉಳಿದುಕೊಳ್ಳುತ್ತವೆ ಗಟ್ಟಿ ಬುರುಡೆಗಳಾಗಿ.

ವಸಂತ ಕಾಲದಲ್ಲಿ ಮಳೆ, ಬಿರುಗಾಳಿಯಲ್ಲಿ
ರಕ್ತ ಕುಡಿದಂತೆ ಕೆಂಪು ಹೂವುಗಳು ಅರಳುತ್ತವೆ,
ಜನರು ಮಾತ್ರ ಅದರ ಕೆಳಗೆ ನುಸುಳುವುದಿಲ್ಲ
ಘನಘೋರ ಮುಳ್ಳುಗಳ ಹೆದರಿಕೆಯಿಂದ.

ಮಾಂಸ ತಿನ್ನುಲು ಪ್ರಾಣಿಗಳು ಏರಿಹೋಗದಂತೆ
ಮುಳ್ಳುಗಳು ರಕ್ಷಿಸುತ್ತವೆ ಹಸಿ ತಲೆಗಳನ್ನು;
ಇದೆಲ್ಲ ಸತ್ಯ ಕತೆಯೇ ಹೊರತು
ಕಟ್ಟಿದ ಕತೆಯೂ ಅಲ್ಲ ಕಟ್ಟು ಕತೆಯೂ ಅಲ್ಲ.

ಈ Moder ಮರಗಳು
ಗುಂಪಾಗಿ ಎತ್ತರಕ್ಕೆ ಎಲ್ಲೆಲ್ಲೂ ಕಾಣಿಸುತ್ತವೆ ಈಗಲೂ
ಕಣಿವೆ ಪರ್ವತಗಳ ಮೇಲೆ ಆದರೆ ಬುರುಡೆಗಳ
ನೇತುಹಾಕಲು ಯಾರೂ ಉಪಯೋಗಿಸುವುದಿಲ್ಲ ಈಗ.

ಅಂತಹ ಮರವನ್ನು ಕನಸಿನಲ್ಲಿ ಮಾತ್ರ
ನೋಡಬಹುದು, ಅಪಶಕುನದ ಚಿಹ್ನೆಯಂತೆ,
ಬೇಟೆಗಾರರು ಶತ್ರುಗಳ ತಲೆಗಳನ್ನು ಕಣ್ಣುಗಳ
ಮುಂದೆಯೇ ತೆಗೆದುಕೊಂಡು ಹೋಗುವಂತೆ.

ಕೆಲವರು ತಲೆಬುರುಡೆ, ಕಿವಿಗಳಿಗೆ ಪುಷ್ಪ,
ಹತ್ತಿ ಉರುಳೆ ಇಟ್ಟು, ಹಾಸ್ಯ ಮಾಡುತ್ತ
ಶತ್ರುಗಳ ಕುರೂಪಿ ಮಾಡಿ ಅವರ
ಶಕ್ತಿಯನ್ನು ಕೆಳಗುಂದಿಸುತ್ತಿದ್ದರು.

ಸತ್ತ ಧೀರರ ಶೌರ್ಯ ಕತೆಗಳು ಎಣಿಕೆಯಿಲ್ಲದಷ್ಟು,
ಹೊಚ್ಚಹೊಸ ಹಸಿ ಬುರುಡೆಗಳ ಬೇಟೆಯಾಡಿ ತಂದು
ಶತ್ರುಗಳ ಹಳ್ಳಿಗಳಲ್ಲಿ ಒಣಗಲು ನೇತುಹಾಕಿದರೆ–
ಅವುಗಳ ಸ್ವಂತ ಹಳ್ಳಿಗಳಲ್ಲಿ ಮೌನ ಆವರಿಸುತ್ತಿತ್ತು.

ಆ ಭೀಕರ ಮರಗಳಿದ್ದ ಸ್ಥಳಗಳೆಲ್ಲ
ಇಂದು ಹಳೆ ನೆನಪುಗಳಾಗಿ
ಶಾಂತಿ ಮತ್ತು ಶಿಸ್ತು ಸ್ಥಾಪಿಸಲು ಕಾಲುಕಟ್ಟಿ ನಿಂತಿವೆ
ಕ್ರೈಸ್ತ ಚರ್ಚುಗಳು ಮತ್ತು ಶಾಂತಧೂತರು.

ಭಾಗ–೨

ಮೆರಂಗ್ಕೊಂಗ್ ನಾನು ಹುಟ್ಟಿದ ನಾಗಾ ಹಳ್ಳಿ
ಪರ್ವತದ ತುತ್ತತುದಿಯಲ್ಲಿ ನೆಲೆಸಿರುವ ದೊಡ್ಡಹಳ್ಳಿ
ಆ ನನ್ನ ಹಳ್ಳಿಯೇ ನನ್ನ ಹಿನ್ನೆಲೆ,
ಸಾಂಸ್ಕೃತಿಕ ಮತ್ತು ಜಾನಪದ ಲೋಕ.

ಆಓ ಭಾಷೆಯಲ್ಲಿ Mangko-torong ಎಂದರೆ
ಮರದ ಸುತ್ತಲಿನ ವಿಶಾಲ ಪ್ರದೇಶ,
ಆ ಬುರುಡೆಗಳೊತ್ತ ಮರದ ನೋಟ ಶತ್ರುಗಳಿಗೆ
ಆಘಾತ ತರವು ವಿಷಯ–

ಇದೇ ಘೋರ ಮರ ನಿಂತಿರುವ ಸ್ಥಳದಲ್ಲಿ
ಈ ಪರ್ವತದಲ್ಲಿ ದೇವ ಪ್ರವಚನ ನೀಡಲು ಬಂದ
Longjanglepzuk ಹೆಸರಿನ ಮೊದಲ
ನಾಗಾ ಕ್ರೈಸ್ತನನ್ನು ಇಲ್ಲೇ ಬಲಿಕೊಡಲಾಯಿತು.

ಈ ಹಳ್ಳಿಗೆ ಬಂದ ಮೊದಲ ಪಾದ್ರಿ
ಗೋಡುಲ್ ಬ್ರೌನ್ ಜೀವನ ನಡೆಸಿದ್ದು ಇಲ್ಲೇ,
ಒಬ್ಬ ಅಸ್ಸಾಮಿ ಕ್ರೈಸ್ತ ಭೋಧಕ ನಿರಂತರವಾಗಿ
ಶಾಂತಿ ಮಂತ್ರ ಭೋಧಿಸಿದ್ದು ಇಲ್ಲೇ–

ಪಾದ್ರಿಯಾಗಿ ಹದಿಮೂರು ವರ್ಷಕಾಲ
ಮೆರಂಗ್ಕೊಂಗ್‌ನಲ್ಲಿ ನೆಲೆ ನಿಂತು,
ಅಂತಹ ಘನಘೋರ ತಲೆಬೇಟೆಯ ಕಾಲದಲ್ಲಿ
ಧೈರ್ಯವಾಗಿ ಭೋಧಿಸಿದ್ದ ಆ ಪಾದ್ರಿ.

ತಲೆ ಬುರುಡೆ ಹಾರಗಳೊತ್ತ ಮರವನ್ನು
ದಿನನಿತ್ಯ ನೋಡುತ್ತ ಅಲ್ಲಿ ಒಂದು ದೊಡ್ಡ ಚರ್ಚ್
ಕಟ್ಟುವ ಕನಸು ಕಂಡ, ಕ್ರೈಸ್ತನಲ್ಲಿ ಕಣ್ಣೀರು
ಹರಿಯುವುದು ನಿಲ್ಲಿಸಬೇಕೆಂದು ದಿನನಿತ್ಯ ಕೇಳಿಕೊಂಡ.

ಹೊಸ ತಲೆಗಳು, ಹಸಿ ತಲೆಗಳು ಬಂದಾಗೆಲ್ಲ
ಅಲ್ಲಿ ಎತ್ತರದ ಶಿಲಾ ಪರ್ವತಗಳ ಮೇಲೆ
ಗಂಡು ಹೆಣ್ಣೆನ್ನದೆ ಜನರು ಗುಂಪುಕೂಡಿ
ಹಾಡುತ್ತ ನೃತ್ಯ ಮಾಡುತ್ತಿದ್ದರು.

ಆ ಬೀಭತ್ಸ ಮರದ ಹಳೆ ಬೊಡ್ಡೆಯಿಂದ
ಒಂದು ಸಣ್ಣ ಟಿಸಿಲು ಹೊಡೆದು ಹೊಸದೊಂದು
ಮರ ಬೆಳೆಯುತ್ತಿತ್ತು, ಅದರ ಕಾಂಡ ನೋಡಲು
ಅಘಾತ ಹುಟ್ಟುಸುತ್ತಿತ್ತು.

ಆ ಹಳೆ ತಲೆಬುರುಡೆಗಳ ಮರ ಮುದಿಯಾಗಿ
ಒಣಗಿ ಹೋಗುವುದರಲ್ಲಿ ಪಕ್ಕದಲ್ಲಿಯೇ
ಹೊಸ ಮರ ದಟ್ಟವಾಗಿ, ಎಲೆಗಳು ಹಸಿರಾಗಿ,
ಇನ್ನಷ್ಟು ಸಮೃದ್ಧವಾಗಿ ಅಲ್ಲೇ ಬೆಳೆದುನಿಂತಿತ್ತು.

ನಾವು ಬೆಳೆದುನಿಂತ ಮೇಲೆ ತಿಳಿಯಿತು,
ಅದು ಹಳೆ ಮರದಿಂದ ಹೊಡೆದ ಟಿಸಿಲೆಂದು-
ಅದೂ ಕೂಡ ಎತ್ತರವಾಗಿ ಬೆಳೆದುನಿಂತು
ಭೀಕರವಾಗಿ ಕಾಣಿಸುತ್ತಿತ್ತು.

ಹಲವು ಬಾರಿ ಸಿಡಿಲು ಬಡಿದು ಆ ಮರಕ್ಕೆ,
ಅದರ ಕೊಂಬೆಗಳು ಒಂದೊಂದಾಗಿ
ಒಣಗಿಹೋದವು, ಒಂದು ದಿನ ಆ ಮರವೂ
ಸತ್ತುಹೋಯಿತು ಜನರ ನಿರ್ಲಕ್ಷ್ಯೆಯಿಂದ.

ಆಧುನಿಕ ಕ್ರೈಸ್ತರ ಕಾಲದಲ್ಲಿ
ಆ ಗುಡ್ಡವನ್ನು ಸಮತಟ್ಟಾಗಿಸಿದರು,
ತಲೆಬುರುಡೆಗಳು ನೇತಾಡುತ್ತಿದ್ದ ಸ್ಥಳದಲ್ಲಿ
ಎದ್ದು ನಿಂತಿತು ಆಕಾಶ ಚುಂಬಿಸುವ ಚರ್ಚು

English: T. Penzu

ಲೇಖಕರ ಪರಿಚಯ

ಡಾ.ಎಂ. ವೆಂಕಟಸ್ವಾಮಿ ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕಿನ ಬ್ಯಾಟರಾಯನಹಳ್ಳಿಯಲ್ಲಿ ೦೬.೧೧.೧೯೫೫ರಲ್ಲಿ ಜನಿಸಿದರು. ಇವರು ಪ್ರಪಂಚ ಪ್ರಖ್ಯಾತ ಕೋಲಾರ ಚಿನ್ನದ ಗಣಿಗಳ 'ಲಿಟ್ಲ್ ಇಂಗ್ಲೆಂಡ್, ಖ್ಯಾತಿ ಮತ್ತು ಚಿನ್ನದ ಗಣಿಗಳ ಕಾರ್ಮಿಕರ ಭವಣೆಗಳನ್ನು ಹತ್ತಿರದಿಂದ ನೋಡಿದವರು. ಕೆ.ಜಿ.ಎಫ್ ಪ್ರ.ದ.ಕಾ.ನಲ್ಲಿ ಬಿಎಸ್ಸಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ (ಭೂವಿಜ್ಞಾನದಲ್ಲಿ)ಎಂಎಸ್ಸಿ ಮುಗಿಸಿ ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಗೆ (ಜಿ.ಎಸ್.ಐ) ಸೇರಿ ಭಾರತದಾದ್ಯಂತ ಓಡಾಡಿ ಅಪಾರ ಅನುಭವ ಪಡೆದಿದ್ದಾರೆ. ಕೋಲಾರದ ಚಿನ್ನದ ಗಣಿಗಳು' ಸಂಶೋಧಿಸಿ ಜಿ ಹಂಪಿ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ದೊರಕಿದೆ.

೧೯೯೨ರವರೆಗೆ ನಾಗಾಲ್ಯಾಂಡ್‌ನಲ್ಲಿ ಅನಂತರ ೨೦೦೭-೨೦೦೯ರವರೆಗೂ ಮೇಘಾಲಯ ರಾಜ್ಯಗಳಲ್ಲಿ ಭೂವಿಜ್ಞಾನ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

ಚೀನಾ ದೇಶದಲ್ಲಿ ಒಂದು ತಿಂಗಳ ಕಾಲ (೨೦೦೪ರಲ್ಲಿ) ಭೂರಾಸಾಯನಿಕ ತಂತ್ರಜ್ಞಾನದಲ್ಲಿ ತರಬೇತಿ ಪಡೆದು ಬಂದಿದ್ದಾರೆ. ಇದೇ ಹಿನ್ನೆಲೆಯಲ್ಲಿ ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಪ್ರವಾಸ ಕಥನ) ಕೃತಿಯನ್ನು ಜಾಗೃತಿ ಪ್ರಿಂಟರ್ಸ್ ಪ್ರಕಟಿಸಿದೆ. ಒಂದು ದಶಕಕ್ಕಿಂತ ಹೆಚ್ಚು ಕಾಲ ಉತ್ತರ ಮತ್ತು ಈಶಾನ್ಯ ಭಾರತದಲ್ಲಿ ಕೆಲಸ ನಿರ್ವಹಿಸಿದ ಅನುಭವಗಳ ಆಧಾರದ ಮೇಲೆ 'ಅಲೆಮಾರಿಯ ಹೆಜ್ಜೆಗಲು ಪ್ರವಾಸ ಕಥೆನವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿ ಅಪಾರ ಮೆಚ್ಚಿಗೆ ಪಡೆದಿದೆ (೨೦೦೧). ನವಕರ್ನಾಟಕ ಪಬ್ಲಿಕೇಷನ್, 'ಅಸ್ಪೃಶ್ಯರು'(ಒಂದು ವಿಶ್ಲೇಷಣೆ) ಎಂಬ ಸಂಶೋಧನಾ, 'ಏಳು ಪರ್ವತಗಳು ಒಂದು ನದಿ' (ಅನುಭವದ ಕಥನ) ಮತ್ತು 'ಈಶಾನ್ಯ ಭಾರತದ ಆಧುನಿಕ ಮತ್ತು ಐತಿಹ್ಯ ಕಥೆಗಳನ್ನು ಪ್ರಕಟಿಸಿದೆ.'

ಕನ್ನಡದ ಹೆಸರಾಂತ ಪತ್ರಿಕೆಗಳಲ್ಲಿ ಇವರ ಹಲವಾರು ಕತೆ, ಕವನ, ಕಾದಂಬರಿ, ವೈಚಾರಿಕ, ವಿಮರ್ಶೆ ಮತ್ತು ವಿಜ್ಞಾನ ಲೇಖನಗಳು ಪ್ರಕಟವಾಗಿವೆ. ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳನ್ನು ಬಲ್ಲವರಾಗಿದ್ದಾರೆ.

ಸಾಹಿತ್ಯ ಚಟುವಟಿಕೆಗಳು

ಕವನ ಸಂಕಲನ:

೧. ಬೆಟ್ಟಗುಡ್ಡಗಳ ಬೋಗುಣಿಯಲ್ಲಿ

ಕಥಾ ಸಂಕಲನ

೨. ಈಶಾನ್ಯ ಭಾರತದ ಆಧುನಿಕ ಮತ್ತು ಐತಿಹ್ಯ ಕಥೆಗಳು

ವಿಮರ್ಶೆ:

೩. ಓದುವ ಹಾದಿಯಲ್ಲಿ

ಪ್ರವಾಸ ಕಥನ:

೪. ಅಲೆಮಾರಿಯ ಹೆಜ್ಜೆಗಳು (ಕ.ಪು.ಪ್ರಾ)

೫. ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಚೀನಾ ಪ್ರವಾಸ ಕಥನ)

೬. ಏಳು ಪರ್ವತಗಳು ಒಂದು ನದಿ

ವೈಚಾರಿಕ:

೭. ಅಸ್ಪೃಶ್ಯರು (ಒಂದು ಪರಿಶೀಲನೆ), ನವಕರ್ನಾಟಕ ಪಬ್ಲಿಕೇಷನ್ಸ್

ಕಾದಂಬರಿಗಳು

೮. ಚಂದ್ರನಿಲ್ಲದ ಆಕಾಶ

೯. ಇನ್ನಿಲ್ಲದ ಪ್ರೀತಿ

೧೦. ಭೂಮಿ ತೂಕದ ಹುಡುಗ

ವಿಜ್ಞಾನ

೧೧. ಸರ್ ಚಾರ್ಲ್ಸ್ ಲಯಲ್ (ಕ.ಪು.ಪ್ರಾ)

೧೨. ಭೂಮಿ ಗುಡುಗಿದಾಗ (ಭೂಕಂಪನಗಳು)

೧೩. ನಮ್ಮ ಹಿಮಾಲಯ

೧೪. ಚಂಡಮಾರುತ

೧೫. ಮಾನವ ಮೆದುಳೆಂಬ ಮಹಾ ಅದ್ಭುತ

೧೬. ಸುನಾಮಿ ಸುತ್ತ (ಕ.ಸಾ.ಪ)

೧೭. ಪೃಥ್ವಿಯ ಯಶೋಗಾಥೆ

* ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಖನಿಜ ನಕ್ಷೆಗಳನ್ನು ಅದಕ್ಕೆ ಸಂಬಂಧಪಟ್ಟ ಪಠ್ಯವನ್ನು ತಯಾರಿಸಿದ್ದಾರೆ.

ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ ಪ್ರಕಟಗೊಂಡ ಕಾದಂಬರಿಗಳು ಮತ್ತು ಪ್ರವಾಸ ಕಥನಗಳು

ರೂಪರಾಶಿಯರು (ಕನ್ನಡಪ್ರಭ)

ಮೂಡಲ ಮರೆಯಲ್ಲಿ (ಕನ್ನಡಪ್ರಭ)

ಬೆಂಗಳೂರು – ವೈ೨ಕೆ೫೦ (ವೈಜ್ಞಾನಿಕ ಕಾದಂಬರಿ) (ಕನ್ನಡಪ್ರಭ)

ನೀ ನಡೆವ ದಾರಿಯಲ್ಲಿ (ಉದಯವಾಣಿ)

ಅಲೆಮಾರಿಯ ಹೆಜ್ಜೆಗಳು, ಕೆಲವು ಭಾಗಗಳು (ಹೊಸತು ಮಾಸ ಪತ್ರಿಕೆ)

ಡ್ರ್ಯಾಗನ್ಸ್ ಮಹಾಗೋಡೆಯೊಳಗೆ (ಅಗ್ನಿ ವಾರಪತ್ರಿಕೆ)/ಕೆಲವು ಭಾಗಗಳು (ಸುಧಾ ವಾರ ಪತ್ರಿಕೆ)

Address:
Dr. M. Venkataswamy
#519, 39th Block, Type-V,
CPWD Qtrs, HSR Layout,
Bangalore - 560 102.
Ph: 080-22584525
Email: alemarimvs@gmail.com



ಈಶಾನ್ಯ ಭಾರತದ ಕವಿತೆಗಳು

ವೆಂಕಟಸ್ವಾಮಿಯವರು ವಿಜ್ಞಾನ ಕ್ಷೇತ್ರದಲ್ಲಿ ತೊಡಗಿಕೊಂಡಷ್ಟೇ ತೀವ್ರವಾಗಿ ಸಾಹಿತ್ಯ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಶಾನ್ಯ ಭಾರತದಲ್ಲಿ ಅವರು ಸೇವೆಸಲ್ಲಿಸುತ್ತಿದ್ದಾಗ ಅಲ್ಲಿಯ ಬುಡಕಟ್ಟು ಜನರ ಜೀವನ ವಿಧಾನದ ಬಗ್ಗೆ ಅತೀವ ಪ್ರೀತಿ ಕಾಳಜಿ ವಹಿಸಿ ಅಧ್ಯಯನ ಮಾಡಿದ್ದಾರೆ. ಆ ಬಗ್ಗೆ ಗದ್ಯ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಅವರು ಮೂಲತಃ ಕವಿ ಪ್ರಜ್ಞೆಯ ಅಧಿಕಾರಿ. ಈಶಾನ್ಯ ಭಾರತದಲ್ಲಿರುವ ಎಲ್ಲ ಬುಡಕಟ್ಟು ಭಾಷೆಗಳ ಪ್ರಮುಖ ಕವಿಗಳ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕವನಗಳನ್ನು ಓದುತ್ತಿದ್ದರೆ ಆ ನೆಲದ ಬದುಕಿನಲ್ಲಿ ಈಗ ಎದ್ದಿರುವ ಎಲ್ಲ ಬಗೆಯ ತವಕ ತಲ್ಲಣಗಳನ್ನು ಕೇಳುತ್ತೇವೆ. ಆ ಸವಾಲು ಸಮಸ್ಯೆಗಳ ಒಳಸುಳಿಗಳಿಂದ ಬಿಡಿಸಿಕೊಂಡು ಹೊಸ ಬಗೆಯ ಬದುಕಿಗೆ ನಿರೀಕ್ಷೆಯ ನೋಟ ಬೀರಿರುವ ಹೊಸ ದನಿಗಳನ್ನು ಕೇಳುತ್ತೇವೆ. ಆ ನೆಲದಲ್ಲಿ ಬದುಕುವಾಗ ಡಾ. ಎಂ. ವೆಂಕಟಸ್ವಾಮಿಯವರ ಎಚ್ಚರ ಪ್ರಜ್ಞೆಯ ಚಿಂತನಶೀಲ ಗುಣ ನೆಲದ ದನಿಗೆ ಮಿಡಿದಿದೆ. ಆ ಜಗತ್ತಿನ ಪರಿಚಯವನ್ನು ಕನ್ನಡ ಜಗತ್ತಿಗೆ ಮಾಡಿಸುವ ಹಂಬಲದಲ್ಲಿ ಅಲ್ಲಿನ ಸಂವೇದನೆಯನ್ನು ಅನುವಾದಿಸುವ ಪ್ರೀತಿ ತೋರಿದೆ. ಹೀಗೆ ಅವರು ಕೇವಲ ಸಂಬಳದ ಸೇವೆ ನಿರ್ವಹಿಸುವ ಅಧಿಕಾರಿಯಾಗದೆ ನೆಲದ ದನಿಗೆ ಕಿವಿ ಕಣ್ಣು ಹೃದಯ ತೆರೆದ ಕವಿಯಾಗಿ ಸಾಂಸ್ಕೃತಿಕ ರಾಯಭಾರಿಯಂತೆ ಹೊಣೆಯರಿತು ನಡೆದವರಾಗಿದ್ದಾರೆ.

ಎಸ್.ಜಿ.ಸಿದ್ಧರಾಮಯ್ಯ

ಪ್ರೇಜಸ ಪ್ರಕಾಶನ